ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


Swabhimani Sahakari

Pages - 36, 12

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 12
December- 2018


## ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ 65ನೇ ಸಹಕಾರ ಸಪ್ತಾಹ ಸಮಾರೋಪ ಕಾರ್ಯಕ್ರಮ

## ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿಗೆ ಸರಕಾರ ಬದ್ಧ : ಆದಾಯ ತೆರಿಗೆ ತೊಂದರೆ ನಿವಾರಣೆಗೆ ಹಿರಿಯರ ನೇತೃತ್ವದಲ್ಲಿ ಕೇಂದ್ರಕ್ಕೆ ನಿಯೋಗ : ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರ



ಸಮಾರೋಪ ಕಾರ್ಯಕ್ರಮದ ಉದ್ಘಾಟನೆ



1997ರ ಸೌಹಾರ್ದ ಕಾಯ್ದೆ ತಿದ್ದುಪಡಿಗೆ ಮನವಿ ಸಲ್ಲಿಕೆ



1959ರ ಕಾಯ್ದೆ ತಿದ್ದುಪಡಿಗೆ ಮನವಿ ಸಲ್ಲಿಕೆ



ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಬಿಡುಗಡೆ

ಜನವರಿ 1 ರಿಂದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮ (ದೂರ ಶಿಕ್ಷಣ) ಪ್ರಾರಂಭ




ಜನವರಿ 1 ಸೌಹಾರ್ದ ಸಹಕಾರಿ ದಿನಾಚರಣೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 4456

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1190



ಬಿ.ಹೆಚ್. ಕೃಷ್ಣಾರೆಡ್ಡಿ

**65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಮಾನ್ಯ ಸಹಕಾರ ಸಚಿವರಿಗೆ ಮನವಿ ಸಲ್ಲಿಸಿ ಎರಡು ಕಾಯ್ದೆಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡುವುದು ಅಗತ್ಯ ಇದೆ ಎಂದು ವಿನಂತಿಸಿದಾಗ ಮಾನ್ಯ ಸಹಕಾರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಶೀಘ್ರದಲ್ಲಿ ಅಧಿಕಾರಿಗಳ ಹಾಗೂ ಸಹಕಾರಿಗಳ ಸಭೆ ಕರೆದು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.**

# ಆದಾಯತೆರಿಗೆ ಬಾಧಿತ ಸಹಕಾರಿ ಸಂಸ್ಥೆಗಳ ಹಾಗೂ ಪ್ರಮುಖ ಸಹಕಾರಿ ನಾಯಕರ ಸಭೆ ಏರ್ಪಾಡು : ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ರಾಜ್ಯದ ಶಾಸಕರಿಂದ ಮುಖ್ಯ ಮಂತ್ರಿಗಳಿಗೆ ಪತ್ರ ಕಳುಹಿಸುವ ಕ್ರಮ – ಸಹಕಾರಕ್ಕೆ ಮನವಿ

**ಆತ್ಮೀಯ ಸಹಕಾರಿ ಬಂಧುಗಳೇ,**

ಎಲ್ಲ ಸಹಕಾರಿ ಬಂಧುಗಳಿಗೆ ನಮಸ್ಕಾರಗಳು. ವಿಶೇಷವಾಗಿ ಕ್ರಿಶ್ಚಿಯನ್ ಬಂಧುಗಳಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. ವರ್ಷ 2018 ಕ್ಕೆ ವಿದಾಯ ಹೇಳಲಿದ್ದೇವೆ. ವರ್ಷ 2019 ಕ್ಕೆ ಸ್ವಾಗತ ಕೋರಲಿದ್ದೇವೆ. ಈ ಪರ್ವಕಾಲದಲ್ಲಿ ಸೌಹಾರ್ದ ಸಹಕಾರಿಗಳು ಅನೇಕ ಶಾಸನಾತ್ಮಕ, ಆಡಳಿತಾತ್ಮಕ ಸಮಸ್ಯೆಗಳಿದ್ದಾಗ್ಯೂ ಎದೆಗುಂದದೆ ಧೈರ್ಯದಿಂದ ಉತ್ಸಾಹದಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಬಂದಿರುವುದು ಶ್ಲಾಘನೀಯ. ಎಲ್ಲ ಸಹಕಾರಿಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿಶೇಷವಾಗಿ ಪ್ರಸಕ್ತ ಸಾಲಿನಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಬಾಧೆಬಂದಂತೆ ಭಾಸಗಾಗುತ್ತಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ಸಹಕಾರಿ ಸಂಸ್ಥೆಗಳೇ ಅಲ್ಲ ಎಂಬ ನಿರ್ಧಾರಕ್ಕೆ ಆದಾಯ ತೆರಿಗೆಯವರು ವ್ಯಾಖ್ಯಾನ ಮಾಡಿರುವುದು ನಮಗೆ ಗೊಂದಲವನ್ನುಂಟುಮಾಡಿದೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳು ಎಂದು ಸಾಬೀತು ಪಡಿಸಲು ರಾಜ್ಯ ಹೈಕೋರ್ಟ್‌ನಲ್ಲಿ ಕೇಸ ದಾಖಲಿಸಲು ಕ್ರಮವಿಡಲಾಗಿದೆ. ಶೀಘ್ರದಲ್ಲಿಯೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯನ್ನು ತಿದ್ದುಪಡಿಮಾಡಲು ಕ್ರಮವಿಡಬೇಕಿದೆ.

65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಮಾನ್ಯ ಸಹಕಾರ ಸಚಿವರಿಗೆ ಮನವಿ ಸಲ್ಲಿಸಿ ಎರಡು ಕಾಯ್ದೆಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡುವುದು ಅಗತ್ಯ ಇದೆ ಎಂದು ವಿನಂತಿಸಿದಾಗ ಮಾನ್ಯ ಸಹಕಾರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಶೀಘ್ರದಲ್ಲಿ ಅಧಿಕಾರಿಗಳ ಹಾಗೂ ಸಹಕಾರಿಗಳ ಸಭೆ ಕರೆದು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ರಾಜ್ಯದ ಎಲ್ಲ ಭಾಗಗಳಿಂದ ಸುಮಾರು 100ಕ್ಕೂ ಹೆಚ್ಚು ಶಾಸಕರನ್ನು ಭೇಟಿಮಾಡಿ ಸಮಸ್ಯೆಯ ಬಗ್ಗೆ ಮಾಹಿತಿ ನೀಡಿ ಸಹಕಾರ ಕಾಯ್ದೆ ತಿದ್ದುಪಡಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಅವರಿಂದ ಪತ್ರವನ್ನು ಬರೆಯಿಸುವ ಕಾರ್ಯವನ್ನೂ ಹಮ್ಮಿಕೊಳ್ಳಲಾಗುತ್ತಿದೆ. ಈ ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದವರು ಸಕ್ರೀಯವಾಗಿ ಸಹಕರಿಸಲು ಕೋರುತ್ತೇನೆ.

1959ರ ಕಾಯ್ದೆಯ ಕ್ರೆಡಿಟ್ ಸಹಕಾರ ಸಂಘಗಳಿಗೂ ಈ ಆದಾಯ ತೆರಿಗೆ ಇಲಾಖೆಯಿಂದ ತೊಂದರೆ ಹೆಚ್ಚಾಗಿರುವುದರಿಂದ ಈ ತೊಂದರೆಯನ್ನು ನಿವಾರಿಸಲು ಕ್ರಮವಿಡುವುದು ಅಗತ್ಯವೆಂದು ಭಾವಿಸಿ ರಾಜ್ಯದ ಅನೇಕ ಪ್ರಮುಖ ಸಹಕಾರಿ ಮುಖಂಡರನ್ನು ಭೇಟಿಮಾಡಲಾಗಿದೆ. ಆದಾಯ ತೆರಿಗೆ ವಿಷಯದಲ್ಲಿ ಎಲ್ಲರೂ ಒಟ್ಟಾಗಿ ಎಲ್ಲ ಹಂತಗಳಲ್ಲಿ ಹೋರಾಟದ ಕ್ರಮಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. ಶೀಘ್ರದಲ್ಲಿಯೇ ಈ ಸಭೆಯ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯು ಮಾಡಲಿದೆ. ರಾಜ್ಯದ ಪ್ರಮುಖ ಸಹಕಾರಿ ಸಂಸ್ಥೆಗಳ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿ ಹೋರಾಟದ ರೂಪರೇಷೆಗಳನ್ನು ಸಿದ್ಧಪಡಿಸುವುದು ಹಾಗೂ ಅದರಂತೆ ಕ್ರಮವಿಡುವುದಾಗಿದೆ. ಈ ಹೋರಾಟಕ್ಕೆ ಎಲ್ಲ ಸೌಹಾರ್ದ ಸಹಕಾರಿಗಳ ಸಹಕಾರ ಅಗತ್ಯ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 5-19
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 20-26
ಸುತ್ತೋಲೆ........................................27-28
ಲೇಖನ.......................................29-34
ನಿಮ್ಮ ಪ್ರಶ್ನೆ - ನಮ್ಮ ಉತ್ತರ .................35
ಆರ್‌ಬಿಐ ನ್ಯೂಸ್ ....................................36

# ಸಂಪಾದಕೀಯ

## ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಜಿಎಸ್‌ಟಿ ನೊಂದಣೆ ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವುದು ಅಗತ್ಯ

ದೇಶದಲ್ಲಿ 1ನೇ ಜುಲೈ 2017 ರಂದು ಜಿ.ಎಸ್.ಟಿ ಕಾಯ್ದೆ ಜಾರಿಗೆ ಬಂದ ದಿನ. "ಒಂದು ದೇಶ ಒಂದು ತೆರಿಗೆ" ಯನ್ನು ವಿಧಿಸುವ ಏಕರೂಪ ಗ್ರಾಹಕ ಸೇವಾ ತೆರಿಗೆ ಜಾರಿಗೆ ಬಂದಿದೆ. ವಸ್ತುಗಳ ಉಪಯೋಗ ಅಥವಾ ಸೇವೆ ಪಡೆಯುವವರು ಯಾವುದೇ ಕಾರಣಕ್ಕೂ ತೆರಿಗೆ ಪಾವತಿಸುವಲ್ಲಿ ನುಣುಚಿಕೊಳ್ಳಲು ಅವಕಾಶವಾಗುವುದಿಲ್ಲ. ಆ ದಿನವನ್ನು ಜಿ.ಎಸ್.ಟಿ. ದಿನವನ್ನಾಗಿಯೆ ಆಚರಿಸಲು ಕೇಂದ್ರ ಸರಕಾರ ತೀರ್ಮಾನಿಸಿ ಆಚರಿಸಿಯೂ ಆಗಿದೆ. ದೇಶದ ಅರ್ಥ ವ್ಯವಸ್ಥೆ ಸುಧಾರಣೆಯೂ ಕಂಡು ಬರುತ್ತಿದೆ.

ಆದರೆ ಸಹಕಾರಿಗಳಲ್ಲಿ ಈ ಜಿ.ಎಸ್.ಟಿ. ಬಗ್ಗೆ ಪೂರ್ಣ ತಿಳುವಳಿಕೆ ಇರದೆ ಇದು ನಮಗಲ್ಲ ಎಂಬ ಭಾವನೆ ಸಲ್ಲದು. ಪ್ರತಿಯೊಂದು ಸಹಕಾರಿ ಒಟ್ಟು 20 ಲಕ್ಷದ ವ್ಯವಹಾರದ ಗಡಿ ದಾಟಿದರೆ ಈ ತೆರಿಗೆ ಕಡ್ಡಾಯವಾಗಿ ಅನ್ವಯಿಸುತ್ತದೆ. ಆದ್ದರಿಂದ ಎಲ್ಲ ಸೌಹಾರ್ದ ಸಹಕಾರಿಗಳು ಕಡ್ಡಾಯವಾಗಿ ಜಿ.ಎಸ್.ಟಿ. ನೊಂದಣೆ ಮಾಡಲೇಬೇಕು.

ಅದೇ ರೀತಿ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ನಾವು ಬರುವುದಿಲ್ಲ ಎಂದು ಭಾವಿಸಿ ಆದಾಯ ತೆರಿಗೆ ಇಲಾಖೆಗೆ ನಿಮ್ಮ ವಾರ್ಷಿಕ ಮಾಹಿತಿ ರಿಟರ್ನ್ ಸಲ್ಲಿಸದಿರುವುದು ಸರಿಯಲ್ಲ. ಆದಾಯ ತೆರಿಗೆಯವರು ಸಹಕಾರಿ ಸಂಸ್ಥೆಗಳಿಗೆ ತೆರಿಗೆ ವ್ಯಾಪ್ತಿಯಿಂದ ಹೊರತುಪಡಿಸಬೇಕು ಅಥವಾ ರಿಯಾಯಿತಿ ನೀಡಬೇಕು ಎಂದಾದರೆ ರಿಟರ್ನ್ ಸಲ್ಲಿಸುವುದು ಅಷ್ಟೆ ಮುಖ್ಯವಾದದ್ದು ಎಂದು ಸಹಕಾರಿಗಳು ತಿಳಿಯುವುದು ಅಗತ್ಯ. ಸಹಕಾರಿಗಳು ಕಡ್ಡಾಯವಾಗಿ ರಿಟರ್ನ್ ಸಲ್ಲಿಸುತ್ತಿದ್ದರೆ ನಮ್ಮ ವ್ಯವಹಾರದ ಗಾತ್ರ ಅವರಿಗೆ ತಿಳಿಯುತ್ತದೆ ಆದಾಯ ತೆರಿಗೆ ಇಲಾಖೆಯ ಆಕಸ್ಮಿಕ ನೋಟೀಸ್‌ಗಳು, ಪರಿಶೀಲನೆ ಇತ್ಯಾದಿಗಳ ಪ್ರಮಾಣ ಕಡಿಮೆಯಾಗಬಹುದು ಆದಾಯ ತೆರಿಗೆ ಇಲಾಖೆಯವರ ಸಂಶಯಾತ್ಮಕ ದೃಷ್ಟಿಕೋನ ಬದಲಾಗಬಹುದು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ನಿಖರವಾದ ಮಾಹಿತಿ ಅವರಲ್ಲಿ ಲಭ್ಯ ಎಂದಾದರೆ ಅವರಿಂದ ತೊಂದರೆಯೂ ಕಡಿಮೆ ಎಂದು ಭಾವಿಸಬಹುದಾಗಿದೆ. ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಪಾರದರ್ಶಕವಾಗಿದ್ದಲ್ಲಿ ಯಾವುದೆ ಇಲಾಖೆಯ ಆತಂಕಗಳು ಉಂಟಾಗುವುದಿಲ್ಲ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಎರಡು ವಿಷಯಗಳಲ್ಲಿ ಹೆಚ್ಚಿನ ವಿಷಯಗಳನ್ನು ಅರಿತುಕೊಂಡು ಕ್ರಮವಿಡಲು ಮುಂದಾದಲ್ಲಿ ಅನೇಕ ತೊಂದರೆಗಳಿಗೆ ಪರಿಹಾರ ಸಾಧ್ಯ.



# ಜ್ಞಾನ ಜ್ಯೋತಿ

ಎಂ.ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು ಬೆಂಗಳೂರು.

## "ಪ್ರದರ್ಶನಬೇಡ, ನಿದರ್ಶನವಿರಲಿ"

ಕೊಳೆಯಾಗಿರುವ ಒಂದು ಕೊಠಡಿಯನ್ನು ಸ್ವಚ್ಛಗೊಳಿಸಿ ಸಂಗ್ರಹವಾದ ಕಸವನ್ನು ಹೊರಹಾಕಿ, ಮತ್ತೆ ಕಸಬೀಳದಂತೆ ಎಚ್ಚರಿಕೆ ವಹಿಸಿದರೆ, ಹಾಗೂ ಮತ್ತೆ ಮತ್ತೆ ಕೊಠಡಿಯನ್ನು ಶುಚಿಗೊಳಿಸುತ್ತಿದ್ದರೆ, ಅಂತಹ ಕೊಠಡಿಯು ಅಚ್ಚುಕಟ್ಟಾಗಿ ಇತರರಿಗೆ ಮೆಚ್ಚಾಗಿ ಕಾಣದಿರದು. ಆದರೆ ನಾವೆಲ್ಲಾ ಇಂದು ಗುಡಿಸಿ ಶುಭ್ರಗೊಳಿಸುವುದಿರಲಿ, ಇನ್ನಷ್ಟು ಹೊಲಸನ್ನು ಹಾಕಿ ಅತಿಮಲಿನ ಮಾಡುತ್ತಿದ್ದೇವೆ. ಈ ಮಲಿನತೆಯು, ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಾಗುತ್ತಾ ಬಂದು ಧಾರ್ಮಿಕಕ್ಷೇತ್ರವೂ ಮಲಿನತೆಯಿಂದ ಹೊರತಾಗಿಲ್ಲವೆಂಬುದು ಅಂಗೀಕೃತ ವಿಷಯ.

ಇನ್ನು ಖ್ಯಾತಿ ಮತ್ತು ಹೆಸರುಗಳ ವ್ಯಾಮೋಹದ ಬಗ್ಗೆ ಹೊರಟರಂತೂ ಪೈಪೋಟಿಯೇ ಸದೃಶವಾಗುತ್ತದೆ. ಯಾವುದೋ ಒಂದು ಸಭೆಯ ಆಮಂತ್ರಣ ಪತ್ರಿಕೆಯನ್ನು ಮುದ್ರಣ ಮಾಡಿಸುವಾಗ್ಗೆ, ತನ್ನ ಹೆಸರು ಮೇಲಿರಬೇಕು, ದಪ್ಪಕ್ಷರಗಳಲ್ಲಿರಬೇಕು, ನನ್ನ ಹೆಸರೇ ಪತ್ರಿಕೆಯ ತುಂಬಾ ರಾರಾಜಿಸಬೇಕು, ಎಂಬ ಬಯಕೆಗಳೇ ಇಂದಿನ ದಿನಮಾನದಲ್ಲಿ ಎಲ್ಲೆಲ್ಲೂ ಕಂಡುಬರುತ್ತಿವೆ. ಹೆಸರಿನ ವ್ಯಾಮೋಹದ ಬಗ್ಗೆ ಹಾತೋರೆಯುವ ವ್ಯಕ್ತಿಗಳ ಬಗ್ಗೆ ಆಧ್ಯಾತ್ಮಿಕ ಕವಿ ಡಿ.ವಿ.ಜಿ.ಯವರ ಪದ್ಯ ಕೆಳಗಿನಂತಿದೆ:

ಹೆಸರು ಹೆಸರೆಂಬುದೇಂ ಕಸರು ಬೀಸುವ ಗಾಳಿ।
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ।।
ಶಿಶುವಾಗು ನೀಂ ಮನದಿ ಹಸುವಾಗು ಸಸಿಯಾಗು।
ಕಸಪೊರಕೆಯಾಗಿಳೆಗೆ ॥ ಮಂಕುತಿಮ್ಮ

ಯಾವುದೇ ತ್ಯಾಗದ ಮಹತ್ಕಾರ್ಯವನ್ನು ಎಸಗದಿದ್ದರೂ ತನಗೆ ಬಿರುದು ಬಾವಲಿಗಳು ಬೇಕೆಂದು ಹಾತೊರೆಯುವ ಮನುಜರಿಗೆ, ಕವಿಯವರು ಹೆಸರೆಂಬುದೊಂದು ಕೊಳಕನ್ನು ಹೊತ್ತು ಬರುವ ಗಾಳಿ, ಅದಕ್ಕಾಗಿ ಹಾತೊರೆಯುವೇಕೆ? ಭಗವಂತನ ಸನ್ನಿಧಾನವಾದ ಈ ವಿಶ್ವದಲ್ಲಿ ಕೆಲಕಾಲದ ಯಾತ್ರಿಕನಾಗಿ ಬಂದಿದ್ದು ಹೋಗಲಿಹ, ನಿನಗೆ ಹಸೆಮಣೆ ಹಾಕಿ, ಶೃಂಗರಿಸಿ, ಕೂಡಿಸಿ ವಿಜ್ರಂಭಿಸಲೆಂಬ ಬಯಕೆ ಏಕೆ? ಎಂದು ಪ್ರಶ್ನಿಸುತ್ತಾ ಅದರ ಬದಲಾಗಿ ಪೊಳ್ಳು ಬಯಕೆಗಳನ್ನು ತೊರೆದು ಮಗುವಿನಂತಹ ಸರಳತನವನ್ನು ರೂಢಿಸಿಕೋ, ಹಾಲು ಮೊಸರನೀವ ಹಸುವಿನಂತಾಗು ಹಾಗೂ ಹೂ ಹಣ್ಣುಗಳನ್ನು ನೀಡುವ ಸಸಿಯಾಗು, ಯಾವುದಲ್ಲದಿದ್ದರೂ ವಿಶ್ವದ ಕೊಳೆಯನ್ನು ತೊಳೆವ ಶುದ್ಧಿಗೊಳಿಸುವ ಕಸಪೊರಕೆಯಾಗೆಂದು ಕರೆ ಕೊಡುತ್ತಾರೆ. ಕಸಪೊರಕೆಯು ಯಾವುದೇ ಮಹತ್ತರ ಬಯಕೆಗಳನ್ನು ಹೊಂದಿಲ್ಲವೆಂದಲ್ಲ. ಕಸವನ್ನು ತೆಗೆದನಂತರ ತನ್ನ ಪ್ರದರ್ಶನಗೈಯದೇ ಮೂಲೆಗೆ ಹೋಗಿ ತನ್ನ ನಿಜಸ್ಥಾನವನ್ನಲಂಕರಿಸುತ್ತದೆ. ತನ್ಮೂಲಕ "ಪ್ರದರ್ಶನಬೇಡ, ನಿದರ್ಶನವಿರಲಿ" ಎಂಬ ತತ್ವವನ್ನು ಸದ್ದಿಲ್ಲದೇ ಬಿತ್ತರಿಸುತ್ತದೆ.

ಪಾರಮಾರ್ಥಿಕ ಸತ್ಯದ ಕಡೆಗೆ ಒಲವು ಮೂಡಿದ ಕವಿ ಡಿ.ಜಿ.ಜಿ.ಯವರು ವ್ಯಕ್ತಿಗಳು ತಮ್ಮ ಆತ್ಮದ ನಿಜ ಅರಿವನ್ನರಿತು ತಮ್ಮ ತಮ್ಮ ಕಾರ್ಯಗಳನ್ನು ಶುದ್ಧವಾಗಿ ನಿರ್ವಹಿಸಿರೆಂದು ಹಮ್ಮುಬಿಮ್ಮಗಳನ್ನು ಬದಿಗೊತ್ತಿ ಎಲ್ಲರೊಳಗೊಂದಾಗುವ ಸಮಷ್ಟಿಭಾವವನ್ನು ಪಡೆಯಿರೆಂದು ಕಸಪೊರಕೆ, ಶಿಶು, ಹಸು, ಸಸಿಗಳ ಔಚಿತ್ಯಪೂರ್ಣ ಉದಾಹರಣೆ ನೀಡಿದ್ದಾರೆ.

ಈ ಉದಾಹರಿತವಾದ ಯಾರೂ ಅಥವಾ ಯಾವುದೂ ಅಹಂಕಾರದ ಪ್ರದರ್ಶನಕ್ಕೆ, ಹೆಸರಿನ ವ್ಯಾಮೋಹಕ್ಕೆ ಹೋಗುವುದಿಲ್ಲವಾದ್ದರಿಂದ, ನೀವೂ ಸಹ ಎಲ್ಲರ ಅಭ್ಯುದಯಕ್ಕಾಗಿ ಶ್ರಮಿಸುವ ಸಹಕಾರ ಕ್ಷೇತ್ರದ ಸದಸ್ಯರಾಗಿ ಎಲ್ಲರಿಗಾಗಿ ಉತ್ತಮ ಸಾಧನೆಗೈಯುತ್ತಾ, ಸರ್ವರ ಅಭಿವೃದ್ಧಿಗೆ ಶ್ರಮಿಸಿರೆಂದು ಈ ಭೂ ಉಪಗ್ರಹವನ್ನು ದೈವಾನುಗ್ರಹದ ಕೇಂದ್ರವನ್ನಾಗಿಸಿರೆಂದು ಎಚ್ಚರಿಸುತ್ತಿದ್ದಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 4201 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2330 ಪ್ರಕರಣಗಳು ಸೇರಿದಂತೆ ಒಟ್ಟು 6531 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 3465 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1160 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 171 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 108 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 881 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 768 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 58 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 69 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 641 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಿಗೆ ಕರೆ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ.

ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ.

ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coopಗೆ ಇ-ಮೇಲ್ ಮೂಲಕ ಕಳುಹಿಸಲು ಕೋರಿದೆ.

### ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ 65ನೇ ಸಹಕಾರ ಸಪ್ತಾಹ ಸಮಾರೋಪ ಕಾರ್ಯಕ್ರಮ

## ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿಗೆ ಸರಕಾರ ಬದ್ಧ : ಆದಾಯ ತೆರಿಗೆ ತೊಂದರೆ ನಿವಾರಣೆಗೆ ಹಿರಿಯರ ನೇತೃತ್ವದಲ್ಲಿ ಕೇಂದ್ರಕ್ಕೆ ನಿಯೋಗ : ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರ

**ಶಿವಮೊಗ್ಗ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ನೇತೃತ್ವದಲ್ಲಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಹಯೋಗದೊಂದಿಗೆ 65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮವನ್ನು ಶಿವಮೊಗ್ಗದಲ್ಲಿ, ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಶಿವಮೊಗ್ಗ ಹಾಲು ಉತ್ಪಾದಕರ ಸಹಕಾ ರ ಸಂಘಗಳ ಒಕ್ಕೂಟ, ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ ಹಾಗೂ ಶಿವಮೊಗ್ಗದ ಸೌಹಾರ್ದ ಸಹಕಾರ ಸಂಸ್ಥೆಗಳು ಹಾಗೂ ಶಿವಮೊಗ್ಗ ಜಿಲ್ಲೆಯ ಎಲ್ಲ ಸಹಕಾರ ಸಂಸ್ಥೆಗಳ ಸಹಯೋಗದೊಂದಿದೆ ವಿಜ್ರಂಭಣೆಯಿಂದ ಸಡಗರದೊಂದಿಗೆ ಆಚರಿಸಲಾಯಿತು.

ಸಪ್ತಾಹವನ್ನು ನಗರದ ಸ್ಟೇಡಿಯಂನಿಂದ ಅತ್ಯಂತ ವೈಭವಪೂರ್ಣ ಸಹಕಾರಿಗಳ ಜಾತಾದೊಂದಿದೆ ಪ್ರಾರಂಭಿಸಲಾಯಿತು. ಸಾವಿರಾರು ಸಹಕಾರಿಗಳು ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರರವರ ನೇತೃತ್ವದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರೂ ಹಾಗೂ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರೂ ಆದ ಶ್ರೀ ಆರ್.ಎಮ್. ಮಂಜುನಾಥಗೌಡ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಹಾಗೂ ಸಮಿತಿಯ ಕಾರ್ಯಾಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಮಹಾಮಂಡಳದ ಅಧ್ಯಕ್ಷ ಶ್ರೀ ಗಂಗಣ್ಣನವರು ಉಪಸ್ಥಿತಿಯಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿ ಶ್ರೀ ಕೆ.ಎ. ದಯಾನಂದ ರವರು ಸಹಕಾರ ಧ್ವಜವನ್ನು ತೋರಿಸಿ ಹಾರಾಡಿಸುವ ಮೂಲಕ ಜಾತಾಗೆ ಚಾಲನೆ



ನೀಡಿದರು. ಹಲವಾರು ಅಧಿಕಾರಿಗಳು ಮತ್ತು ಸಹಕಾರಿ ಮುಖಂಡರ ನೇತೃತ್ವದಲ್ಲಿ ವಿವಿಧ ವಾದ್ಯ ಹಾಗೂ ಜಾನಪದ ಕಲಾ ತಂಡಗಳೊಂದಿದೆ ಸಹಕಾರಿ ಧ್ವಜಗಳ ಹಾಗೂ ಸಹಕಾರಿ ಕ್ಷೇತ್ರದ ಘೋಷಣೆಗಳೊಂದಿಗೆ ಬೆಳಿಗ್ಗೆ 10-00 ಘಂಟೆಗೆ ಪ್ರಾರಂಭವಾಯಿತು. ಎನ್..ಇ.ಎಸ್. ಕ್ರೀಡಾಂಗಣಕ್ಕೆ 11-30ಕ್ಕೆ ತಲುಪಿತು.

65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ದಿನದ ವಿಷಯ ಸಹಕಾರಿ "ಸಂಸ್ಥೆಗಳ ಮೂಲಕ ಕೌಶಲ್ಯ ಹಾಗೂ ತಾಂತ್ರಿಕ ಅಭಿವೃದ್ಧಿ ದಿನಾಚರಣೆಯ" ಸಂಬಂಧವಾಗಿ ಬೆಳಿಗ್ಗೆ 10-00 ರಿಂದ 11-00 ರವರೆಗೆ ಡಾ.ಎಸ್.ಎ.ಸಿದ್ಧಾಂತಿಯವರಿಂದ ಉಪನ್ಯಾಸ ವ್ಯವಸ್ಥೆಮಾಡಲಾಗಿತ್ತು. ಬೆಳಿಗ್ಗೆ



9–00 ರಿಂದ 10–00 ಘಂಟೆಯವರೆಗೆ ಶ್ರೀಮತಿ ಸುರೇಖಾ ಹೆಗಡೆ ಹಾಗೂ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ನಂತರದಲ್ಲಿ ಸಹಕಾರ ಧ್ವಜಾರೋಹಣವನ್ನು ಹಾಗೂ ಸಹಕಾರ ವಸ್ತುಪ್ರದರ್ಶನದ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರರವರು ನೇರವೇರಿಸಿದರು.

ಬೆಳಿಗ್ಗೆ 11–30ಕ್ಕೆ ಸಭಾಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಶ್ರೀಮತಿ ಸುರೇಖಾ ಹೆಗಡೆಯವರಿಂದ ಪ್ರಾರ್ಥನೆ ನಾಡಗೀತೆ ಹಾಗೂ ಶಿವಭದ್ರಪ್ಪರವರಿಂದ ರೈತಗೀತೆಯ ನಂತರದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಷಡಕ್ಷರಿಯವರು ಗಣ್ಯರನ್ನು ಹಾಗೂ ಎಲ್ಲ ಸಹಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಗಣ್ಯರಿಗೆ ಸನ್ಮಾನವನ್ನು ಮಾಡಲಾಯಿತು.



ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಪ್ತಾಹದ ಪ್ರಾಸ್ತಾವಿಕ ಭಾಷಣ ಮಾಡಿದ ನಂತರ ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರರವರು ಹಾಗೂ ಎಲ್ಲ ಗಣ್ಯಮಾನ್ಯರು ದೀಪಬೆಳಗಿಸುವ ಮೂಲಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರದಲ್ಲಿ ವಿಧಾನ ಪರಿಷತ ಸದಸ್ಯ ಶ್ರೀ ಪ್ರಸನ್ನಕುಮಾರರವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ಸಹಕಾರ ಕ್ಷೇತ್ರದ ಬಗ್ಗೆ ಕೇಂದ್ರದವರು ಅನುಸರಿಸುತ್ತಿರುವ ಧೋರಣೆ ಸರಿಯಲ್ಲ. ವಿಶೇಷವಾಗಿ ಆದಾಯತೆರಿಗೆ ತೊಂದರೆಗಳಿಂದ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ತಿಳಿಸಿದರು.

ನಂತರ ಶಿವಮೊಗ್ಗ ಜಿಲ್ಲೆಯ ತಾಲ್ಲೂಕಿಗೆ ಒಂದರಂತೆ 7 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ 7 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ 7 ಕ್ರೆಡಿಟ್ ಸಹಕಾರ ಸಂಘಗಳಿಗೆ ಜಿಲ್ಲೆಗೆ ಎರಡು ಮಹಿಳಾ ಸಹಕಾರ ಸಂಘಗಳಿಗೆ ಜಿಲ್ಲೆಗೆ 1 ರಂತೆ ಪಟ್ಟಣ ಸಹಕಾರ ಬ್ಯಾಂಕ, ಗ್ರಾಹಕ ಸಹಕಾರ ಸಂಘ ಮಾರಾಟ ಸಹಕಾರ ಸಂಘ, ಗ್ರಾಹಕ ಸಹಕಾರ ಸಂಘ, ವಸತಿ ಸಹಕಾರ ಸಂಘ, 9 ಸೌಹಾರ್ದ ಸಹಕಾರ ಸಂಘಗಳಿಗೆ ಮತ್ತು ಶಿವಮೊಗ್ಗ ಹಾಲು ಉತ್ಪಾದಕರ ಒಕ್ಕೂಟಕ್ಕೆ ಉತ್ತಮ ಸಹಕಾರಿ ಸಂಸ್ಥೆಗಳೆಂದು ಸನ್ಮಾನಿಸಲಾಯಿತು.

ಮಹಾಮಂಡಳದ ಅಧ್ಯಕ್ಷ ಶ್ರೀ ಗಂಗಣ್ಣನವರು ಮಾತನಾಡಿ 65 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಅತ್ಯಂತ ಅರ್ಥಪೂರ್ಣವಾಗಿ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬೀದರನಲ್ಲಿ ಈ ಸಪ್ತಾಹಕ್ಕೆ ಚಾಲನೆ ನೀಡಿದ್ದಾರೆ. ಅದೊಂದು ಐತಿಹಾಸಿ ಕಾರ್ಯಕ್ರಮವಾಗಿತ್ತು. ಇವತ್ತು ಸಹ ಈ ಸಮಾರೋಪ ಕಾರ್ಯಕ್ರಮದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಕಾರ್ಯಕ್ರಮ ಜರುಗುತ್ತಿರುವುದು ಸಂತೋಷದ ವಿಷಯ. ಮಾನ್ಯ ಸಹಕಾರ ಸಚಿವರು ಎಲ್ಲ ಕಾರ್ಯಕ್ರಮಗಳಲ್ಲೂ ಸಕ್ರೀಯವಾಗಿ ಭಾಗವಹಿಸುತ್ತಿರುವುದು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿದೆ ಎಂದರು.

## ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಹಾಗೂ ಡಿ.ಸಿ.ಬಿ.ಎಮ್ ಕೋರ್ಸನ ವಿವರಣಾ ಪತ್ರದ ಬಿಡುಗಡೆ



ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣೆಗಳಾದ ಸಹಕಾರಿ ಕ್ಷೇತ್ರಕ್ಕೆ ಸಂಬಂದಿಸಿದ ಹೈಕೋರ್ಟ ಹಾಗೂ ಸುಪ್ರೀಮ್ ಕೋರ್ಟ ತೀರ್ಪುಗಳ 3 ಪುಸ್ತಕಗಳ ಬಿಡುಗಡೆಯನ್ನು ಮಾಡಲಾಯಿತು ಸಹಕಾರ ಮಹಾಮಂಡಳದ ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆಮಾಡಲಾಯಿತು.

ಸಹಕಾರ ಹಾಗೂ ಬ್ಯಾಂಕಿಂಗ ಮೆನೆಜಮೆಂಟ ಡಿಪ್ಲೋಮಾ 6 ತಿಂಗಳ ದೂರ ಶಿಕ್ಷಣ ಕೋರ್ಸನ ವಿವರಣಾ ಪತ್ರಿಕೆಯನ್ನು ಮಾನ್ಯ ಸಹಕಾರ ಸಚಿವರು ಬಿಡುಗಡೆಮಾಡಿದರು.

## ಮನವಿ ಪತ್ರಗಳ ಸಲ್ಲಿಕೆ ಹಾಗೂ ಸರ್ವಾನುಮತದ ನಿರ್ಣಯ

1959 ಸಹಕಾರ ಸಂಘಗಳ ಕಾಯ್ದೆಯಲ್ಲಿ ಕಾರ್ಯನಿರ್ವಹಿಸುವ ಸಹಕಾರ ಸಂಘಗಳ ಪರವಾಗಿ ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕ ಅಧ್ಯಕ್ಷ ಶ್ರೀ ಆರ್.ಎಮ್.ಮಂಜುನಾಥಗೌಡ ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾನ್ಯ ಸಹಕಾರ ಸಚಿವರಿಗೆ ಸಹಕಾರ ಕಾಯ್ದೆಗಳ ತಿದ್ದುಪಡಿ ಕುರಿತಂತೆ ಮನವಿ ಪತ್ರಗಳನ್ನು ಸಲ್ಲಿಸಿದರು. ಹಾಗೂ ಈ ತಿದ್ದುಪಡಿಗಳನ್ನು ಶೀಘ್ರದಲ್ಲಿ ಮಾಡಿಕೊಡುವಂತೆ ಮಾನ್ಯ ಸಹಕಾರ ಸಚಿವರನ್ನು ವಿನಂತಿಸುವ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ನಂತರದಲ್ಲಿ ಮಾನ್ಯ ಸಹಕಾರ ಸಚಿವರಿಗೆ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಆರ್. ಎಮ್.ಮಂಜುನಾಥಗೌಡರವರನ್ನು ಸನ್ಮಾನಿಸಲಾಯಿತು.

# ಮಾನ್ಯ ಸಹಕಾರ ಸಚಿವರಿಗೆ ಸನ್ಮಾನ



ಸಹಕಾರ ಸಚಿವ ಶ್ರೀ ಬಂಡೆಪ್ಪ ಕಾಶ್ಯಂಪೂರವರು ಮಾತನಾಡಿ ಜನರಿಗೆ ಸೇವೆ ಮಾಡಲು ಜನರ ಕಷ್ಟಗಳಿಗೆ ನೆರವಾಗಲು ಸಹಕಾರ ಕ್ಷೇತ್ರ ಅತ್ಯಂತ ಉತ್ತಮವಾದ ಕ್ಷೇತ್ರ. ಈ ಕ್ಷೇತ್ರ ಅತ್ಯಂತ ಪ್ರಭಾವ ಶಾಲಿಯಾಗಿ ಕಾರ್ಯನಿರ್ವಹಿಸಬೇಕು. ಈ ಎರಡೂ ಕಾಯ್ದೆಗಳಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಮಾಡಿಕೊಡಲು ಸರಕಾರ ಬದ್ಧವಾಗಿದೆ. ಕೂಡಲೆ ಈ ಬಗ್ಗೆ ಕ್ರಮವಿಡಲಾಗುವುದು. ಆದಾಯ ತೆರಿಗೆ ನೆರವಾಗಿ ಕೇಂದ್ರಕ್ಕೆ ಸಂಬಂಧಿಸಿದೆ ಈ ಬಗ್ಗೆ ಕೇಂದ್ರ ಹಣಕಾಸು ಸಚಿವರಿಗೆ ಈ ರಾಜ್ಯದ ಹಿರಿಯರನ್ನು ಕರೆದುಕೊಂಡು ನಿಯೋಗಹೋಗಿ ಸಮಸ್ಯೆ ನಿವಾರಣೆಗೆ ಕ್ರಮವಿಡಲಾಗುವುದು ಎಂದು ತಿಳಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಆರ್.ಎಮ್. ಮಂಜುನಾಥಗೌಡರವರು ರಾಜ್ಯದ ಸಹಕಾರ ಕ್ಷೇತ್ರಕ್ಕ ಅನೇಕ ದಿನಗಳ ನಂತರ ಒಬ್ಬ ಕ್ರಿಯಾಶೀಲ ಉತ್ತಮ ಸಚಿವರು ದೊರಕಿದ್ದಾರೆ. ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಆಸಕ್ತಿಯನ್ನು ಹೊಂದಿದ್ದಾರೆ ಸಹಕಾರ ಕ್ಷೇತ್ರದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಅವರಿಗಿದೆ. ಅವರಿಗೆ ನಮ್ಮ ಸಂಪೂರ್ಣ ಬೆಂಬಲವನ್ನು ನೀಡಿ ಅವರಿಂದ ಈ ಸಹಕಾರ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಸಾಧ್ಯವಾಗಲು ಸಹಕಾರ ನೀಡೂಣ ಎಂದು ತಿಳಿಸಿ ಸಹಕಾರ ಸಂಸ್ಥೆಗಳಿಗೆ ವಿಶೇಷವಾಗಿ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯವರಿಂದ ಕಿರುಕುಳ ಹೆಚ್ಚಾಗಿದೆ. ಈ ಕಿರುಕುಳದ ಶಾಶ್ವತ ಪರಿಹಾರಕ್ಕೆ ಮಾನ್ಯ ಸಹಕಾರಿ ಸಚಿವರ ನೇತೃತ್ವದಲ್ಲಿ ಕೇಂದ್ರಕ್ಕೆ ನಿಯೋಗ ಹೋಗಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಅಧ್ಯಕ್ಷೆ ಶ್ರೀ ಜ್ಯೋತಿ ಎಸ್.ಕುಮಾರ ಹಾಗೂ ಉಪಾಧ್ಯಕ್ಷೆ ಶ್ರೀಮತಿ ವೇದ ವಿಜಯಕುಮಾರ, ಮಹಾಮಂಡಳದ ಉಪಾಧ್ಯಕ್ಷ ಶ್ರೀ ಚಂದ್ರಣ್ಣ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಗಂಗಾಧರಯ್ಯ, ಶ್ರೀ ಪ್ರಸನ್ನಕುಮಾರ, ಶ್ರೀ ಬಿ.ಎಸ್. ಗುಂಡೂರಾವ ಶ್ರೀ ವೈಟಿ ಪಾಟೀಲ, ಶ್ರೀ ಸಂಜೀವ ಮಹಾಜನ, ಹಾಲು ಒಕ್ಕೂಟದ ಅಧ್ಯಕ್ಷ ಶ್ರೀ ವಿದ್ಯಾಧರ, ಶ್ರೀ ಅಶ್ವತ್ಥ ಆದ್ಯಕ್ಷರು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಶಿವಮೊಗ್ಗ, ಅನೇಕ ಸಹಕಾರಿ ಮುಖಂಡರು, ಸಹಕಾರ ಇಲಾಖೆಯ ಜಂಟಿ ನಿಬಂಧಕ ಶ್ರೀ ಎಮ್.ಡಿ.ನರಸಿಂಹಮೂರ್ತಿ, ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸಿ.ರಾಜಣ್ಣರೆಡ್ಡಿ, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಎನ್.ಎಸ್.ಅರುಣಕುಮಾರ ಜಿಲ್ಲಾ ಸಹಕಾರ ಸಂಘಗಳ ನಿಬಂಧಕ ಶ್ರೀ ತಿಪ್ಪೆಸ್ವಾಮಿ, ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕ ಶ್ರೀ ಎಮ್.ಹೆಚ್. ಲಕ್ಷ್ಮಣ, ಸಹಕಾರ ಇಲಾಖೆಯ, ಸಹಕಾರ ಮಹಾಮಂಡಳದ, ಸಂಯುಕ್ತ ಸಹಕಾರಿಯ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ, ಶಿವಮೊಗ್ಗ ಹಾಲು ಒಕ್ಕೂಟದ ಅನೇಕ ಅಧಿಕಾರಿಗಳು ಹಾಗೂ ಜಿಲ್ಲೆಯ 5000ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿದ್ದರು. ರಾಷ್ಟ್ರಗೀತೆಯೊಂದಿಗೆ ಸಭಾಕಾರ್ಯಕ್ರಮ ಮುಕ್ತಾಯವಾಯಿತು.



ಭಾಗವಹಿಸಿದ ಸಹಕಾರಿಗಳು

# ಸನ್ಮಾನಿತ ಸಹಕಾರಿ ಸಂಸ್ಥೆಗಳ ಪಟ್ಟಿ

**ಸೌಹಾರ್ದ ಸಹಕಾರಿಗಳ ವಿಭಾಗ :**

1. ಕೊಡಚಾದ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ
2. ಸುಭಾಷ್ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿಯಮಿತ, ಭದ್ರಾವತಿ.
3. ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಸಾಗರ.
4. ಸಿರಿ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ
5. ಶಿವಪಾರ್ವತಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಮಳವಳ್ಳಿ ಗ್ರಾಮ
6. ಅರಸು ಸೌಹಾರ್ದ ಸಹಕಾರಿ ನಿಯಮಿತ, ಆನವಟ್ಟಿ
7. ಸರಸ್ವತಿ ಸೌಹಾರ್ದ ಸಹಕಾರಿ ನಿಯಮಿತ, ತೀರ್ಥಹಳ್ಳಿ
8. ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ
9. ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ನಿಯಮಿತ, ಹೊಸನಗರ

**ಪತ್ತಿನ ಸಹಕಾರಿ ಸಂಘಗಳ ವಿಭಾಗ :**

1. ಶ್ರೀ ಕಾಳಿಕ ಪರಮೇಶ್ವರಿ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಲಿಮಿಟೆಡ್, ಶಿವಮೊಗ್ಗ.
2. ಶ್ರೀ ಕನ್ಯಕಾಪರಮೇಶ್ವರಿ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಲಿಮಿಟೆಡ್, ಭಧ್ರಾವತಿ.
3. ಶರಾವತಿ ಪತ್ತಿನ ಸಹಕಾರ ಸಂಘ ನಿಯಮಿತ, ತೀರ್ಥಹಳ್ಳಿ.
4. ವರದಾ ಪತ್ತಿನ ಸಹಕಾರ ಸಂಘ ನಿಯಮಿತ, ಸಾಗರ.
5. ನಂದಿನಿ ಹಾಲು ಉತ್ಪಾದಕರ ಪತ್ತಿನ ಸಹಕಾರಿ ಸಂಘ ನಿಯಮಿತ, ಶಿಕಾರಿಪುರ.
6. ವೀರಶೈವ ಪತ್ತಿನ ಸಹಕಾರ ಸಂಘ ನಿಯಮಿತ, ಹೊಸನಗರ.
7. ಶ್ರೀ ಗಜಾನನ ಉಪಾಧ್ಯಾಯರ ಸಹಕಾರ ಸಂಘ ನಿಯಮಿತ, ಆನವಟ್ಟಿ, ತಾ॥ ಸೊರಬ.

**ಹಾಲು ಉತ್ಪಾದಕರ ಸಹಕಾರ ಸಂಘಗಳ ವಿಭಾಗ :**

1. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಹರಮಘಟ್ಟ, ತಾ॥ ಶಿವಮೊಗ್ಗ.
2. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಬಾರಂದೂರು, ತಾ॥ ಭದ್ರಾವತಿ.
3. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ರಾಮಕೃಷ್ಣಪುರ, ತಾ॥ ತೀರ್ಥಹಳ್ಳಿ.
4. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಅಂಬಾರಗೊಪ್ಪ, ತಾ॥ ಶಿಕಾರಿಪುರ.
5. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಮಾಸೂರು, ತಾ॥ ಸಾಗರ.
6. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಹೆದ್ದಾರಿಪುರ, ತಾ॥ ಹೊಸನಗರ.
7. ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಉದ್ರಿ, ತಾ॥ ಸೊರಬ.

**ಕೃಷಿ ಪತ್ತಿನ ಸಹಕಾರ ಸಂಘಗಳ ವಿಭಾಗ :**

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹಸೂಡಿ ತಾ॥ ಶಿವಮೊಗ್ಗ.
2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಸಿಂಗನಮನೆ ತಾ॥ ಭದ್ರಾವತಿ.
3. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಸವಾನಿ ತಾ॥ ತೀರ್ಥಹಳ್ಳಿ.
4. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ನಂದಿತಳೆ ತಾ॥ ಸಾಗರ.
5. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ತಡಸನಹಳ್ಳಿ ತಾ॥ ಶಿಕಾರಿಪುರ.
6. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಸಬಾಳೆ ತಾ॥ ಸಾಗರ.
7. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಆಲಗೇರಿಮಂಡ್ರಿ ತಾ॥ ಹೊಸನಗರ.

**ಸಾಮಾನ್ಯ ಸಹಕಾರಿ ಸಂಘಗಳ ವಿಭಾಗ :**

1. ಸಹ್ಯಾದ್ರಿ ಮಹಿಳಾ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ಶಿವಮೊಗ್ಗ
2. ರೈತರ ಅಡಿಕೆ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ ನಿ., ಭದ್ರಾವತಿ.
3. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಶಿವಮೊಗ್ಗ.
4. ತಾಲ್ಲೂಕ ಮಹಿಳಾ ವಿವಿದೋದ್ಧೇಶ ಸಹಕಾರ ಸಂಘ ನಿಯಮಿತ, ತೀರ್ಥಹಳ್ಳಿ.
5. ಸನ್ಮತಿ ಮಹಿಳಾ ಪತ್ತಿನ ಸಹಕಾರ ಸಂಘ ನಿಯಮಿತ, ಹಿತ್ತಲ. ತಾ॥ ಶಿಕಾರಿಪುರ.
6. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ಶಿವಮೊಗ್ಗ.

ನಂತರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

## 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ – ಬೀದರ

# 'ಅರ್ಥಪೂರ್ಣ ಸಹಕಾರ ಸಪ್ತಾಹ ಆಚರಣೆ ಕ್ಷೇತ್ರದ ಅಭಿವೃದ್ಧಿಗೆ ಪೂರಕ - ಜಾಂತೀಕರ್

**ಬೀದರ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಹಾಗೂ ಬೀದರ ಜಿಲ್ಲಾ ಸಹಕಾರ ಯುನಿಯನ್ ನಿ., ಬೀದರ ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ 65ನೇ ಅಖಿಲ ಭಾರತ ಸಹಕಾರ ಸಪ್ತಾಹ –2018 ನಗರದ ಶಾರದ ರೂಡಸೆಟ್ ಬೀದರ ನಲ್ಲಿ ನಡೆದ ಮೂರನೆ ದಿನದ ಕಾರ್ಯಕ್ರಮವನ್ನು ಸಂಯಕ್ತ ಸಹಕಾರಿಯ ನಿರ್ದೇಶಕರಾದ ಗುರುನಾಥ ಜ್ಯಾಂತೀಕರ ಉದ್ಘಾಟಿಸಿದರು.

ಮಾತನಾಡಿ ಸಹಕಾರ ಸಪ್ತಾಹ ಆಚರಣೆ ರಾಜಕೀಯದಿಂದ ಮುಕ್ತವಾಗಿರಬೇಕು. ಸಹಕಾರಿಗಳು ರಾಜಕೀಯದಿಂದ ದೂರವಿದ್ದು ಸಹಕಾರ ಚಳುವಳಿ ಕಟ್ಟುವಂತಾಗಬೇಕು ಸಮಾಜದ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ ಅತ್ಯಮುಲ್ಯವಾಗಿದು ಕಟ್ಟಕಡೆಯ ವ್ಯಕ್ತಿಗೆ ಸಹಕಾರಿಗಳ ಸೇವೆ ನೀಡುವ ಮೂಲಕ ವ್ಯಕ್ತಿಯನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಡ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವರ್ತಕರಾಗುವುದು ಅವಶ್ಯಕವೆಂದು ನುಡಿದರು. ಇಂದಿನ ದಿನಗಳಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಮೌಲ್ಯವರ್ಧನೆ ಮತ್ತು ಬ್ರಾಂಡ್ ನಿರ್ಮಾಣ ಆಗುವ ಮೂಲಕ ಸಹಕಾರ ಸಪ್ತಾಹ ಅರ್ಥಪೂರ್ಣ ಆಚರಣೆ ಆಗಬೇಕು, ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಅಗತ್ಯವಿದ್ದು ಮುಂದಿನ ಪೀಳಿಗೆ ಹೆಚ್ಚು ಸಹಕಾರದ ಕ್ಷೇತ್ರದ ಕಡೆ ಬರುವಂತೆ ಆಗುವ ನಿಟ್ಟಿನಲ್ಲಿ ಚಿಂತನೆ ನಡೆಸುವ ಅಗತ್ಯವಿದೆ ಎಂದು ತಿಳಿಸಿದರು.

ಒಕ್ಕೂಟದ ಉಪಾಧ್ಯಕ್ಷದ ಸಂಜೀವಕುಮಾರ ಪಾಟೀಲ ಮಾತನಾಡಿ ಸಹಕಾರಿಗಳು ಸಪ್ತಾಹ ಆಚರಣೆ ಸೌಹಾರ್ದ ಸಹಕಾರಿಗಳ ಮೂಲಕ ಪ್ರಥಮ ಬಾರಿ ಆಚರಿಸಲಾಗುತ್ತಿದೆ ಇದಕ್ಕೆ ಎಲ್ಲ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.



ಸಭೆಯ ಅಧ್ಯಕ್ಷತೆಯನ್ನು ಕಾಶಿನಾಥ ಕನಾಟೆ ವಹಿಸಿದರು. ಸಭೆಯಲ್ಲಿ ಉಪನ್ಯಾಸಕರಾದ ಡಾ॥ ನಂದಿಶ ಹೀರೆಮಠ, ಮುಖ್ಯ ಅತಿಥಿಗಳಾಗಿ ವೀರಭದ್ರಪ್ಪ ಭುಯ್ಯಾ, ಸೋಮನಾಥ ಚಿದ್ರಿ, ರಾಜಶೇಖರ ಎಚ್, ನಿರ್ದೇಶಕರಾದ ಸಂಜಯ ಕ್ಯಾಸಾ, ಶಿವಾನಂದ ಮಂತಳಕರ, ಬಸವರಾಜ ಬುದೆರಾ, ಶ್ರೀ ರಾಜಶೇಖರ ನಾಗಮುರ್ತಿ, ನಂದಾವಿವೇಕಾನಂದ, ಜಗನಾಥ ಕರಂಜೆ ಕ್ರಾಂತಿಕುಮಾರ ಕುಲಾಲ, ಸತೀಷ ಪಾಟೀಲ್ ಶ್ರೀಕಾಂತ ಸ್ವಾಮಿ, ಶ್ರೀಮತಿ ಸವಿತಾ. ಮಹೇಶ್ವರ ಸ್ವಾಮಿ, ಬಸವರಾಜ ಸ್ವಾಮಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶಟ್ಟಿ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ, ಗುಂಡುರಾವ, ಕೃಷ್ಣಮುರ್ತಿ ನಂದ, ಶರಣಪ್ಪರೆಡ್ಡಿ, ಕುಬೆಂದ್ರಪ್ಪ ಯುನಿಯನ್ ಮುಖ್ಯಕಾರ್ಯನಿರ್ವಾಹಕರಾದ ಎಚ್.ಆರ್.ಮಲ್ಲಮ ಜಿಲ್ಲೆಯ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.



### ಪುಸ್ತಕ ಮಾರಾಟ ಮಳಿಗೆಯ ಉದ್ಘಾಟನಾ ಕಾರ್ಯಕ್ರಮ

**ಬೀದರ :** ದಿನಾಂಕ : 15.11.2018ರಂದು ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಪುಸ್ತಕ ಮಾರಾಟ ಮಳಿಗೆಯ ಉದ್ಘಾಟನೆಯನ್ನು ಮಾನ್ಯ ಶಾಸಕರಾದ ಶ್ರೀ ಈಶ್ವರ ಖಂಡ್ರೆ ರವರು ನೆರವೇರಿಸಿದರು. ಶಾಸಕರಾದ ಶ್ರೀ ಬಿ. ನಾರಾಯಣರಾವ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಸಂಜೀವ ಮಹಾಜನ ಹಾಗೂ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

# 10 ಸಾಧಕರಿಗೆ ಸಹಕಾರ ರತ್ನ ಪ್ರಶಸ್ತಿ



**ಬೀದರ :** 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ 10 ಜನ ಸಹಕಾರಿಗಳ ಹೆಸರುಗಳನ್ನು ಘೋಷಿಸಲಾಯಿತು. ಈ ಸಂದರ್ಭದಲ್ಲಿ 7 ಜನ ಸಹಕಾರಿ ಸಾಧಕರಿಗೆ ಮುಖ್ಯಮಂತ್ರಿ ಶ್ರೀ ಎಚ್. ಡಿ. ಕುಮಾರಸ್ವಾಮಿ ಮತ್ತು ಉಪಸ್ಥಿತ ಗಣ್ಯರುಗಳು ಸಹಕಾರ ರತ್ನ ಪ್ರಶಸ್ತಿ ಪ್ರಧಾನ ಮಾಡಿದರು.

ಸಹಕಾರ ಕ್ಷೇತ್ರದ ದಿಗ್ಗಜ ದಿ. ಡಾ. ಗುರುಪಾದಪ್ಪ ನಾಗಮಾರಪಳ್ಳಿ ಅವರಿಗೆ ಕಲಬುರಗಿ ವಿಭಾಗದಿಂದ ಮರಣೋತ್ತರವಾಗಿ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರ ಪುತ್ರ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಉಮಾಕಾಂತ ನಾಗಮಾರಪಳ್ಳಿ ಪ್ರಶಸ್ತಿ ಸ್ವೀಕರಿಸಿದರು. ಕಲಬುರಗಿ ವಿಭಾಗದಲ್ಲಿ ಬೀದರ್‌ನ ಶ್ರೀ ಎಂ.ಎ. ಸಲಿಂಮೊದ್ದೀನ್, ಬೆಂಗಳೂರು ನಗರದಿಂದ ಶ್ರೀ ಬಿ.ಎನ್. ವೆಂಕಟಾಚಾಲಯ್ಯ, ಮೈಸೂರು ವಿಭಾಗದಿಂದ ಉಡುಪಿಯ ಶ್ರೀಮತಿ ಸರಳಾ ಕಾಂಚನ್ ಮತ್ತು ಶ್ರೀ ಕೃಷ್ಣರಾಜ ಸರಳಾಯ, ಬೆಳಗಾವಿ ವಿಭಾಗದಿಂದ ಉತ್ತರ ಕನ್ನಡ ಜಿಲ್ಲೆಯ ಶ್ರೀ ಜಿ.ಟಿ. ಹೆಗಡೆ ತಟ್ಟಿಸರ ಮತ್ತು ಸಹಕಾರ ಇಲಾಖೆಯ ನಿವೃತ್ತಿ ಅಧಿಕಾರಿ ವಿಭಾಗದಿಂದ ಬೆಳಗಾವಿಯ ಶ್ರೀ ಎಸ್. ಎಂ ಕಲೂತಿ ಪ್ರಶಸ್ತಿ ಸ್ವೀಕರಿಸಿದರು.

ಬೆಂಗಳೂರು ವಿಭಾಗದಿಂದ ಶಾಸಕರಾದ ಶ್ರೀ ಕೆ. ಶ್ರೀನಿವಾಸಗೌಡ, ಶ್ರೀಮತಿ ಅನ್ನಪೂರ್ಣ ವೆಂಕಟನಂಜಪ್ಪ, ತುಮಕೂರು, ಮೈಸೂರು ವಿಭಾಗದಿಂದ ಡಾ. ಮುನಿವೆಂಕಟಗೌಡ ಅವರುಗಳಿಗೆ ಸಹಕಾರ ರತ್ನ ಪ್ರಶಸ್ತಿ ಘೋಷಿಸಿದ್ದು, ಅವರುಗಳು ಅನಿವಾರ್ಯ ಕಾರಣಗಳಿಂದ ಹಾಜರಿರಲಿಲ್ಲ. ಮುಂದಿನ ಶ್ರೀಯುತರುಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

# ವಿಜಯಪುರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಹಕಾರ ಸಪ್ತಾಹ ಆಚರಣೆ



**ವಿಜಯಪುರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಜಿಲ್ಲಾ ಸಂಪರ್ಕ ಕಛೇರಿ ವಿಜಯಪುರದಲ್ಲಿ ಸಹಕಾರಿ ಸಪ್ತಾಹವನ್ನು ಆಚರಿಸಲಾಯಿತು. ಜಿಲ್ಲಾ ಸಂಪರ್ಕ ಸಹಕಾರಿ ಕಚೇರಿ ವಿಜಯಪುರದಲ್ಲಿ ಲಕ್ಷ್ಮೀ ಪೂಜೆಯ ಕಾರ್ಯಕ್ರಮದೊಂದಿಗೆ ಆರಂಭಗೊಂಡಿತು.

ಕರ್ನಾಟಕ ರಾಜ್ಯ ಸೌಹಾರ್ದಾ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪಾ ಉಪ್ಪಿನ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್., ಶಿವಕಾಂತ ಎನ್., ಹಿರಿಯ ಸಹಕಾರಿಗಳಾದ ಅಮರನಾಥ ಬಿರಾದಾರ, ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ಶಾಖೆ ವಿಜಯಪುರದ ನಿರ್ದೇಶಕರಾದ ಚೆನಬಸಯ್ಯ ಹಿರೇಮಠ, ಶ್ರೀ ಸ್ಥಾವರಮಠ, ರಾಜಶೇಖರ ಸ್ವಾಮಿ ಸಿದ್ಧಸಿರಿ ಹಾಗೂ ಎನ್.ಪಂಚಾಳ, ಶ್ರೀ ಕಲಾದಗಿ, ಗೋವಿಂದರಾಜ, ಮಹಿಳಾ ಸಹಕಾರಿ ಸೌಹಾರ್ದದ ಅಧ್ಯಕ್ಷರುಗಳು ಹಾಗೂ ಜುಮನಾಳ ಸೌಹಾರ್ದದ ಮುಖ್ಯ ಕಾರ್ಯನಿರ್ವಾಹಕ ಮಹಿಳೆಯರು ಭಾಗವಹಿಸಿ ಸಹಕಾರಿ ಸಪ್ತಾಹ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಿದರು.



ಚಾಮರಾಜನಗರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಹಕಾರ ಸಪ್ತಾಹ ಆಚರಣೆ



**ಕೇಂದ್ರ ಕಛೇರಿ :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಧ್ವಜರೋಹಣವನ್ನು ನೇರವೇರಿಸಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ರಾಷ್ಟ್ರದಾದ್ಯಂತ ಆಚರಿಸುತ್ತಿರುವ 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಹಕಾರಿಗಳಿಗೆ ಒಂದು ಹೊಸ ಚೈತನ್ಯವನ್ನು ಮೂಡಿಸುವಂತಹ ಕಾರ್ಯಕ್ರಮವಾಗಿದೆ. ಸಹಕಾರಿ ಕ್ಷೇತ್ರದ ಸಾಧನೆಗಳ ಅವಲೋಕನೆ ಹಾಗೂ ಮುಂಬರುವ ದಿನಗಳಲ್ಲಿ ಸಹಕಾರಿ ಕ್ಷೇತ್ರದ ಸಾಧಿಸಬಹುದಾದ ಪ್ರಗತಿ ಬಗ್ಗೆ ಚಿಂತನೆ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.

ಇದೇ ಸಂದರ್ಭದಲ್ಲಿ ಎಲ್ಲಾ ಸಿಬ್ಬಂದಿವರ್ಗದವರಿಗೆ ಈ ಏಳು ದಿನಗಳಿಗೆ ಮೀಸಲಾಗಿರುವ ಏಳು ವಿಷಯಗಳ ಬಗ್ಗೆ ಪ್ರಬಂಧ ಬರೆಯಲು ಸೂಚಿಸಿದರು. ಉತ್ತಮ ಪ್ರಬಂಧಗಳಿಗೆ ಬಹುಮಾನವಾಗಿ 3000/–, 2000/–, 1000/– ಗಳ ಮೊದಲನೇ, ಎರಡನೇ, ಮೂರನೇಯ ನಗದು ಬಹುಮಾನವನ್ನು ಸಂಯುಕ್ತ ಸಹಕಾರಿ ವತಿಯಿಂದ ಕೊಡಲಾಗುವುದೆಂದು ತಿಳಿಸಿದರು.




**ಶಿವಮೊಗ್ಗ :** 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಅಂಗವಾಗಿ ಶಿವಮೊಗ್ಗ ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾ ಸಭೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

**ಕೇಂದ್ರ ಕಛೇರಿ :** ದಿನಾಂಕ : 06.12.2018 ರಿಂದ 15.12.2018ರವರೆಗೆ ಸೌಹಾರ್ದ ಸಹಕಾರಿಗಳ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ 20ನೇ ತಂಡದ ತರಬೇತಿಯನ್ನು "ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ", ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

## ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಅಭಿವೃದ್ಧಿ ಕ್ರಿಯಾ ಯೋಜನೆ ತರಬೇತಿ ಸಿಬ್ಬಂದಿಗಳ ಕ್ರಿಯಾಶೀಲತೆಗೆ ತರಬೇತಿ ಪೂರಕ - ಬಿ.ಎಸ್. ಗುಂಡುರಾವ

**ಬೆಂಗಳೂರು :** ಪ್ರತಿಯೊಬ್ಬ ಸಿಬ್ಬಂದಿಗಳು ತಮ್ಮ ಕಾರ್ಯದಲ್ಲಿ ಕ್ರಿಯಾಶೀಲತೆ ಹೊಂದಬೇಕಾದರೆ ತರಬೇತಿಗಳು ಪೂರಕವಾಗುತ್ತವೆ ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಬಿ.ಎಸ್. ಗುಂಡುರಾವ ಅಭಿಪ್ರಾಯಪಟ್ಟರು. ಇತ್ತೀಚೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣೆ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಿಬ್ಬಂದಿಗಳಿಗಾಗಿ ಏರ್ಪಡಿಸಿದ ಅಭಿವೃದ್ಧಿ ಕ್ರಿಯಾಯೋಜನೆ ತರಬೇತಿಯ ಉದ್ಘಾಟನೆಯನ್ನು ನೇರವೆರಿಸಿ ಮಾತನಾಡುತ್ತ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಯಾವಾಗಲೂ ಸಿಬ್ಬಂದಿಗಳ ಪರವಾಗಿ ಬೆಂಬಲವಿರುತ್ತದೆ ಆದ್ದರಿಂದ ಎಲ್ಲಾ ಸಿಬ್ಬಂದಿಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಬೇಕೆಂದು ಸಿಬ್ಬಂದಿಗಳಿಗೆ ಕರೆ ನೀಡಿದರು.

ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಂಜೀವ ಮಹಾಜನ, ವೃತಿನಿರ್ದೇಶಕರಾದ ಎಮ್ ಜಿ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು. ಮೊದಲಿಗೆ ಪಾರ್ಥನೆಯನ್ನು ಶ್ರೀಮತಿ ಅಶ್ವಿನಿ ಕಮ್ಮಾರ, ಸ್ವಾಗತವನ್ನು ಉಪಪ್ರಧಾನ ವ್ಯವಸ್ಥಾಪಕರಾದ ವೈ ಕುಮಾರ, ಪ್ರಸ್ತಾವಿಕ ನುಡಿಯನ್ನು ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ್, ನಿರೂಪಣೆಯನ್ನು ಕಾನೂನು ಅಧಿಕಾರಿ ಸೂರ್ಯಕಾಮತ ದ್ಯಾಕಲೆ ನೇರವೆರಿಸಿದರು.

ಉದ್ಘಾಟನೆ ನಂತರ ವೃತಿಪರ ನಿದೇಶಕರಾದ ಎಮ್ ಜಿ. ಪಾಟೀಲ್ ರವರು ಅಭಿವೃದ್ಧಿ ಕ್ರಿಯಾಯೋಜನೆ ಕುರಿತು ಎರಡು ಅವಧಿಗಳು ತೆಗೆದುಕೊಂಡರು ನಂತರ ಸೈಬರ್ ಕ್ರೈಂ ಕುರಿತು ನಿವೃತ ಬ್ಯಾಂಕ ಅಧಿಕಾರಿ ರವೀಂದ್ರ ಇವರು ಉಪನ್ಯಾಸ ನೀಡಿದರು.

ದಿನಾಂಕ ನವೆಂಬರ 26 ರಂದು ಬೆಳಗಿನ ಅವಧಿಯಾದ ವೃತಿಸಂಸ್ಕೃತಿ ಕುರಿತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಭಾಸ್ಕರ ಹೆಗಡೆ ಕಾಗೆರಿ ಉಪನ್ಯಾಸ ನೀಡಿದರು. ನಂತರ ಸಂಯುಕ್ತ ಸಹಕಾರಿಯ ಸಾಫ್ಟ್‌ವೇರ ಕುರಿತು ಮಾಹಿತಿ ನೀಡಿದರು ಮದ್ಯಾಹ್ನ ಊಟದ ನಂತರ ಸಿಬ್ಬಂದಿಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ್ ಸಂವಾದ ಮಾಡಿ ಸಂಯುಕ್ತ ಸಹಕಾರಿಯ ಮುಂದಿನ ಕಾರ್ಯಯೋಜನೆ ಕುರಿತು ಮಾಹಿತಿ ಒದಗಿಸಿದರು.



ನಂತರ ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಮುಖ್ಯಅಥಿತಿಗಳಾಗಿ ಭಾಗವಹಿಸಿ ಮಾತನಾಡಿದ ಕ್ಯಾಂಪ್ಕೊ ಅಧ್ಯಕ್ಷರಾದ ಎಸ್ ಆರ್ ಸತೀಶಚಂದ್ರ ಮಾತನಾಡುತ್ತ ಸಿಬ್ಬಂದಿಗಳು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದರೆ ಸಾಲದು ಇಂದು ಕೌಶಲ್ಯದೊಂದಿಗೆ ವೇಗವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಗುರಿ ಮುಟ್ಟಲು ಸಾಧ್ಯವೆಂದು ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಿದರು. ಇನ್ನೊರ್ವ ಅತಿಥಿಯಾಗಿ ಆಗಮಿಸಿದ ಹಿರಿಯ ಸಹಕಾರಿಗಳಾದ ರಮೇಶ ವೈದ್ಯ ಮಾತನಾಡುತ್ತ ಇಂದು ಸಹಕಾರ ಕ್ಷೇತ್ರ ವೇಗದಲ್ಲಿ ಬೆಳೆಯುತಿದ್ದು ಅವುಗಳ ನಿರ್ವಹಣೆ ಕಡೆ ಗಮನ ಹರಿಸಬೇಕಾಗಿದೆ ಎಂದರು. ಸಮಾರೂಪ ಭಾಷಣವನ್ನು ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಬಿ.ಎಚ್. ಕೃಷ್ಣಾರೆಡ್ಡಿ ಮಾತನಾಡುತ್ತ ಸಂಯುಕ್ತ ಸಹಕಾರಿಯ ಈ ಆಡಳಿತ ಮಂಡಳಿಯು ಐದು ವರ್ಷದ ಕ್ರಿಯಾಯೋಜನೆ ರೂಪಿಸಿ ಅದರಂತೆ ಕಾರ್ಯನಿರ್ವಹಿಸುತಿದೆ ಎಲ್ಲಾ ಪ್ರಾಂತೀಯ ಕಛೇರಿಗಳು ನಮ್ಮ ಅವಧಿಯಲ್ಲಿ ಸ್ವಂತ ಕಟ್ಟಡ ಹೊಂದುವಂತೆ ನಿರ್ಣಯಿಸಲಾಗಿದೆ ಆದ್ದರಿಂದ ಎಲ್ಲಾ ಸಿಬ್ಬಂದಿಗಳು ಉತ್ಸಹದಿಂದ ಕಾರ್ಯನಿರ್ವಹಿಸುವುದರ ಮುಖಾಂತರ ಸೌಹಾರ್ದ ಸಹಕಾರಯ ಚಳುವಳಿಗೆ ಬಲ ತುಂಬುವಂತೆ ಕರೆ ನೀಡಿದರು.

ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ವೃತಿಪರ ನಿರ್ದೇಶಕರಾದ ಎಮ್ ಜಿ ಪಾಟಿಲ್, ಬಿ. ರಾಜಶೇಖರ ಹಾಜರಿದ್ದರು ಮೊದಲಿಗೆ ಸ್ವಾಗತವನ್ನು ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ್. ವಂದನಾರ್ಪನೆಯನ್ನು ಕಾನೂನು ಅಧಿಕಾರಿ ಸೂರ್ಯಕಾಂತ ದ್ಯಾಕಲೆ ನೆರವೇರಿಸಿದರು. ಈ ಎರಡು ದಿನದ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಉಪಸಿಬ್ಬಂದಿಯಿಂದ ಅಧಿಕಾರಿ ವರ್ಗದ 103 ಸಿಬ್ಬಂದಿಗಳು ಭಾಗವಹಿಸಿ ತರಬೇತಿಯ ಲಾಭ ಪಡೆದರು.

# ಮಾರಾಟಾಧಿಕಾರಿಗಳ ತರಬೇತಿ ದಾಖಲಾತಿಗಳು ವ್ಯವಸ್ಥಿತವಾಗಿರಬೇಕು - ಪ್ರಸಾದ್ ರೆಡ್ಡಿ

**ಬೆಂಗಳೂರು :** ದಿನಾಂಕ : 24.11.2018 ರಂದು ಸಂಯುಕ್ತ ಸಹಕಾರಿ ಮತ್ತು ದಾವಾ ಪಂಚಾಯ್ತಿ ನ್ಯಾಯಾಲಯ ಇದರ ಸಹಯೋಗದಲ್ಲಿ ಸೌಹಾರ್ದ ಸಹಕಾರಿಗಳ ಮಾರಾಟಾಧಿಕಾರಿಗಳಿಗೆ ವೃತ್ತಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ಪ್ರಸಾದ್ ರೆಡ್ಡಿ ಇವರು ನೇರವೆರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪೀಠಾಧಿಕಾರಿ ಶ್ರೀ ಪ್ರಸಾದ್ ರೆಡ್ಡಿಯವರು ಮಾತನಾಡಿ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ಇದುವರೆಗೆ ಅಂದರೆ 4 1\2 ತಿಂಗಳಲ್ಲಿ 1115 ಕೇಸುಗಳನ್ನು ತೀರ್ಮಾನಸಲಾಗಿದೆ. ನ್ಯಾಯಾಲಯ ಒಂದು ಸಂಸ್ಥೆವಿದ್ದಂತೆ ಅಲ್ಲಿ ಶಿಸ್ತು ಅತಿ ಮುಖ್ಯ ಅಲ್ಲಿ ದಾಖಲಾತಿಗಳು ಕ್ರಮ ಬದ್ಧವಾಗಿರಬೇಕು, ದಾಖಲಾತಿಗಳು ಪರಿವಿಡಿಯಿರಬೇಕು. ಹೀಗಾದರೆ ಮಾತ್ರ ಕೋರ್ಟ್‌ನ ಸಮಯ ತಿಳಿಯುತ್ತದೆ. ಸಂಯುಕ್ತ ಸಹಕಾರಿ ಉತ್ತಮವಾಗಿ ಕೆಲಸನಿರ್ವಹಿಸುತ್ತದೆ. ಈ ತರಹದ ತರಬೇತಿ ಕಾರ್ಯಕ್ರಮಗಳು ಇನ್ನೂ ಹೆಚ್ಚಿಗೆ ಆಗಬೇಕು. ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಅತ್ಯಂತ ಪ್ರಮುಖ ವಿಷಯಗಳನ್ನು ಪ್ರಕಟಿಸುತ್ತಿದ್ದಾರೆ ಇದೆಲ್ಲವನ್ನು ಸಹಕಾರಿಗಳ ಅಧಿಕಾರಿಗಳು ಗಮನಿಸಬೇಕು ಎಂದು ತಿಳಿಸಿದರು. ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುಂಡುರಾವ್, ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಭಾಸ್ಕರ ಹೆಗಡೆ ಕಾಗೇರಿಯವರು, ಶ್ರೀ ಎಸ್.ಎಸ್ ಕಟಗೇರಿ, ಶ್ರೀ ಪಿ.ಎಂ ಜಾರ್ಜ್ ಮತ್ತು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಸಹಾಯಕ ನಿಬಂಧಕರು ಹಾಗೂ ಮಾರಾಟಾಧಿಕಾರಿಗಳಾದ ಶ್ರೀ ವೈ.ಟಿ ಮೋಹನ್ ಕುಮಾರ್ ಉಪಸ್ಥಿತರಿದ್ದರು. ತರಬೇತಿಯು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರಿನಲ್ಲಿ ನಡೆಯಿತು. ಸದರಿ ತರಬೇತಿಯಲ್ಲಿ 36 ಸೌಹಾರ್ದ ಸಹಕಾರಿಗಳಿಂದ 90 ಪ್ರತಿನಿಧಿಗಳು ಭಾಗವಹಿಸಿದರು.



# ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಉಪಸಿಬ್ಬಂದಿಗಳಿಗೆ ವೃತ್ತಿ ಸಂಸ್ಕೃತಿ ತರಬೇತಿ

**ಬೆಂಗಳೂರು :** ದಿನಾಂಕ : 25.11.2018ರಂದು ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಉಪಸಿಬ್ಬಂದಿಗಳಿಗಾಗಿ "ವೃತ್ತಿ ಸಂಸ್ಕೃತಿ" ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯ ಉಪನಿರ್ದೇಶಕರಾದ ಶ್ರೀ ಷಡಕ್ಷರಿ ಇವರು ನೇರವರಿಸಿ ಮಾತನಾಡುತ್ತ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮವು ಅತ್ಯಂತ ವಿಭಿನ್ನವಾಗಿ ಹಾಗೂ ಉತ್ತಮವಾಗಿ ನಡೆಯುತ್ತಿರುವುದು ತುಂಬ ಸಂತೋಷದ ವಿಚಾರ. ಒಂದು ಸಹಕಾರ ಸಂಸ್ಥೆಯ ಕಟ್ಟಕಡೆಯ ಅಧಿಕಾರಿ ಆಗಿರುವ ಉಪಸಿಬ್ಬಂದಿಯವರು ಸಂಸ್ಥೆಯ ಮುಖ್ಯ ವಾಹಿನಿಯಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಯಾಗಿರುತ್ತಾರೆ. ಅವರಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗು ತಮ್ಮ ಪಾತ್ರದ ಬಗ್ಗೆ ಮಾಹಿತಿ ಅಗತ್ಯವೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್ ರವರು ಮಾತನಾಡಿ ಸಂಯುಕ್ತ ಸಹಕಾರಿಯ ವತಿಯಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಎಲ್ಲಾ ವರ್ಗದ ಸಿಬ್ಬಂದಿಯವರಿಗೂ ಪ್ರತ್ಯೇಕ ತರಬೇತಿಗಳನ್ನು ಆಯೋಜನೆ ಮಾಡುತ್ತ ಬಂದಿದೆ. ಸೌಹಾರ್ದ ಸಹಕಾರಿಯ ಉಪಸಿಬ್ಬಂದಿಯವರು ತಮ್ಮ ಸಹಕಾರಿಯ ಎಲ್ಲಾರೊಡನೆ ಅತ್ಯಂತ ಉತ್ತಮ ಭಾದವ್ಯ ಹೊಂದಲು ಈ ತರಬೇತಿ ಪ್ರಯೋಜನವಾಗುತ್ತದೆವೆಂದು ಹೇಳಿದರು.



ಕಾರ್ಯಕ್ರಮದಲ್ಲಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಯಾದ ನಾರಾಯಣ ಹೆಗಡೆ ಇವರುಗಳು ಉಪಸ್ಥಿತರಿದ್ದರು.

ಸಮಾರೋಪ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಂಜೀವ ಮಹಾಜನ ರವರು ಅಧ್ಯಕ್ಷತೆಯನ್ನು ವಹಿಸಿದರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ಇವರು ಶಿಬಿರಾರ್ಥಿಗಳೊಂಡನೆ ಸಮಲೋಚನೆ ನಡೆಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ 16 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಲಾಭ ಪಡೆದರು.

# ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಹಕರುಗಳಿಗಾಗಿ ಉನ್ನತ ಮಟ್ಟದ ತರಬೇತಿ - ಬೆಳಗಾವಿ



**ಬೆಳಗಾವಿ :** ಬೆಳಗಾವಿ ವಿಭಾಗದ ನವೆಂಬರ್ ಮಾಹೆಯಲ್ಲಿ 2 ದಿನಗಳ ಉನ್ನತ ಮಟ್ಟದ ತರಬೇತಿಯನ್ನು ಬೆಳಗಾವಿ ಜಿಲ್ಲೆಯ 7 ಕೋಟಿಗೂ ಅಧಿಕ ದುಡಿಯುವ ಬಂಡವಾಳವನ್ನು ಹೊಂದಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ "ಉನ್ನತ ಮಟ್ಟದ ತರಬೇತಿ" ದಿನಾಂಕ 14 ನವೆಂಬರ್ 2018 ರಂದು ಹೊಟೇಲ್ ಸನ್ಮಾನ, ಗಾಂಧಿ ಭವನ ಹತ್ತಿರ ಕಾಲೇಜ್ ರೋಡ, ಬೆಳಗಾವಿ ಇಲ್ಲಿ ಜರುಗಿಸಲಾಯಿತು ಮತ್ತು ದಿನಾಂಕ 15 ನವಂಬರ್ 2018 ರಂದು ಇದೇ ಸಹಕಾರಿಯ ಅಧ್ಯಕ್ಷರುಗಳಿಗಾಗಿ ಸಮಾಲೋಚನಾ ಸಭೆಯನ್ನು ಕೆ.ಎಲ್.ಇ. ಸಂಸ್ಥೆಯ ಜೀರಿಗೆ ಸಭಾಭವನದಲ್ಲಿ ನಡೆಸಲಾಯಿತು.

ಸದರಿ ಸಭೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಡಾ॥ ಪ್ರಭಾಕರ ಕೋರೆ, ಮಾನ್ಯ ರಾಜ್ಯ ಸಭಾ ಸದಸ್ಯರು ಹಾಗೂ ಕಾರ್ಯಾಧ್ಯಕ್ಷರು ಕೆ.ಎಲ್.ಇ. ಸಂಸ್ಥೆ ಬೆಳಗಾವಿ. ಮುಖ್ಯ ಅತಿಥಿಗಳಾಗಿ ಶ್ರೀ ಮಹಾಂತೇಶ ದೊಡ್ಡಗೌಡರ ಮಾನ್ಯ ವಿಧಾನಸಭಾ ಸದಸ್ಯರು, ಕಿತ್ತೂರು ಮತ್ತು ನಿರ್ದೇಶಕರು ಬಿ.ಡಿ.ಸಿ.ಸಿ ಬ್ಯಾಂಕ್ ನಿ., ಬೆಳಗಾವಿ. ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ರಾವಸಾಹೇಬ ಅ. ಪಾಟೀಲ, ಮಾನ್ಯ ಅಧ್ಯಕ್ಷರು, ಅರಿಹಂತ ಸೌಹಾರ್ದ ಸಹಕಾರಿ ನಿ., ಬೋರಗಾಂವ ಹಾಗೂ ಶ್ರೀ ಕೆ ಎಲ್ ಶ್ರೀನಿವಾಸ್, ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಬೆಳಗಾವಿ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ವಹಿಸಿದ್ದರು. ಸಭೆಯಲ್ಲಿ 113 ಸೌಹಾರ್ದ ಸಹಕಾರಿಗಳಿಂದ 94 ಅಭ್ಯರ್ಥಿಗಳು ಹಾಜರಿದ್ದರು.

## ಕಾರ್ಯಕ್ರಮದ ವಿವರ

ದಿನಾಂಕ 14 ನವಂಬರ್ 2018 ಬುಧವಾರದಂದು ಸಭೆಯು ಪ್ರಾರ್ಥನೆಯ ಮೂಲಕ ಪ್ರಾರಂಭವಾಯಿತು. ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮದ ಉದ್ದೇಶವನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಯಾದ ಶ್ರೀಕಾಂತ ಬರುವೆ ಇವರು ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮವನ್ನು ಡಾ॥ ಪ್ರಭಾಕರ ಕೋರೆ, ಮಾನ್ಯ ರಾಜ್ಯ ಸಭಾ ಸದಸ್ಯರು ಹಾಗೂ ಕಾರ್ಯಾಧ್ಯಕ್ಷರು ಕೆ.ಎಲ್.ಇ. ಸಂಸ್ಥೆ ಬೆಳಗಾವಿ. ಇವರು ಸಸಿಗೆ ನೀರೆರೆವುದರ ಮೂಲಕ ಚಾಲನೆ ನೀಡಿದರು. ಸಭೆಗೆ ಚಾಲನೆ ನೀಡುವುದರ ಮೂಲಕ ಮಾತನಾಡುತ್ತಾ ಸಹಕಾರಿಗಳು ತಮ್ಮ ಠೇವುಗಳಿಗೆ ಹೆಚ್ಚಿನ ಬಡ್ಡಿದರ ನೀಡುವುದರ ಹಾಗೂ ಸಾಲಗಳಿಗೆ ಹೆಚ್ಚು ಬಡ್ಡಿದರವನ್ನು ವಿಧಿಸುವುದನ್ನು ಮಿತಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಸಹಕಾರಿ ಸಂಘಗಳು ಠೇವಣಿಗಳನ್ನು ಮತ್ತು ಸಾಲಗಳ ಮೇಲೆ ಆಕರ್ಷಕ ಬಡ್ಡಿದರ ನೀಡುತ್ತಿರುವುದರಿಂದ ಸರಕಾರ ಇತ್ತ ಗಮನ ಹರಿಸುತ್ತಿದ್ದು, ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆ ಇದೆ. ಹೀಗಾಗಿ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಹಕಾರಿ ಸಂಘಗಳ ಸದಸ್ಯರಿಗೆ ಆಯಕರ ಕಾನೂನಿನಲ್ಲಿ ಕೆಲ ಸವಲತ್ತುಗಳಿದ್ದು ಆದರೆ ಆದಾಯ ತೆರಿಗೆ ಇಲಾಖೆಯಿಂದ ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳಲ್ಲ ಎಂದು ನಿರ್ಧರಿಸಿ ಸೌಹಾರ್ದ ಸಹಕಾರಿಗಳಿಗೆ ಟಿಡಿಎಸ್ ಫಾರ್ಮಗೆ ಆದಾಯ ತೆರಿಗೆ ಪಾವತಿಗೆ ನೋಟಿಸ್ ನೀಡಲಾಗುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಕೇಂದ್ರ ವಿತ್ತ ಸಚಿವರಿಗೆ ಶ್ರೀ ಪ್ರಭಾಕರ ಕೋರೆಯವರೊಂದಿಗೆ ಭೇಟಿ ಮಾಡಿ ಮನವಿ ಸಲ್ಲಿಸಿರುತ್ತದೆ. ಇಂತಹ ಐದಾರು ಭೇಟಿಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಆಗಿರುವ ಆಯಕರ ಕಾಯ್ದೆಯಲ್ಲಿನ ತೊಂದರೆಗಳ ಬಗ್ಗೆ ಅವರ ಗಮನಕ್ಕೆ ತರಲಾಗಿದೆ. ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ರಾಜ್ಯ ಸರ್ಕಾರದ ಸಹಕಾರ ಮಂತ್ರಿಗಳಿಗೆ ಈ ಅಡಚಣೆಗಳ ಬಗ್ಗೆ ಭೇಟಿ ಮಾಡಿದಾಗ ಸೌಹಾರ್ದ ಸಹಕಾರಿಗಳಿಗೆ ಸಂಘ ಎಂದು ಸೇರಿಸುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ತಿಳಿಸಿರುತ್ತಾರೆ ಮತ್ತು ಇದರ ಬಗ್ಗೆ ಬರುವ ಬೆಳಗಾವಿ ಅಧಿವೇಶನದಲ್ಲಿ ಮುಂದಿನ ಕ್ರಮ ಜರುಗಿಸುವುದಾಗಿ ತಿಳಿಸಿರುತ್ತಾರೆ. ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿರುತ್ತಾರೆ.

ಬೆಳಗಿನ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ನಿವೃತ್ತ ಸಹಾಯಕ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ ಇವರು ಹಣಕಾಸಿನ ನಿರ್ವಹಣೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಗಳ ಅಧ್ಯಯನದ ಕುರಿತು ಶ್ರೀ ಮಹಾದೇವಸ್ವಾಮಿ, ನಿವೃತ್ತ ಆರ್.ಬಿ.ಐ, ಅಧಿಕಾರಿಗಳು, ಇವರು ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಶ್ರೀ ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು ಇವರು ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು ಈ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಭೋಜನ ವಿರಾಮದ ನಂತರ ಮಧ್ಯಾಹ್ನದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು ಇವರು

ಸಹಕಾರ ಕ್ಷೇತ್ರದ ಸುಸ್ಥಿರ ಅಭಿವೃದ್ಧಿ ವಿಷಯವಾಗಿ ಉಪನ್ಯಾಸ ನೀಡಿದರು

ತರಬೇತಿಯ ಎರಡನೆಯ ದಿನವಾದ ಗುರುವಾರ ದಿನಾಂಕ 15 ನವಂಬರ್ 2018 ರಂದು ಬೆಳಗ್ಗೆ 10.30 ರಿಂದ 12.00 ರವರೆಗೆ ಶ್ರೀ ಬಿ.ವಿ.ರವೀಂದ್ರನಾಥ ರವರು ವ್ಯಕ್ತಿತ್ವ ವಿಕಸನ ವಿಷಯವಾಗಿ ಉಪನ್ಯಾಸ ನೀಡಿದರು. ಲಘು ವಿರಾಮದ ನಂತರ 12.00 ರಿಂದ 1.30ರ ವರೆಗೆ "ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ" ವಿಷಯದ ಕುರಿತು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎಂ.ರವಿ. ಇವರು "ಸಹಕಾರ ಕ್ಷೇತ್ರದಲ್ಲಿನ ಸವಾಲುಗಳು ಮತ್ತು ಅವಕಾಶಗಳು" ವಿಷಯದ ಕುರಿತು, ಶ್ರೀ ಮಹಾದೇವಸ್ವಾಮಿ, ಆರ್ ಬಿ ಐ ಅಧಿಕಾರಿ(ನಿವೃತ್ತ) ಇವರು "ಸಹಕಾರ ಸಂಸ್ಥೆಗಳಲ್ಲಿ ಪರಿಣಾಮಕಾರಿ ಲೆಕ್ಕ ಪತ್ರ ನಿರ್ವಹಣೆ" ವಿಷಯದ ಕುರಿತು, ಶ್ರೀ ಅನೂಪ ದೇಶಪಾಂಡೆ ಇವರು "ಸುಸ್ಥಿರ ಅಭಿವೃದ್ಧಿಯಲ್ಲಿ ಕಾನೂನಿನ ಪಾತ್ರ" ವಿಷಯದ ಕುರಿತು ಸಂವಾದದ ಮೂಲಕ ಚರ್ಚಿಸಿದರು ಹಾಗೂ ಶ್ರೀ ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕ ಪರಿಶೋಧಕರು ಇವರು "ಸಹಕಾರಿ ಸಂಸ್ಥೆಗಳಲ್ಲಿ ಪರಿಣಾಮಕಾರಿ ಲೆಕ್ಕಪತ್ರ ನಿರ್ವಹಣೆ" ವಿಷಯದ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಸಂವಾದ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿತ್ತು.

---

ಸಮಾರೋಪ ಸಮಾರಂಭದ ಅತಿಥಿಗಳಾಗಿ ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಮಾನ್ಯ ಅಧ್ಯಕ್ಷರು ಕರ್ನಾಟಕ ಎಣ್ಣೆ ಬೆಳೆಗಾರರ ಮಹಾಮಂಡಳ ನಿ., ಮತ್ತು ಜೊಲ್ಲೆ ಉದ್ಯೋಗ ಸಮೂಹ, ಯಕ್ಸಂಬಾ, ಇವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಇಂದಿನ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸೌಹಾರ್ದ ಸಹಕಾರಿಗಳು ಹೆಚ್ಚಾಗಿ ಹುಟ್ಟುತ್ತಿದ್ದು, ಅವುಗಳು ಸರಿಯಾಗಿ ಕಾನೂನು ಪಾಲನೆ ಮಾಡಿ, ನಿಯಮಗಳಿಗನುಸಾರ ನಡೆದರೆ, ಯಾವುದೇ ಸಮಸ್ಯೆಗೆ ಸಿಲುಕದೆ, ಸಹಕಾರಿಯ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಜಗದೀಶ ಕವಟಗಿಮಠ, ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು., ಇವರು ಬೆಳಗಾವಿ ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿ ಪ್ರೋತ್ಸಾಹಿಸುವಂತೆ ಸಹಕಾರಿಗಳಿಗೆ ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಮಹಾಂತೇಶ ಕವಟಗಿಮಠ, ಮಾನ್ಯ ಮುಖ್ಯ ಸಚೇತಕರು, ವಿರೋಧ ಪಕ್ಷ ವಿಧಾನ ಪರಿಷತ್ತು, ಕರ್ನಾಟಕ ಸರ್ಕಾರ, ಇವರು ಸೌಹಾರ್ದ ಸಹಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತ, ಮುಂಬರುವ ಚಳಿಗಾಲ ಅಧಿವೇಶನದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡೆಗೆ ಪ್ರಸ್ತಾವನೆ ಬಂದರೆ, ವಿರೋಧ ಪಕ್ಷದಿಂದ ಅಗತ್ಯವಾದ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು. ಹಾಗೂ ಬೆಳಗಾವಿಯ ಪ್ರಾಂತೀಯ ಕಛೇರಿಯ ಸ್ವಂತ ಕಟ್ಟಡ ನಿರ್ಮಾಣಕ್ಕೆ ಸಹಕಾರಿಗಳು ದೇಣಿಗೆ ನೀಡಿ ಸಹಕರಿಸಬೇಕು ಎಂದರು.

ಈ ಕಾರ್ಯಕ್ರಮಕ್ಕೆ 109 ಸೌಹಾರ್ದ ಸಹಕಾರಿಗಳಿಂದ 55 ಅಧ್ಯಕ್ಷರುಗಳು



ಆಗಮಿಸಿದ್ದರು. ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಸಂಯುಕ್ತ ಸಹಕಾರಿಗೆ ಸ್ವಂತ ಕಟ್ಟಡ, ಸೌಹಾರ್ದ ಸಹಕಾರಿಗಳಿಗಾಗಿ ಗುಣಮಟ್ಟದ ತರಬೇತಿ ಕೇಂದ್ರವನ್ನು ನಿರ್ಮಿಸುವುದು, ಸೇರಿದಂತೆ ಮುಂದಿನ ಕಾರ್ಯ ಯೋಜನೆಗಳ ಕುರಿತು ಹಾಗೂ ಅದಕ್ಕೆ ಅವಶ್ಯಕವಾದ ಸಂಪನ್ಮೂಲಗಳ ಕ್ರೋಢಿಕರಣದ ಕುರಿತು ಸೌಹಾರ್ದ ಸಹಕಾರಿಗಳೊಂದಿಗೆ ಚರ್ಚಿಸಿದರು ಮತ್ತು ಸದಸ್ಯ ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳನ್ನು ತಿಳಿದುಕೊಂಡರು ಪ್ರತಿ ಜಿಲ್ಲೆಯಲ್ಲಿ ಸೌಹಾರ್ದ ಒಕ್ಕೂಟಗಳು ರಚನೆಯಾಗುತಿದ್ದು ತಮ್ಮ ತಮ್ಮ ಜಿಲ್ಲೆಗಳ ಒಕ್ಕೂಟಗಳಲ್ಲಿ ಸದಸ್ಯತ್ವವನ್ನು ಹೊಂದುವ ಮೂಲಕ ಸಂಯುಕ್ತ ಸಹಕಾರಿಯನ್ನು ಜಿಲ್ಲಾ ಮಟ್ಟದಲ್ಲಿ ಬಲ ಪಡಿಸಲು ಸದಸ್ಯ ಸಹಕಾರಿಗಳಲ್ಲಿ ಕೋರಿದರು. ಈ ಸಂವಾದ ಅಧ್ಯಕ್ಷತೆಯನ್ನು ಶ್ರೀಯುತ ಭಾಸ್ಕರ ಹೆಗಡೆ, ಉಪಾಧ್ಯಕ್ಷರು ಕೆಡಿಸಿಸಿ ಬ್ಯಾಂಕ, ಇವರು ವಹಿಸಿದ್ದರು. ಸಂವಾದಕಾರರಾಗಿ ಶ್ರೀ ಅಮೃತ ಜೋಶಿ, ನಿರ್ದೇಶಕರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ, ಇವರು ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

---

## ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ತರಬೇತಿ - ಕಲಬುರಗಿ

**ಕಲಬುರಗಿ :** ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ತರಬೇತಿ ಕಾರ್ಯಕ್ರಮವನ್ನು ಚೆಂಬರ ಆಫ್ ಕಾಮರ್ಸ್ ಹಮ್ಮಿಕೊಳ್ಳಲಾಗಿತ್ತು. ಈ ಒಂದು ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಸಂಜೀವ ಮಹಾಜನರವರು ಆಗಮಿಸಿದ್ದರು ದೀಪ ಪ್ರಜ್ವಲಿಸುವದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಾಯ.ಟಿ.ಪಾಟೀಲರವರು ವಹಿಸಿಕೊಂಡಿದರು.



ಅದೇ ರೀತಿ ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿರುವ ಶ್ರೀ ಚಂದ್ರಶೇಖರ ಪರಸರೆಡ್ಡಿ ರವರು ಹಾಗೂ ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ರಾಜಶೇಖರ.ಹೆಚ್‌ರವರು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಜೋಷಿರವರು ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಗಳು ಸ್ವಾಗತವನ್ನು ಕೋರಿ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಹಕಾರಿಗಳು ಸಂಯುಕ್ತ ಸಹಕಾರಿಯ ಕಾಯ್ದೆಯ ಪರಿಪಾಲನೆ ಮಾಡಬೇಕು ಹಾಗೂ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಈ ಒಂದು ತರಬೇತಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಂಜೀವ ಮಹಾಜನರವರು ತಮ್ಮ ಉದ್ಘಾಟಣಾ ಭಾಷಣದಲ್ಲಿ ಮುಖ್ಯಕಾರ್ಯನಿರ್ವಾಹಕರು ಸಕ್ರಿಯವಾಗಿ ಭಾಗವಹಿಸಿ ಇದರ ಲಾಭವನ್ನು ತಾವುಗಳು ಪಡೆದಕೊಳ್ಳಬೇಕು ಹಾಗೂ ಪ್ರತಿಯೊಂದು ಸಹಕಾರಿಗಳು ತಮ್ಮ ಕಛೇರಿಗಳಲ್ಲಿ ಸಂಯುಕ್ತ ಸಹಕಾರಿಯ ಕಾಯ್ದೆಯ ಪುಸ್ತಕವನ್ನು ಹೊಂದಿರಬೇಕು. ಒಂದು ಸಹಕಾರಿಯು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಅತ್ಯಗತ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು ಮಾತನಾಡಿ ಸಹಕಾರಿಗಳು ಶಿಸ್ತು ಹಾಗೂ ಸಮಯಪಾಲನೆಯನ್ನು ತಮ್ಮಲ್ಲಿ ಅಳವಡಿಸಿಕೊಂಡಿದರೆ ಸಹಕಾರಿಗಳು ಬೆಳೆಯಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶರಾದ ಶ್ರೀ ವೈ.ಟಿ.ಪಾಟೀಲರವರು ಮಾತನಾಡುತ್ತಾ ಮುಖ್ಯಕಾರ್ಯನಿರ್ವಾಹಕರು ತಮ್ಮ ಸಹಕಾರಿಯ ಉಪವಿಧಿಗಳನ್ನು ಓದಬೇಕು ಮತ್ತು ಸಂಯುಕ್ತ ಸಹಕಾರಿ ಹಮ್ಮಿಕೊಳ್ಳುವ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು ಮತ್ತು ಅದರ ಲಾಭವನ್ನು ತಾವು ಎಲ್ಲರೂ ಪಡೆದುಕೊಳ್ಳಬೆಕು ಎಂದು ತಿಳಿಸಿದರು. ಹಾಗೂ ಕಾನೂನು ಅಧಿಕಾರಿಗಳಾದ ಸೂರ್ಯಕಾಂತ ರ‍್ಯಾಕಲೆರವರು ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮದ ಮೊದಲನೆ ಅವಧಿಯನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಸ್.ಜಿ.ಜೋಷಿರವರು ಸಾಲ ವಸೂಲಾತಿ ಬಗ್ಗೆ ಹೇಳಿದರು.

ಎರಡನೇ ಅವಧಿಯನ್ನು ದಾವಾ ದಾಖಲಾತಿಯ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಸಮಾರೊಪ ಸಮಾರಂಭದ ಸಭೆಯಲ್ಲಿ ಎಲ್ಲ ಸಹಕಾರಿಗಳ ಕುಂದು ಕೊರತೆಗಳನ್ನು ಆಹ್ವಾಲಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 85 ಸಹಕಾರಿಗಳಿಂದ 95 ಸದಸ್ಯರು ಭಾಗವಹಿಸಿದರು.

## ವಿಷಯಾಧಾರಿತ ತರಬೇತಿ – ಬಳ್ಳಾರಿ

ದಿನಾಂಕ : 22.11.2018 ರಂದು ಬಳ್ಳಾರಿ ಜಿಲ್ಲೆಯ, ಬಳ್ಳಾರಿ, ಸಂಡೂರು ಮತ್ತು ಸಿರಗುಪ್ಪ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ/ ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಹೋಟೆಲ್ ನಕ್ಷತ್ರ ಅಜನಾ ಡಯಾಗ್ನೊಸ್ಟಿಕ್ ಸೆಂಟರ್ ಎದುರಿಗೆ, ಗಾಂಧಿನಗರ, ಬಳ್ಳಾರಿ ಹಮ್ಮಿಕೊಳ್ಳಲಾಗಿತ್ತು. ಈ ಒಂದು ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಆಗಮಿಸಿದ್ದರು ದೀಪ ಪ್ರಜ್ವಲಿಸುವದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಮೇಘ ಸೌಹಾರ್ದದ ಉಪಾಧ್ಯಕ್ಷರಾಗಿರುವ ಸತ್ಯನಾರಾಯಣರವರು ಉಪಸ್ಥಿತರಿದ್ದರು ಹಾಗೂ ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ರಾಜಶೇಖರ. ಹೆಚ್ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಿ.ಎ.ಬೊರಯ್ಯರವರು ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಗಳು ಸ್ವಾಗತವನ್ನು ಕೋರಿ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಹಕಾರಿಗಳು ಸಂಯುಕ್ತ ಸಹಕಾರಿಯ ಕಾಯ್ದೆಯ ಪರಿಪಾಲನೆ ಮಾಡಬೇಕು ಹಾಗೂ ಸಹಕಾರಿಗಳ ಅಧ್ಯಕ್ಷರಿಗೆ/ಮುಖ್ಯಕಾರ್ಯನಿರ್ವಾಹಕರು ಈ ಒಂದು ತರಬೇತಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದರು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕ.ರಾ.ಸೌ.ಸಂ.ಸ.ನಿ., ಮಾನ್ಯ



ಶ್ರೀ ವಿಶ್ವನಾಥ ಚ ಹಿರೇಮಠ ತಮ್ಮ ಉದ್ಘಾಟಣಾ ಭಾಷಣದಲ್ಲಿ ಅಧ್ಯಕ್ಷರಿಗೆ/ ಮುಖ್ಯಕಾರ್ಯನಿರ್ವಾಹಕರು ಸಕ್ರಿಯವಾಗಿ ಭಾಗವಹಿಸಿ ಇದರ ಲಾಭವನ್ನು ತಾವುಗಳು ಪಡೆದಕೊಳ್ಳಬೇಕು ಹಾಗೂ ಪ್ರತಿಯೊಂದು ಸಹಕಾರಿಗಳು ತಮ್ಮ ಕಛೇರಿಗಳಲ್ಲಿ ಸಂಯುಕ್ತ ಸಹಕಾರಿಯ ಕಾಯ್ದೆಯ ಪುಸ್ತಕವನ್ನು ಹೊಂದಿರಬೇಕು. ಒಂದು ಸಹಕಾರಿಯು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಅತ್ಯಗತ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಮೇಘ ಸೌಹಾರ್ದದ ಉಪಾಧ್ಯಕ್ಷರಾಗಿರುವ ಸತ್ಯನಾರಾಯಣರವರು ಮಾತನಾಡಿ ಸಹಕಾರಿಗಳು ಶಿಸ್ತು ಹಾಗೂ ಸಮಯಪಾಲನೆಯನ್ನು ತಮ್ಮಲ್ಲಿ ಅಳವಡಿಸಿಕೊಂಡಿದರೆ ಸಹಕಾರಿಗಳು ಬೆಳೆಯಲು ಸಾಧ್ಯ ಎಂದು ತಿಳಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 30 ಸೌಹಾರ್ದ ಸಹಕಾರಿಗಳಿಂದ 73 ಪ್ರತಿನಿಧಿಗಳು ಕಾರ್ಯಕ್ರಮದ ಪ್ರಯೋಜನೆಯನ್ನು ಪಡೆದರು.

# ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ – ಕೊಪ್ಪಳ

**ಕೊಪ್ಪಳ :** ದಿನಾಂಕ : 30.11.2018 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ ಕಾರ್ಯ್ರಮವನ್ನು "ಪಿ.ಸಿ. ಮಲ್ಲಿಕಾರ್ಜುನ್ ಭವನ", ಕೊಪ್ಪಳ ರಸ್ತೆ, ಕುಷ್ಟಗಿ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಒಂದು ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದವರು ಮಾನ್ಯ ಉಪ ನಿಬಂಧಕರಾದ ಶ್ರೀ ಎಂ.ಪಿ.ಶಿಳ್ಳಿಕೇರಿ, ಇವರು ಆಗಮಿಸಿ ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು ಹಾಗೂ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ವಹಿಸಿಕೊಂಡಿದರು ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಸ್ವಂದನ ವಿವಿದ್ದೋದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ದೊಡ್ಡಬಸವೇಶ್ವರ ಸೌಹಾರ್ದ



ಸಹಕಾರಿಯ ಅಧ್ಯಕ್ಷರಾದ ಶ್ರೀ ದೇವೇಂದ್ರಪ್ಪ ಬಲೊಟಗಿ ಉಪಸ್ಥಿತರಿದ್ದರು ಹಾಗೂ ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ರಾಜಶೇಖರ. ಹೆಚ್‌ರವರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಜೋಶಿರವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 101 ಸೌಹಾರ್ದ ಸಹಕಾರಿಗಳಿಂದ 130 ಪ್ರತಿನಿಧಿಗಳು ಕಾರ್ಯಕ್ರಮದ ಪ್ರಯೋಜನೆಯನ್ನು ಪಡೆದರು.

# ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ – ರಾಯಚೂರು

**ರಾಯಚೂರು :** ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿಯನ್ನು ದಿನಾಂಕ : 29.11.2018ರಂದು "ವಿನಯ ರೆಸಿಡೆನ್ಸಿ, ಗಂಗಾವತಿ ರಸ್ತೆ, ಸಿಂಧನೂರು ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಉದ್ಘಾಟಿಸಿ ಮಾತನಾಡಿ ಸಹಕಾರ ಕ್ಷೇತ್ರಗಳ ಸುಧಾರಣೆಗೆ ಸಾಕಷ್ಟು ಹೊಸ ಕಾನೂನು ಬಂದಿವೆ. ಈ ಕಾರಣಕ್ಕಾಗಿ ಇತ್ತೀಚೆಗೆ ಸಂಘ, ಸಂಸ್ಥೆಗಳು ಸಮೃದ್ಧವಾಗಿ



ಬೆಳೆಯುತ್ತಿವೆ. ಅಲ್ಲದೇ ಆದಾಯ ತೆರಿಗೆ ಅಧಿಕಾರಿಗಳು ಸೌಹಾರ್ದ ಸಹಕಾರಿಗಳಿಗೆ ಮೇಲಿಂದ ಮೇಲೆ ನೋಟಿಸಗಳನ್ನು ಕಳುಹಿಸುತ್ತಿದ್ದಾರೆ. ಹಾಗಾಗಿ ಸಹಕಾರಿಗಳು ಮುನ್ನಚ್ಚೆರಿಕೆ ವಹಿಸಿ ವ್ಯವಹಾರಗಳನ್ನು ನಡೆಸಬೇಕಾಗುತ್ತದೆಂದು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ರಾಜಶೇಖರವರು ವಹಿಸಿದ್ದರು. ವೇದಿಕೆ ಮೇಲೆ ಉಪನ್ಯಾಸಕರಾದ ಶ್ರೀ ಎಸ್.ಜಿ.ಜೋಶಿ ಉಪಸ್ಥಿತರಿದ್ದರು. ಪ್ರಸ್ತಾವಿಕ ಹಾಗೂ ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ರಾಜಶೇಖರ ಹೆಚ್. ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 116 ಸೌಹಾರ್ದ ಸಹಕಾರಿಗಳಿಂದ 138 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

# ವಿಷಯಾಧಾರಿತ ತರಬೇತಿ – ಹೊಸಪೇಟೆ

ದಿನಾಂಕ : 23.11.2018 ರಂದು ಬಳ್ಳಾರಿ ಜಿಲ್ಲೆಯ, ಹೊಸಪೇಟೆ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ / ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಹೋಟೆಲ್ ಮಲ್ಲಿಗೆ, ಲಕ್ಷ್ಮೀ ಸರಸ್ವತಿ ಚಿತ್ರ ಮಂದಿರ ಹತ್ತಿರ, ಹೊಸಪೇಟೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಒಂದು ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದವರು ಅನಂತಕೃಷ್ಣ ಸೌಹಾರ್ದದ ಅಧ್ಯಕ್ಷರಾಗಿರುವ ಕೃಷ್ಣಮೂರ್ತಿರವರು ಆಗಮಿಸಿದ್ದರು ದೀಪಪ್ರಜ್ವಲಿಸುವದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಆರ್.ಡಿ ಸೋನಿ ಸೌಹಾರ್ದದ ಅಧ್ಯಕ್ಷರು ಉಪಸ್ಥಿತರಿದ್ದರು ಹಾಗೂ ಅಧ್ಯಕ್ಷತೆಯನ್ನು ಕ.ರಾ.ಸೌ.ಸಂ.ಸ.ನಿ., ಮಾನ್ಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ



ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ವಹಿಸಿಕೊಂಡಿದರು. ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ರಾಜಶೇಖರ.ಹೆಚ್‌ರವರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಿ.ಎ.ಬೊರಯ್ಯರವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 37 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಕಾರ್ಯಕ್ರಮದ ಪ್ರಯೋಜನೆಯನ್ನು ಪಡೆದರು.

## ವಿಷಯಾಧಾರಿತ ತರಬೇತಿ - ಹಗರಿಬೊಮ್ಮನಹಳ್ಳಿ



ದಿನಾಂಕ : 24.11.2018ರಂದು ಬಳ್ಳಾರಿ ಜಿಲ್ಲೆಯ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಮತ್ತು ಕೂಡ್ಲಿಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ / ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಶ್ರೀ ಹಾಲ್ ಸ್ವಾಮಿ ಮಠ, ಆಂದ್ರ ಬ್ಯಾಂಕ್ ಹತ್ತಿರ ಹಗರಿಬೊಮ್ಮನಹಳ್ಳಿ ಹಮ್ಮಿಕೊಳ್ಳಲಾಗಿತ್ತು. ಈ ಒಂದು ತರಬೇತಿ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಮಹಾಸ್ವಾಮಿಗಳಾಂದಹ ಶ್ರೀ ಶ್ರೀ ಶ್ರೀ ಮಹೇಶ್ವರ ಸ್ವಾಮಿಗಳು ಹಾಗೂ ಶ್ರೀ ಶ್ರೀ ಶ್ರೀ ಹಾಲಶಂಕರ್ ಸ್ವಾಮಿಗಳು ಸಾನಿದ್ಯವನ್ನು ವಹಿಸಿದ್ದರು.

ಈ ಒಂದು ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಆಗಮಿಸಿದ್ದರು ದೀಪ ಪ್ರಜ್ವಲಿಸುವದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ರಾಜಶೇಖರ ಹೆಚ್. ರವರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಿ.ಎ.ಬೊರಯ್ಯರವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 36 ಸೌಹಾರ್ದ ಸಹಕಾರಿಗಳಿಂದ 68 ಪ್ರತಿನಿಧಿಗಳು ಕಾರ್ಯಕ್ರಮದ ಪ್ರಯೋಜನೆಯನ್ನು ಪಡೆದರು.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರಗಳು ಸೌಹಾರ್ದ ಸಹಕಾರಿಗಳ ಭೇಟಿ



ಬೆಳಗಾವಿ : ಶ್ರೀ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿಗೆ ಭೇಟಿ.



ಬೆಳಗಾವಿ : ದಿ ಬೆಳಗಾಂ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಭೇಟಿ.





ಸರಸ್ವತಿ ಸೌಹಾರ್ದ ಸಹಕಾರಿಗೆ ಭೇಟಿ



## ತರಬೇತಿ ಕಾರ್ಯಕ್ರಮ

**ಮೈಸೂರು :** ದಿನಾಂಕ : 10.11.2018ರಂದು ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಇದರ ಕಛೇರಿಯಲ್ಲಿ ಸದರಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿಯ ಚಳುವಳಿಯ ಕುರಿತು ಉಪನ್ಯಾಸವನ್ನು ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ನೀಡಿದರು.

## ಪ್ರವರ್ತಕರ ಸಭೆ - ಕೋಲಾರ

**ಕೋಲಾರ :** ದಿನಾಂಕ : 12.11.2018ದಂದು ಕೋಲಾರ ಜಿಲ್ಲೆಯ ಶ್ರೀ ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿ ನಿಯಮಿತ ಕೋಲಾರ ಇಲ್ಲಿ ಚುನಾವಣಾ ಪೂರ್ವ ಸಿದ್ಧಾತ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್ ಕೆ.ಎಮ್ ರವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 10 ಸಹಕಾರಿಗಳಿಂದ 13 ಪ್ರತಿನಿಧಿಗಳು ಭಾಗವಹಿಸಿದ್ದರು.



## "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ" ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆಸಕ್ತ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ ಹಾಗೂ ದೇಶದ ಯುವಕ ಯುವತಿಯರಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ" 1ನೇ ಜನವರಿ 2019 ರಿಂದ ಪ್ರಾರಂಭ

### "Diploma in Cooperation and Banking Management"(DCBM)

### 6 Months Distance Education Course starts from 1st January 2019

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ" ನ್ನು ಇದೇ ಜನವರಿ 2019 ರಿಂದ ಪ್ರಾರಂಭಿಸಲಾಗುತ್ತದೆ.

ಈ ತರಬೇತಿ ಪೂರ್ಣಗೊಳಿಸುವುದರಿಂದ ಸಹಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ.ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಸಿಬ್ಬಂದಿಯವರಿಗೆ ಸೇವೆ ಖಾಯಂಯಾಗಲು ಹಾಗೂ ಸೇವೆಯಲ್ಲಿ ಬಡ್ತಿ ಪಡೆಯಲು ಪ್ರಯೋಜನವಾಗಲಿದೆ.

ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು (ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60ಅಂಕಗಳು ಒಟ್ಟು 100 ಅಂಕಗಳು) ಒಟ್ಟು 700ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು.ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ಎಲ್ಲಾ ರೀತಿಯ ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕೋರ್ಸ್ ಫೀ :** ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ. ಅರ್ಜಿಯ ಜೊತೆಗೆ ಕೋರ್ಸ್ ಫೀ ರೂ 5,000/-ಗಳನ್ನು ಕಳುಹಿಸುವುದು.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳೇ ಊಟ, ವಸತಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಆದ್ದರಿಂದ ಈ ಕೋಸ್‌ನ ಒಟ್ಟಾರೆ ಶುಲ್ಕ 3000/- ಗಳನ್ನು ಕಡಿಮೆ ಗೊಳಿಸಿ 5000+1500 = 6500/-ಕ್ಕೆ ನಿಗದಿಗೊಳಿಸಿದೆ.

ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ಕಛೇರಿಯ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

**ಸಹಿ/-**
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕರು**

# ಮೈಸೂರು ಪ್ರಾಂತ್ಯದಲ್ಲಿ ನೂತನ ಸೌಹಾರ್ದ ಸಹಕಾರಿಗಳ ಪ್ರವರ್ತಕರ ಸಭೆಗಳು



ನೂತನ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಪ್ರಾಂತದ 8 ಜಿಲ್ಲೆಗಳಲ್ಲಿ ನೂತನ ಸೌಹಾರ್ದ ಸಹಕಾರಿಗಳ ಪ್ರವರ್ತಕರು ಹಾಗೂ ಸಹಕಾರ ಸಂಘಗಳ ಆಡಳಿತ ಮಂಡಲಿ ಸದಸ್ಯರುಗಳ ಸಭೆಯನ್ನು ಆಯೋಜಿಸಲಾಗಿದ್ದು, ಇದರ ಅಂಗವಾಗಿ, ಮೊದಲ ಸಭೆಯನ್ನು ದಿನಾಂಕ : 01 ನವಂಬರ್ 2018ರಂದು ಬೆಳಿಗ್ಗೆ 11:00 ಗಂಟೆಗೆ ಚಾಮರಾಜನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯಲ್ಲಿ 39 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ನಂತರ ಅದೇ ದಿನ ಸಂಜೆ 04:00 ಗಂಟೆಗೆ ಗುಂಡ್ಲುಪೇಟೆಯಲ್ಲಿ ಪ್ರವರ್ತಕರುಗಳ ಸಭೆಯನ್ನು ಆಯೋಜಿಸಲಾಗಿದ್ದು, ಸದರಿ ಸಭೆಯಲ್ಲಿ 23 ಜನ ಭಾಗವಹಿಸಿದ್ದರು.

ವಿವರ ಈ ಕೆಳಕಂಡಂತೆ ಇದೆ – ಮಂಡ್ಯ ಜಿಲ್ಲೆಯ ಪ್ರವರ್ತಕರುಗಳ ಸಭೆಗೆ 39 ಜನ ಭಾಗವಹಿಸಿದ್ದರು. ಮಳವಳ್ಳಿ ತಾಲ್ಲೂಕಿನ ಪ್ರವರ್ತಕರುಗಳ ಸಭೆಗೆ 18 ಜನ ಭಾಗವಹಿಸಿದ್ದರು. ನಾಗಮಂಗಲ ತಾಲ್ಲೂಕಿನ ಪ್ರವರ್ತಕರುಗಳ ಸಭೆಗೆ 23 ಜನ ಭಾಗವಹಿಸಿದ್ದರು. ಕೆ.ಆರ್ ಪೇಟೆ ತಾಲ್ಲೂಕಿನ ಪ್ರವರ್ತಕರುಗಳ ಸಭೆಗೆ 6 ಜನ ಭಾಗವಹಿದ್ದರು. ಕೊಳ್ಳೇಗಾಲ ತಾಲ್ಲೂಕಿನ ಪ್ರವರ್ತಕರುಗಳ ಸಭೆಗೆ 21 ಜನ ಭಾಗವಹಿಸಿದ್ದರು. ಶ್ರೀರಂಗಪಟ್ಟಣದಲ್ಲಿಪ್ರವರ್ತಕರುಗಳ ಸಭೆಗೆ 21 ಜನ ಭಾಗವಹಿಸಿದ್ದರು. ಮದ್ದೂರಿನ ಪ್ರವರ್ತಕರುಗಳ ಸಭೆಗೆ 14 ಜನ ಭಗವಹಿಸಿದ್ದರು. ಮಂಗಳೂರು ತಾಲ್ಲೂಕಿನ ಪ್ರವರ್ತಕರುಗಳ ಸಭೆಗೆ 35 ಜನ ಭಾಗವಹಿಸಿದ್ದರು. ಉಡುಪಿಯ ಪ್ರವರ್ತಕರುಗಳ ಸಭೆಗೆ 15 ಜನ ಭಾಗವಹಿಸಿದ್ದರು. ಕಾರ್ಕಳದ ಪ್ರವರ್ತಕರುಗಳ ಸಭೆಗೆ 18 ಜನ ಭಾಗವಹಿಸಿದ್ದರು. ಕುಂದಾಪುರದ ಪ್ರವರ್ತಕರುಗಳ ಸಭೆಗೆ 21 ಜನ ಭಾಗವಹಿಸಿದ್ದರು. ಹಾಸನ ಜಿಲ್ಲೆಯ ರಾಮನಾಥಪುರದ ಪ್ರವರ್ತಕರುಗಳ ಸಭೆಗೆ 12 ಜನ ಭಾಗವಹಿಸಿದ್ದರು. ಶ್ರವಣಬೆಳಗೊಳದ ಪ್ರವರ್ತಕರುಗಳ ಸಭೆಗೆ 24 ಜನ ಭಾಗವಹಿಸಿದ್ದರು.

ಈ ಕಾರ್ಯಕ್ರಮ ಪ್ರಾಂತೀಯ ಅಧಿಕಾರಿಯವರು ನೇತೃತ್ವದಲ್ಲಿ ಹಾಗೂ ಆಯಾ ಭಾಗದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಡೆಸಲಾಗುತ್ತಿದೆ. ಸದರಿ ಸಭೆಗೆ ಗ್ರಾಮ/ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು, ಸದಸ್ಯರು, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡಂತೆ ಸಹಕಾರಿ ಪ್ರಾರಂಭಿಸಲು ಆಸಕ್ತರಿರುವ ಇತರೆ ಜನಪ್ರತಿನಿಧಿಗಳು ಭಾಗವಹಿಸಿದ್ದರು.

## ಎಸ್.ಎಂ. ನಂದೀಶ್‌ಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ



**ಚಾಮರಾಜನಗರ :** ಶ್ರೀ ಅಕ್ಷಯ ಶ್ರೀ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಚಾಮರಾಜನಗರ ಇದರ ನಿರ್ದೇಶಕರಾದ ಎಸ್. ಎಂ ನಂದೀಶ್ ಇವರಿಗೆ 2018ನೇ ಸಾಲಿನ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭಿಸಿದೆ.



**ಚಾಮರಾಜನಗರ :** ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪುಟ್ಟರಂಗ ಶೆಟ್ಟಿ ಇವರಿಗೆ ಸೌಹಾರ್ದ ಕಾಯ್ದೆ ತಿದ್ದುಪಡಿ ಅವಶ್ಯಕತೆಯ ಕುರಿತು ಮಾಹಿತಿಯನ್ನು ನೀಡಿ ತಮ್ಮ ಬೆಂಬಲವನ್ನು ನೀಡುವಂತೆ ಮನವಿ ಮಾಡಲಾಗಿತು. ಈ ಸಂದರ್ಭದಲ್ಲಿ ಚಾಮರಾಜನಗರದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಹಾಜರಿದ್ದರು.

# ಸಪ್ತರ್ಷಿ ಸೌಹಾರ್ದ ಸಹಕಾರಿಯ ವತಿಯಿಂದ ಕೊಡಗು ನೆರೆಸಂತ್ರಸ್ತರ ನಿಧಿಗೆ ರೂ . 3,53,608/- ವಂತಿಗೆ ನೀಡಿಕೆ

**ಮೈಸೂರು** : ಸಪ್ತರ್ಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮೈಸೂರು ಇವರು ಕನ್ನಡ ರಾಜ್ಯೋತ್ಸವ – ಸಹಕಾರಿ ಸಪ್ತಾಹ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ದಿನಾಂಕ : 18.11.2018ರಂದು ಭಾನುವಾರ ಸಂಜೆ 04.00 ಗಂಟೆಗೆ ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಹೆಚ್.ವಿ. ರಾಜೀವ್‌ರವರು ಹಾಗೂ ವೇದಿಕೆಯ ಮೇಲಿದ್ದ ಇತರ ಗಣ್ಯರೊಂದಿಗೆ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ನಂತರ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಕೊಡಗು ನೆರೆಸಂತ್ರಸ್ತರ ಪರಿಹಾರ ನಿಧಿಗೆ ರೂ. 3,53,608/–ಗಳ ಚೆಕ್‌ನ್ನು ಮಾನ್ಯ ನಿರ್ದೇಶಕರಾದ ಹೆಚ್.ವಿ. ರಾಜೀವ್‌ರವರಿಗೆ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್‌ರವರಿಗೆ ನೀಡಲಾಯಿತು. ಸದರಿ ಕಾರ್ಯಕ್ರಮದಲ್ಲಿ



ಕೃಷ್ಣರಾಜ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ರವರನ್ನು ಸನ್ಮಾನಿಸಲಾಯಿತು. ನಂತರ ವೇದಿಕೆ ಮೇಲಿನ ಗಣ್ಯರು ಸಹಕಾರಿಯ ಹಿರಿಯ ಸದಸ್ಯರಿಗೆ ಸನ್ಮಾನ ಮಾಡಿದರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಭಾ ಪುರಸ್ಕಾರ ನೀಡಿದರು.



## ಉದ್ಘಾಟನಾ ಕಾರ್ಯಕ್ರಮ

**ಮೈಸೂರು** : ಹೆಬ್ಬಾಳು ಕೈಗಾರಿಕಾ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ: 28–11–2018ರಂದು ಬುಧವಾರ ಸಂಜೆ 06.00 ಗಂಟೆಗೆ ಹಿಮ ಕನ್ವೆನ್ ಸೆಂಟರ್, ಹೆಬ್ಬಾಳ್ ಇಂಡಸ್ಟ್ರಿಯಲ್ ಎಸ್ಟೇಟ್, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಸದರಿ ಸಹಕಾರಿಯ ನೂತನ ಕಛೇರಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಹೆಚ್ ವಿ ರಾಜೀವ್‌ರವರು ಉದ್ಘಾಟಿಸಿದರು. ನಂತರ ಸಹಕಾರಿಯ ಸದಸ್ಯರಿಗೆ ವೇದಿಕೆಯ ಮೇಲಿದ್ದ ಇತರ ಗಣ್ಯರೊಂದಿಗೆ ಸ್ಮಾರ್ಟ್‌ಕಾರ್ಡ್‌ಗಳನ್ನು ನೀಡಿ, ಭಿತ್ತಿಪತ್ರಗಳನ್ನು ಬಿಡುಗಡೆಗೊಳಿಸಿದರು.

## ಸಹಕಾರಿ ಸಪ್ತಾಹ ಆಚರಣೆ

**ಅಳ್ನಾವರ** : ಸಿದ್ಧಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಅಳ್ನಾವರ ಇದರ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ದಿನಾಂಕ 14–11–2018 ರಿಂದ 21–11–2018 ರವರೆಗೆ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟಣೆಯನ್ನು ಪಟ್ಟಣ ಪಂಚಾಯತ ಕೌನ್ಸಿಲರಾದ ರಾಜೇಶ ವಿನಾಯಕ ಬೈಕೆರಿಕರ ರವರು ದೀಪ ಬೆಳಗಸಿದರು ಹಾಗೂ ನಿರ್ದೇಶಕರಾದ ಪಾಂಡುರಂಗ ವಿ ರೇವಣಕರ ರವರು ಧ್ವಜಾರೋಹಣ ಮಾಡಿದರು. ಅದೇ ರೀತಿ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ನೇತ್ರಾವತಿ ಚ ಕಾಪೋಲಕರವರು ಸಪ್ತಾಹದ ಪೂರ್ಣಮಾಹಿತಿಯನ್ನು ನೀಡಿದರು ಹಾಗೂ ಸಹಕಾರಿಯ ನಗದಿಗಾರಾದ ರಾಜೇಶ ಬಿ ಗೌರಿರವರು ಕಾರ್ಯಕ್ರಮದ ಸಂಚಲನ ಮಾಡಿದರು ಹಾಗೂ ಸಹಕಾರಿಯ ನಿರ್ದೇಶಕರಾದ ಪರಶುರಾಮ ಹ ಗಾವಡೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಸದರಿ ಏಳು



ದಿನದ ಕಾರ್ಯಕ್ರಮವನ್ನು ಸಹಕಾರಿಯ ನಿರ್ದೇಶಕರಾದ ಪಾಂಡುರಂಗ ವಿ ರೇವಣಕರ ರವರು ನೆರವೇರಿಸಿಕೊಟ್ಟರು ಸದರಿ ಕಾರ್ಯಕ್ರಮಕ್ಕೆ ಎಲ್ಲ ನಿರ್ದೇಶಕ ಮಂಡಳಿ ಹಾಗು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಹೊಸಪೇಟೆ :** ಆರ್.ಡಿ ಸೋನಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಸಹಕಾರ ಸಪ್ತಾಹ ಆಚರಣೆ.

## 3ನೇ ವಾರ್ಷಿಕೋತ್ಸವ



**ಕೊಪ್ಪಳ :** ದಿನಾಂಕ : 23.11.2018ರಂದು ಕೊಪ್ಪಳ ತಾಲ್ಲೂಕು ಗಿಣಿಗೇರಿ ಗ್ರಾಮದ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇದರ 3ನೇ ವರ್ಷದ ವಾರ್ಷಿಕೋತ್ಸವದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೇರವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಬಿ. ಹ್ಯಾಟಿ ವಹಿಸಿದರು.

## ಸಮರ್ಥ ಸದ್ಗುರು ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ



**ಹಾವೇರಿ :** ಸಮರ್ಥ ಸದ್ಗುರು ಸೌಹಾರ್ದ ಸಹಕಾರಿ ನಿ., ಹಾವೇರಿ ಇದರ 3ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಾರುತಿ ಬಿ. ಕಲಾಲ ರವರು ಉಪಸ್ಥಿತರಿದ್ದರು.

## ಇ-ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ




**ಬೆಂಗಳೂರು :** ದಿನಾಂಕ : 29.11.2018 ರಂದು ಶ್ರೀ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಇದರ ಇ-ಸ್ಟಾಂಪಿಂಗ್ ಸೇವಾ ಕೇಂದ್ರದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ನೇರವೆರಿಸಿದರು. ಹಾಗೂ ಶ್ರೀ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ದ ಅಧ್ಯಕ್ಷರಾದ ಶ್ರೀ ಕೆ ವಿ ರೆಡ್ಡಿ, ಸಾಹಿತಿ ಶ್ರೀ ಬರಗೂರು ರಾಮಚಂದ್ರಪ್ಪರವರು, ಸಹಕಾರಿಯ ನಿರ್ದೇಶಕರುಗಳು ಹಾಗೂ ಪ್ರಾಂತೀಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆರವರು ಉಪಸ್ಥಿತರಿದ್ದರು.

## ಮನವಿ



**ವಿಜಯಪುರ :** ಆಶ್ರಯ ಯೋಜನೆ ಅಡಿಯಲ್ಲಿ ನಗರದ ಬಡ ಮಹಿಳೆಯರಿಗೆ ಮನೆಗಳನ್ನು ನೀಡುವಂತೆ ಆಗ್ರಹಿಸಿ ನಗರ ಶಾಸಕರಾದ ಬಸನಗೌಡ ಆರ್. ಪಾಟೀಲ (ಯತ್ನಾಳ) ಅವರ ಧರ್ಮಪತ್ನಿಯವರಾದ ಶ್ರೀಮತಿ ಶೈಲಜಾ ಬಸನಗೌಡ ಪಾಟೀಲ (ಯತ್ನಾಳ) ಇವರಿಗೆ ಶ್ರೀ ಗುರುಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚ. ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಗುರು ಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚ. ಹಿರೇಮಠ ಅವರು ಮಾತನಾಡಿ, ಅತೀ ಬಡ ಕುಟುಂಬದ ಮಹಿಳೆಯರು ಸ್ವ ಉದ್ಯೋಗ ಕೈಗೊಳ್ಳಲು ಬೀದಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಡ ಮಹಿಳೆಯರಿಗೆ ಸರಕಾರದ ಯೋಜನೆಗಳಲ್ಲಿ ಸಾಲ ಸೌಲಭ್ಯ ಮತ್ತು ವಸತಿಹೀನ ಬಡ ಮಹಿಳೆಯರಿಗೆ ಮನೆಗಳನ್ನು ಮಂಜೂರಿ ಮಾಡುವಂತೆ ಮನವಿ ಮಾಡಿಕೊಂಡರು. ಮನವಿ ಸ್ವೀಕರಿಸಿದ ಶ್ರೀಮತಿ ಶೈಲಜಾ ಪಾಟೀಲ ಅವರು ಈ ಕುರಿತು ಶಾಸಕರೊಂದಿಗೆ ಸುದೀರ್ಘ ಚರ್ಚಿಸಲಾಗುವುದು. ಬಡ ಕೂಲಿಕಾರ ಮಹಿಳೆಯರಿಗೆ ಸರಕಾರದ ಯೋಜನೆಗಳಲ್ಲಿ ಮನೆ ಮಂಜೂರಿಸಿ ಅನುಕೂಲ ಮಾಡಿಕೊಡುವಂತೆ ನಾನು ಸಹ ಮುತುವರ್ಜಿ ವಹಿಸಿ ಶಾಸಕರ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಲಕ್ಷ್ಮೀ ಬಿ. ಕನ್ನೊಳ್ಳಿ, ಶ್ರೀಮತಿ ಭಾರತಿ ಎಸ್. ಭುಯ್ಯಾರ, ಸೌಹಾರ್ದ ನಿರ್ದೇಶಕರಾದ ಶ್ರೀಮತಿ ಮಮತಾ ಸಾತಯ್ಯ ಡೋಣೂರಮಠ, ಶ್ರೀಮತಿ ಶೋಭಾ ಮಹಾದೇವಯ್ಯ ಗಚ್ಚಿನಮಠ, ಹಾಗೂ ಬೋರಮ್ಮಾ ವಿರಕ್ತಮಠ, ಜಂಗಮ ಸಮಾಜದ ಮಹಿಳಾ ಧುರೀಣರಾದ ಶ್ರೀಮತಿ ಜ್ಯೋತಿ ಬಸವರಾಜ ಚೌಕಿಮಠ ಇನ್ನಿತರರು ಇದ್ದರು.

## ಸಮಾಲೋಚನಾ ಕಾರ್ಯಕ್ರಮ

**ಬೆಂಗಳೂರು :** ದಿನಾಂಕ : 04.11.2018ರಂದು ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸದಸ್ಯರೊಡನೆ ಸಮಾಲೋಚನೆ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಚಂದ್ರ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಕಾರ್ಯ ವೈಖರಿ, ಸದಸ್ಯರಿಗೆ ನೀಡುವ ಆರ್ಥಿಕ, ಸಾಮಾಜಿಕ ಸವಲತ್ತುಗಳ ಬಗ್ಗೆ ಸಮಾಲೋಚನೆ ಸಭೆ ನಡೆಯಿತು. ಕಾರ್ಯಕ್ರಮದಲ್ಲಿ 20 ಸದಸ್ಯರು ಭಾಗವಹಿಸಿದರು.







ಅಥರ್ಗಾ ಗ್ರಾಮೀಣ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ – ವಿಜಯಪುರ



## ಸಂವಾದ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ : 31.10.2018 ರಂದು ಹೊಸನಗರದ ಗಾಯಿತ್ರಿ ಮಂದಿರದಲ್ಲಿ ನಡೆದ ಸುಮೇಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಇದರ ಆಶ್ರಯದಲ್ಲಿ ಹಮ್ಮಿಕೊಂಡ ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ "ಅಡಿಕೆ ಮತ್ತು ಕಾಳು ಮೆಣಸಿನ ಬೆಳೆಗಳ ಕುರಿತಂತೆ ರೈತರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಬೆಂಜರ್ ಕ್ರಾಫ್ ನ ಇನ್ನೋವರ್ ವಿಜ್ಞಾನಿಯಾದ ಡಾ. ಹೊನ್ನೂರು ವಿ. ಸುಮೇಧಾ, ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರದೀಪ ಕೆ.ಆರ್, ಉಪಾಧ್ಯಕ್ಷರಾದ ಶ್ರೀ ಅನಂತಮೂರ್ತಿ ವಿ. ಹಾಗೂ ಸಂಸ್ಥೆಯ ಎಲ್ಲಾ ನಿರ್ದೇಶಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ಕೆ.ಎಸ್.ಶಾಂತಾರಾಮ ನಿಧನ



**ಕೊಪ್ಪಳ :** ದಿನಾಂಕ : 08.112018 ರಂದು ನಿಧನರಾದ ನಮ್ಮ ಸಹಕಾರಿಯ ನಿರ್ದೇಶಕರಾದ "ಸಹಕಾರಿ ರತ್ನ" ಶ್ರೀಯುತ ಕೆ.ಎಸ್.ಶಾಂತಾರಾಮ ಇವರಿಗೆ ದಿನಾಂಕ : 19.11.2018 ರಂದು ಸಹಕಾರಿಯಲ್ಲಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಸ್. ಎನ್.ವಿಶ್ವನಾಥ್ ಇವರು ಅಧ್ಯಕ್ಷತೆ ವಹಿಸಿದ್ದರು. ಶೃಂಗೇರಿ ಕ್ಷೇತ್ರದ ಶಾಸಕರಾದ ಶ್ರೀಯುತ ಟಿ.ಡಿ.ರಾಜೇಗೌಡ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು

## ಉಚಿತ ಶಸ್ತ್ರ ಚಿಕಿತ್ಸಾ ಕಾರ್ಯಕ್ರಮ

**ಕೊಪ್ಪಳ :** ದಿನಾಂಕ : 29.10.2018ರಂದು ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ, ಕೊಪ್ಪಳ ಇವರು ಕೊಪ್ಪಳ ತಾಲೂಕಿನ ಹಿರೇಬಗನಾಳ ಗ್ರಾಮದಲ್ಲಿ ಹಮ್ಮಿಕೊಂಡಿರುವ ಉಚಿತ ಕಣ್ಣಿನ ತಪಾಸಣೆ ಹಾಗೂ ಕಿವಿ , ಮೂಗು, ಗಂಟಲು ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸಾ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇದರ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘನಂದನ್ ಕೆ ಹಾಗೂ ಸುರೇಶ ರೆಡ್ಡಿ, ಕರ್ನಾಟಕ ರಾಜ್ಯಧ್ಯಕ್ಷರು (KOF) ಇವರಿಂದ ಉದ್ಘಾಟಿಸಿದರು.

## ಬಸ್ಸು ತಂಗುದಾಣದ ಉದ್ಘಾಟನೆ






**ಮಂಗಳೂರು :** ದಿನಾಂಕ : 30.07.2018ರಂದು ಸೌಂದರ್ಯ ಓಂ ಸಾಯಿ ಸೌಹಾರ್ದ ಸಹಕಾರಿ ನಿ., ಕೊಲ್ಯ, ಮಂಗಳೂರು ಇದರ ಪ್ರಾಯೋಜಕತ್ವದಲ್ಲಿ ಸಹಕಾರಿಯ ಆಡಳಿತ ಕಛೇರಿ ಇರುವ ಪಕ್ಕದಲ್ಲಿ ಜನರಿಗೆ ಉಪಯೋಗವಾಗಲೆಂದು ಸುಸಜ್ಜಿತವಾಸ ಬಸ್ಸು ತಂಗುದಾಣವನ್ನು ಬಿಜೆಪಿ ಪಕ್ಷದ ಕ್ಷೇತ್ರಾಧ್ಯಕ್ಷರಾದ ಶ್ರೀ ಸಂತೋಷ್ ಕುಮಾರ್ ರೈ ಬೋಳಿಯಾರ್‌ರವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಸೌಂದರ್ಯ ರಮೇಶರವರು ಅಧ್ಯಕ್ಷತೆಯನ್ನು ವಹಿಸಿದ್ದರು.



ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ – ಹಾಸನ



ಶ್ರೀ ಗುರು ಸೃಷ್ಟಿಕರ್ತ ಸೌಹಾರ್ದ ಪತ್ತಿನ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ – ಕೊಪ್ಪಳ

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ



**ಮಂಗಳೂರು :** ಸಹಕಾರಿ ಸಪ್ತಾಹದ ಅಂಗವಾಗಿ ಸ್ವಚ್ಛ ಬೆಳ್ತಂಗಡಿ ಪರಿಕಲ್ಪನೆಯಲ್ಲಿ ಸ್ವಚ್ಛಾತಾ ಕಾರ್ಯಕ್ರಮವು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಹಾಗೂ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಸಂಯುಕ್ತ ಆಶ್ರಯದಲ್ಲಿ ದಿನಾಂಕ : 20–11–2018ರಂದು ನಡೆಯಿತು.

ಬೆಳ್ತಂಗಡಿ ಪಟ್ಟಣ ಪಂಚಾಯತ್‌ನ ಮುಖ್ಯ ಅಧಿಕಾರಿಗಳಾದ ಶ್ರೀ ವೆಂಕಟರಮಣ ಶರ್ಮ ಉದ್ಘಾಟಕರಾಗಿ ಆಗಮಿಸಿ ಸಹಕಾರಿ ಧ್ವಜವನ್ನು ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ ಇವರಿಗೆ ಹಸ್ತಾಂತರಿಸಿ ಸ್ವಚ್ಛತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಆರ್ಥಿಕ ಸಂಸ್ಥೆಯೊಂದು ಇಂತಹ ಸಮಾಜಮುಖಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಮತ್ತು ಇತರರಿಗೂ ಮಾದರಿ ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ರೋಟರ್‍ಯಾಕ್ಟ್ ಕ್ಲಬ್ ಬೆಳ್ತಂಗಡಿಯ ಅಧ್ಯಕ್ಷರಾದ ಶ್ರೀ ಜಗದೀಶ್ ಪ್ರಸಾದ್, ವಕೀಲರಾದ ಶ್ರೀ ಶ್ಯಾಮ ಭಟ್, ಹಂಸಗಿರಿ ಅಕ್ಕಿ ಮಿಲ್‌ನ ಮಾಲಕರಾದ ಶ್ರೀ ಬಾಲಕೃಷ್ಣ ಸಿ ನಾಯಕ್ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರು ಸಹಕಾರಿಯ ಸೇವಾ ಕಾರ್ಯಗಳು ಇತರರಿಗೂ ಮಾದರಿಯಾಗುವುದಷ್ಟೇ ಅಲ್ಲದೇ ನಮ್ಮ ನಮ್ಮ ಕಚೇರಿ, ಮನೆ – ಮನಗಳಲ್ಲಿ ಸ್ವಚ್ಛತೆ ಆಗಬೇಕು ಎಂದು ಹೇಳಿದರು. ಸಹಕಾರಿಯ ಬೆಳ್ತಂಗಡಿ ಶಾಖೆಯ ವ್ಯವಸ್ಥಾಪಕರಾದ ಶ್ರೀ ಸೀತರಾಮ ಪೂಜಾರಿ ಸ್ವಾಗತಿಸಿ, ಸಹಕಾರಿಯ ಶಿರ್ವ ಶಾಖೆಯ ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ತಲಪ್ಪಾಡಿ ಕಾರ್ಯಕ್ರಮ ನಿರೂಪಿಸಿದರು. ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ಶ್ರೀ ಪ್ರೇಮಚಂದ್ರ ನಾಯಕ್ ಸ್ವಚ್ಛತಾ ಕಾರ್ಯಕ್ರಮದ ರೂಪುರೇಷೆಯನ್ನು ವಿವರಿಸಿದರು. ಸಹಕಾರಿಯ 42 ಜನ ಅಧಿಕಾರಿಗಳು ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳ್ತಂಗಡಿ ಪಟ್ಟಣದ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡರು.

# ಉಚಿತ ಟೈಲರಿಂಗ್ ತರಬೇತಿ ಶಿಬಿರ ಕಾರ್ಯಕ್ರಮ ಉದ್ಘಾಟನಾ ಸಮಾರಂಭ

**ಮಂಗಳೂರು :** ಪುತ್ತೂರಿನ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಪುತ್ತೂರು ಇದರ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ವತಿಯಿಂದ ನವೋದಯ ಸ್ವ-ಸಹಾಯ ಗುಂಪುಗಳ ಒಕ್ಕೂಟ ಪಾಲ್ತಾಡಿ ಇವರ ಸಹಕಾರದೊಂದಿಗೆ ಕೊಳ್ತಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಪಾಲ್ತಾಡಿ ಶಾಖೆಯ ನವೋದಯ ಸಭಾಂಗಣದಲ್ಲಿ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ದಿನಾಂಕ : 19-11-2018ನೇ ಸೋಮವಾರ 6 ತಿಂಗಳ 5ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಕೊಳ್ತಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ್ ಕುಮಾರ್ ಕೆ ದೀಪ ಪ್ರಜ್ವಲನೆ ಮಾಡಿರುವುದರೊಂದಿಗೆ ಕಾರ್ಯಕ್ರಮ ಉದ್ಘಾಟನೆ ಮಾಡಿದರು ಹಾಗೂ ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂತಹ ತರಬೇತಿ ಕಾರ್ಯಕ್ರಮ ಸಂಪೂರ್ಣ ಸದುಪಯೋಗ ಮಾಡಿಕೊಳ್ಳುವುದರೊಂದಿಗೆ ಸ್ವಾವಲಂಬಿ ಜೀವನವನ್ನು ನಡೆಸುವಂತಾಗಬೇಕು ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ನವೋದಯ ಸ್ವ-ಸಹಾಯ ಗುಂಪುಗಳ ಮೇಲ್ವಿಚಾರಕರಾದ ಶ್ರೀ ಚಂದ್ರಶೇಖರ್, ಅಧ್ಯಕ್ಷೆ ವಸಂತಿ, ನಿವೃತ್ತ ಸೇನಾಧಿಕಾರಿಗಳಾದ ಶ್ರೀ ಸಂಜೀವ ಗೌಡ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಟೈಲರಿಂಗ್ ತರಬೇತುದಾರರಾದ ಶ್ರೀಮತಿ ನಿರ್ಮಲಾರವರು ಉಪಸ್ಥಿತರಿದ್ದು ತರಬೇತಿ ಶಿಬಿರದಲ್ಲಿ ಎಲ್ಲಾ ಪ್ರಶಿಕ್ಷಣಾರ್ಥಿಗಳು ಆಸಕ್ತಿಯಿಂದ




ಭಾಗವಹಿಸಿ ತರಬೇತಿ ಸಂಪೂರ್ಣ ಸದುಪಯೋಗ ಪಡೆದುಕೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲು ತಮ್ಮ ಸಹಕಾರ ಅತ್ಯಗತ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಶ್ರೀ ದಿನಕರ ನಾಯಕ್ ಟ್ರಸ್ಟ್‌ನ ಸಾಮಾಜಿಕ ಸೇವಾ ಕಾರ್ಯಗಳ ಬಗ್ಗೆ ವಿವರಿಸಿದರು ಹಾಗೂ ಟೈಲರಿಂಗ್ ತರಬೇತಿಯ ಅಗತ್ಯತೆಯನ್ನು ಅರಿತು ಸದುಪಯೋಗ ಮಾಡಿಕೊಳ್ಳುವಂತೆ ಹೇಳಿದರು.ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರು, ಸಾರ್ವಜನಿಕರು, ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡಿದ್ದರು.

ದಿವ್ಯ ಕುಮಾರಿ ಪ್ರಾರ್ಥನೆ ಮಾಡಿದರು. ಕೊಳ್ತಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಪಾಲ್ತಾಡಿ ಶಾಖೆಯ ಶಾಖೆಯ ವ್ಯವಸ್ಥಾಪಕರಾದ ಶ್ರೀ ಜಯರಾಮ ಕೆ. ಸ್ವಾಗತಿಸಿದರು. ನವೋದಯ ಸ್ವ-ಸಹಾಯ ಗುಂಪುಗಳ ಒಕ್ಕೂಟ ಪಾಲ್ತಾಡಿಯ ಪ್ರೇರಕರಾದ ಶ್ರೀಮತಿ ಕಲ್ಪವಲ್ಲಿ ವಂದಿಸಿದರು. ಟ್ರಸ್ಟ್‌ನ PRO ಶ್ರೀ ಬಿಪಿನ್ ಚಂದ್ರ ಕಾರ್ಯಕ್ರಮ ನಿರೂಪಿಸಿದರು.

## ಡಾ. ರಾಜೇಂದ್ರ ಕುಮಾರ್‌ರವರಿಗೆ ಅಭಿನಂದನೆ



ಇತ್ತೀಚಿಗೆ ಲಂಡನ್ ನಲ್ಲಿ ಮಹಾತ್ಮ ಗಾಂಧಿ ಸಮ್ಮಾನ್ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರಿಂದ ಹಾರ್ದಿಕ ಅಭಿನಂದನೆಗಳು.

## ನನಗೆ ದೊರತ ಪ್ರಶಸ್ತಿ ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿಗಳಿಗೆ ಗೌರವ

ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊರೆತ ಪ್ರತಿಷ್ಠಿತ ಮಹಾತ್ಮ ಗಾಂಧಿ ಸಮ್ಮಾನ್ ಅಂತಾರಾಷ್ಟ್ರೀಯ ಪ್ರಶಸ್ತಿ ಸಹಕಾರಿ ಕ್ಷೇತ್ರಕ್ಕೆ ಹಾಗೂ ಸಹಕಾರಿಗಳಿಗೆ ಸಂದ ಪ್ರಶಸ್ತಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಮಸ್ತ ಸಹಕಾರಿ ಸಂಘಗಳ ಪದಾಧಿಕಾರಿಗಳು, ಸಹಕಾರಿಗಳಿಗೆ ಪ್ರಶಸ್ತಿ ಸಮರ್ಪಿಸುತ್ತೇನೆ ಎಂದು **ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ.ಎನ್ ರಾಜೇಂದ್ರ ಕುಮಾರ್ ಅವರು** ತಿಳಿಸಿದರು.

## ಶಾಖೆ ಉದ್ಘಾಟನೆ

**ಬಾಗಲಕೋಟ :** ದಿನಾಂಕ : 15.10.2018 ರಂದು ಶ್ರೀ ಶರಣಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಹಳಿಂಗಳಿ ಇದರ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ನಂದೇಶ್ವರ ಗ್ರಾಮದ ಶಾಖೆಯ ಉದ್ಘಾಟನೆಯನ್ನು ಶ್ರೀ ಬಸಪ್ಪರ ಮುಧೋಳ. ಕೌಂಟರ ರವರು ನೆರವೇರಿಸಿದರು ಹಾಗೂ ದಿವ್ಯ ಸಾನಿಧ್ಯವನ್ನು ಮಾತೋಶ್ರೀ ದಾಕ್ಷಯಣಿದೇವಿ ಕಮರಿಮಠ ಹಳೀಂಗಳಿ ಹಾಗೂ ಶ್ರೀ ಬಾಳಾಸಾಬ ಬ ಪಾಠೀಲ ಅಧ್ಯಕ್ಷತೆಯನ್ನು ವಹಿಸದರು.

## "ಆನಂದ ಸಿ. ಕುಂದರ್ ರವರಿಗೆ ರಾಜ್ಯೋತ್ಸವ ಪ್ರಶಸ್ತಿ



ಅಪ್ರತಿಮ ಸಮಾಜ ಸೇವೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. ಸಾಲಿಗ್ರಾಮ ಸಹಕಾರಿಯ ಅಧ್ಯಕ್ಷರಾದ ಸನ್ಮಾನ್ಯ ಆನಂದ ಸಿ. ಕುಂದರ್ ರವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರಿಂದ ಹಾರ್ದಿಕ ಅಭಿನಂದನೆಗಳು. **ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಸನ್ಮಾನ್ಯ ಆನಂದ ಸಿ. ಕುಂದರ್ ರವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.**

## ಸಹಕಾರ ಭಾರತಿ ಪದಾಧಿಕಾರಿಗಳ ಆಯ್ಕೆ




**ಬೆಂಗಳೂರು :** ಸಹಕಾರ ಭಾರತಿಯ ನೂತನ ಅಧ್ಯಕ್ಷರಾಗಿ ಕ್ಯಾಂಪೋದ ಅಧ್ಯಕ್ಷರಾದ ಶ್ರೀ ಎಸ್. ಆರ್ ಸತೀಶ್ಚಂದ್ರ, ಪ್ರಧಾನ ಕಾರ್ಯದರ್ಶಿಯಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ರಾಜ್ಯ ಸಹಕಾರ ಭಾರತಿ ಕೋಶಾಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡರಾವ್, ಕಾನೂನು ಪ್ರಕೋಷ್ಠದ ಸಂಚಾಲಕರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ಕ್ರೆಡಿಟ್ ಸೆಲ್ ಪ್ರಕೋಷ್ಠದ ಸಂಚಾಲಕರಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ರಾಜಶೇಖರ ರವರು ಆಯ್ಕೆಯಾಗಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಿಂದ ಅಭಿನಂದನೆಗಳು.

## ಸಹಕಾರಿಗಳು ರಾಷ್ಟ್ರೀಕೃತ ಬ್ಯಾಂಕ್‌ಗಳ ಸೇವೆಗಿಂತ ಅಧಿಕ ಸೇವೆ ನೀಡಬೇಕು – ಹಿರಿಯ ಪತ್ರಕರ್ತ ಶ್ರೀ ವಾದಿರಾಜ ವ್ಯಾಸಮುದ್ರಿ



ಇಂದಿನ ದಿನಮಾನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸುವಲ್ಲಿ ವಿಫಲವಾಗುತ್ತವೆ ಎಂದು ಹಿರಿಯ ಪತ್ರಕರ್ತರಾದ ಶ್ರೀ ವಾದಿರಾಜ ವ್ಯಾಸಮುದ್ರಿ, ಸ್ಥಾನಿಕ ಸಂಪಾದಕರು, ವಿಜಯವಾಣಿ, ಕಲಬುರಗಿ ಇವರು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಂಜೀವ ಮಹಾಜನ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರೊಂದಿಗೆ ಸಹಕಾರ ಕ್ಷೇತ್ರ ಕುರಿತು ಚರ್ಚೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಷ್ಟ್ರೀಕೃತ ಬ್ಯಾಂಕುಗಳ ಸಿಬ್ಬಂದಿಗಳು ಕೇವಲ ವೇತನಾಧಾರಿತ ಕರ್ತವ್ಯದಲ್ಲಿ ತೊಡಗಿದ್ದಾರೆ. ಆದರೆ ಸಹಕಾರಿಗಳ ಸಿಬ್ಬಂದಿಗಳು ವೇತನ ಜೊತೆಗೆ ಮಾನವೀಯ ಮೌಲ್ಯಗಳ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರ ಶ್ಲಾಘನೆಗೆ ಅರ್ಹವಾಗಿದೆ. ಸಹಕಾರ ಕ್ಷೇತ್ರ ಸಾರ್ವಜನಿಕರಲ್ಲಿ ಇನ್ನೂ ಹೆಚ್ಚಿನ ವಿಶ್ವಾಸಗಳಿಸುವಲ್ಲಿ ಯಶಸ್ವಿಯಾಗಬೇಕು ಎಂದು ಉಲ್ಲೇಖಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಮಯುಕ್ತ ಸಹಕಾರಿಯ ತರಬೇತಿಗಳ ಬಗ್ಗೆ ಪ್ರಶಂಸೆ ಪಡಿಸುತ್ತಾ ರಾಜ್ಯದ ಜನರು ಹೆಚ್ಚು ಹೆಚ್ಚು ತಮ್ಮ ಆರ್ಥಿಕ ವ್ಯವಹಾರಗಳಿಗೆ ಸಹಕಾರಿಗಳನ್ನು ಅವಲಂಬಿತರಾಗುವಂತೆ ಮಾಡಬೇಕು ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಮುಂದೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಸಹಕಾರ ಕ್ಷೇತ್ರದ ಕುರಿತು ಸಾರ್ವಜನಿಕರಲ್ಲಿ ಜಾಗೃತ ಮಾಡಿಸುವುದಕ್ಕಾಗಿ ತಮ್ಮ ಸಹಕಾರ ನೀಡುವುದಾಗಿ ತಿಳಿಸಿದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ಮಹದೇಶ್ವರ ವಿವಿದೋದ್ದೇಶ ಸೌಹಾರ್ದ ಪತ್ತಿನ ಸಹಕಾರಿ ನಿ. ಇಂದಿರಾನಗರ



ಶ್ರೀ ಅಯ್ಯಪ್ಪ ಆರ್.
ಅಧ್ಯಕ್ಷರು



ಶ್ರೀ ನಿಂಗಪ್ಪ ಹೆಚ್.ಎ.
ಉಪಾಧ್ಯಕ್ಷರು

### ವಿಜಯಪುರ ನಗರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ವಿಜಯಪುರ



ಶ್ರೀ ರವಿಕುಮಾರ ಜಿ.
ಅಧ್ಯಕ್ಷರು



ಶ್ರೀ ಶಬ್ಬೀರ ಕಾ. ಶೇಖ
ಉಪಾಧ್ಯಕ್ಷರು

## ಸಹಕಾರಿ ಸಪ್ತಾಹ – 2018



**ಮಸ್ಕಿ :** ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿ ಸಪ್ತಾಹದ ಧ್ವಜಾರೋಹಣವನ್ನು ನಮ್ಮ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಗೌಡ ಸುಂಕನೂರು ಮತ್ತು ಹಿರಿಯ ನಿರ್ದೇಶಕರಾದ ಶ್ರೀ ಮಳ್ಳಪ್ಪ ಪೂಜಾರು, ಮಲ್ಲಯ್ಯ ಹಾಲದವರು, ರಾಮಣ್ಣ ಬೌತ್ರು ಹಾಗೂ ಸಿಬ್ಬಂದಿ ವರ್ಗದವರು ನೆರವೇರಿಸಲಾಯಿತು.



**ಬೈಲಹೊಂಗಲ :** ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ ಪ್ರಧಾನ ಕಚೇರಿಯಲ್ಲಿ ದಿನಾಂಕ 14.11.2017 ರಂದು ಸಹಕಾರ ಸಪ್ತಾಹದ ಅಂಗವಾಗಿ ಧ್ವಜಾರೋಹಣವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ



**ಹೊಸಪೇಟೆ :** ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ ಇದರ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ವೀರಭದ್ರಪ್ಪ ಹಾಗೂ ಉಪಾಧ್ಯಕ್ಷರಾಗಿ ಡಾ: ಎಸ್ ಶಿವಾನಂದ ರವರು ಆಯ್ಕೆಯಾಗಿದ್ದಾರೆ.



ನವಶಕ್ತಿ ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು.

## ವೃತ್ತಿಪರ ನಿರ್ದೇಶಕರಾಗಿ ಆಯ್ಕೆ



**ವಿಜಯಪುರ :** ವಿಜಯಪುರ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ವೃತ್ತಿಪರ ನಿರ್ದೇಶಕರಾಗಿ ಶ್ರೀ ಎಮ್.ಜಿ. ಪಾಟೀಲ ರವರು ನೇಮಕರಾಗಿರುತ್ತಾರೆ.

## ಜೀವಮಾನ ಪ್ರಶಸ್ತಿಗೆ ಆಯ್ಕೆ



**ಹುಬ್ಬಳ್ಳಿ :** ಹೂಗಾರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಇದರ ಅಧ್ಯಕ್ಷರಾದ ಲೋಚನೇಶ ಬಸಪ್ಪ ಹೂಗಾರ ಇವರಿಗೆ 2018ನೇ ಸಾಲಿನ ಕರ್ನಾಟಕ ಸರ್ಕಾರದ ಮಾದ್ಯಮ ಅಕಾಡೆಮಿಯು ನೀಡುವ ಜೀವಮಾನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10.
ದೂ : 23378375–80, Web : www.souharda.coop, E-mail : souharda@souharda.coop

ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ತೆ–01/2018–19 ದಿನಾಂಕ:01.12.2018

**ಅತ್ಯಂತ ಮಹತ್ವದ್ದು**

ಇವರಿಗೆ :
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

**ವಿಷಯ : ಜಿಎಸ್‌ಟಿ ನೋಂದಣಿ ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಕುರಿತು.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳಿಗೆ ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಚಟುವಟಿಕೆಗಳ ಮೂಲಕ ಅರಿವನ್ನು ಉಂಟು ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಲಿದೆ. ಸಂಯುಕ್ತ ಸಹಕಾರಿಯು ಪ್ರತೀ ವರ್ಷ ಆಯೋಜಿಸುವ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯಲ್ಲಿ ಆದಾಯ ತೆರಿಗೆ ವಿಷಯದ ಕುರಿತು ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಕುರಿತು ತರಬೇತಿ/ಮಾಹಿತಿ ನೀಡಲಾಗುತ್ತಿದೆ. ಮೇ 2017ರ ಮಾಹೆಯಲ್ಲಿ ರಾಜ್ಯದ ವಿವಿಧೆಡೆ ಆದಾಯ ತೆರಿಗೆ ಕಾಯ್ದೆ ಹಾಗೂ ಜಿಎಸ್‌ಟಿಯ ಕುರಿತಂತೆ 14 ತರಬೇತಿಗಳನ್ನು ಕೂಡ ಸಂಯುಕ್ತ ಸಹಕಾರಿಯಿಂದ ಆಯೋಜಿಸಲಾಗಿತ್ತು. ನಂತರದಲ್ಲಿ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ (ಜಿಎಸ್‌ಟಿ) ಜಾರಿಗೆ ಬಂದ ನಂತರ ಈ ಕಾಯ್ದೆಯ ಕುರಿತು ಕೂಡ ಸಂಯುಕ್ತ ಸಹಕಾರಿಯಿಂದ 07 ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿತ್ತು. ಅಲ್ಲದೆ, ಜುಲೈ 2017ರ ಸ್ವಾಭಿಮಾನಿ ಸಹಕಾರಿಯಲ್ಲಿ ಜಿಎಸ್‌ಟಿ ನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಕುರಿತು ಲೇಖನವನ್ನು ಪ್ರಕಟಿಸಲಾಗಿತ್ತು.

ಆದರೆ, ಅನೇಕ ಸೌಹಾರ್ದ ಸಹಕಾರಿಗಳು ಇದುವರೆಗೆ ಜಿಎಸ್‌ಟಿ ನೋಂದಣಿ ಮಾಡಿಕೊಂಡಿರದ ಕುರಿತು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ ಹಾಗೂ ನಿಯಮಿತವಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಕೆ ಮಾಡುತ್ತಿಲ್ಲದಿರುವುದು ಕಂಡುಬಂದಿರುತ್ತದೆ. ಅನೇಕ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ರಿಟರ್ನ್‌ನ್ನು ನಿಗದಿತ ಸಮಯದೊಳಗೆ ಸಲ್ಲಿಕೆ ಮಾಡುತ್ತಿಲ್ಲವೆಂದು ಸಂಯುಕ್ತ ಸಹಕಾರಿಯ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ಸನ್ನದು ಲೆಕ್ಕಪರಿಶೋಧಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಈ ಕೆಳಕಂಡಂತೆ ಕ್ರಮವಿಡಲು ಸೂಚಿಸಿ ಈ ಸುತ್ತೋಲೆಯನ್ನು ನೀಡಲಾಗಿದೆ.

1. **ಜಿಎಸ್‌ಟಿ ನೋಂದಣಿ ಹಾಗೂ ಜಿಎಸ್‌ಟಿ ರಿಟರ್ನ್ ಸಲ್ಲಿಕೆ :**

- ದಿನಾಂಕ 01 ಜುಲೈ 2017ರಿಂದ ಜಾರಿಗೊಂಡಿರುವ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯು ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಯಾವುದೇ ಸಹಕಾರಿಯ ಒಟ್ಟೂ ವಹಿವಾಟು (ಆದಾಯ) ರೂ.20/–ಲಕ್ಷ ಮೀರಿದ್ದರೆ ಅಂತಹ ಸಹಕಾರಿಯು ಸರಕು ಮತ್ತು ಸೇವೆಗಳ ಅಧಿನಿಯಮ,2017ರಡಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ನಿಯಮಿತವಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಕೆಯನ್ನು ಮಾಡಬೇಕಾಗುತ್ತದೆ.
- ಗಮನಿಸಿ: ಸರಕು ಮತ್ತು ಸೇವೆಗಳ ಅಧಿನಿಯಮ,2017 ರಲ್ಲಿ ಒಟ್ಟೂ ವಹಿವಾಟು (ಆದಾಯ) ಎಂಬ ಶಬ್ದವನ್ನು ಬಳಸಲಾಗಿರುತ್ತದೆ. ಒಟ್ಟೂ ವಹಿವಾಟಿನಲ್ಲಿ ಸಹಕಾರಿಯು ಬಡ್ಡಿ ರೂಪದಲ್ಲಿ ಪಡೆಯುವ ಆದಾಯವು ಒಳಗೊಂಡಿರುತ್ತದೆ.
- ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸಹಕಾರಿಯು ಗಳಿಸುವ ಬಡ್ಡಿ ರೂಪದ ಆದಾಯಕ್ಕೆ ಸೇವಾ ತೆರಿಗೆ ಪಾವತಿಸಬೇಕಿರುವುದಿಲ್ಲ. ಆದರೆ, ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿ ಬಡ್ಡಿ ಸೇರಿದಂತೆ ಯಾವುದೇ ರೂಪದ ಒಟ್ಟೂ ವಹಿವಾಟು (ಆದಾಯ) ರೂ.20/– ಲಕ್ಷಗಳಾದಾಗ ಸರಕು ಮತ್ತು ಸೇವೆಗಳ ಅಧಿನಿಯ, 2017ರಡಿ ನೋಂದಣಿ ಮಾಡಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು https://www.gst.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

**2. ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ :**

- ಸಹಕಾರಿಯ ಒಟ್ಟು ವಾರ್ಷಿಕ ಆದಾಯ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇದ್ದಲ್ಲಿ, ಆದಾಯ ತೆರಿಗೆ ಕಾಯ್ದೆ ಕಲಂ 44ಎಬಿ ಅನ್ವಯ ಸನ್ನದು ಲೆಕ್ಕಪರಿಶೋಧಕರಿಂದ ದೃಢೀಕರಿಸಲ್ಪಟ್ಟ ನಮೂನೆ 3ಸಿಎ ಹಾಗೂ ನಮೂನೆ 3ಸಿಡಿಯಲ್ಲಿ ವಿವರವನ್ನು ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

- ಪ್ರತಿಯೊಂದು ಸಹಕಾರಿಯು ಆದಾಯ ತೆರಿಗೆ ಕಾಯ್ದೆ ಕಲಂ.139ರ ಅನ್ವಯ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸಹಕಾರಿಯು ಸದಸ್ಯರ ಜೊತೆಗೆ ಮಾಡುವ ಪತ್ತಿನ ವ್ಯವಹಾರದಿಂದ ಬರುವ ಆದಾಯಕ್ಕೆ ತೆರಿಗೆ ಕಡಿತಕ್ಕೆ ಅವಕಾಶ ಇರುತ್ತದೆ. ಆದರೆ ಸೌಹಾರ್ದ ಸಹಕಾರಿಗಳು ನಿಗದಿತ ಸಮಯದೊಳಗೆ ಆದಾಯ ತೆರಿಗೆ ರಿಟರ್ನ್ ಮಾಡಿದಲ್ಲಿ ಮಾತ್ರ ಕಡಿತವನ್ನು ಪಡೆಯಲು ಅರ್ಹರಾಗುತ್ತವೆ. ಮುಂದಿನ ವರ್ಷಗಳಲ್ಲಿ ಆದಾಯ ತೆರಿಗೆ ಇಲಾಖೆಯು ನೋಟೀಸ್ ನೀಡಿದಲ್ಲಿ, ಆದಾಯ ತೆರಿಗೆ ರಿಟರ್ನ್ ಮಾಡದಿದ್ದಲ್ಲಿ ತೆರಿಗೆ ಬಾದ್ಯತೆಗೆ ಒಳಪಡಬೇಕಾಗುತ್ತದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳು ಪ್ರತೀ ವರ್ಷ ನಿಗದಿತ ಅವಧಿಯೊಳಗೆ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ ಮಾಡುವುದು ಸೂಕ್ತವಾಗಿರುತ್ತದೆ.

**3. ನಾಮಮಾತ್ರ ಸದಸ್ಯರು ಹಾಗೂ ಸಹಸದಸ್ಯರೊಂದಿಗೆ ವ್ಯವಹಾರ :**

- ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರೊಂದಿಗೆ ಮಾಡುವ ಕ್ರೆಡಿಟ್ ಹಾಗೂ ಬ್ಯಾಂಕಿಂಗ್ ವ್ಯವಹಾರದಿಂದ ಗಳಿಸುವ ಆದಾಯಕ್ಕೆ, ಆದಾಯ ತೆರಿಗೆ ಕಲಂ.80ಪಿ(2)(ಎ)(i) ನಡಿಯಲ್ಲಿ ತೆರಿಗೆ ಕಡಿತಕ್ಕೆ ಅವಕಾಶ ಇದೆ. ಆದರೆ, ಸಹಸದಸ್ಯರು ಹಾಗೂ ನಾಮಮಾತ್ರ ಸದಸ್ಯರೊಂದಿಗೆ ವ್ಯವಹಾರ ಮಾಡಿರುವುದನ್ನು ಸದಸ್ಯೇತರರೊಂದಿಗಿನ ವ್ಯವಹಾರವೆಂದು ಪರಿಗಣಿಸಿ ಸಿಟಿಜನ್ ಕೋ ಆಪರೇಟೀವ್ ಸೊಸೈಟಿಯ ಆದಾಯಕ್ಕೆ ಕಲಂ.80ಪಿ(2)(ಎ)(i) ಅಡಿಯಲ್ಲಿ ತೆರಿಗೆ ಕಡಿತಕ್ಕೆ ಅವಕಾಶ ಇಲ್ಲವೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದನ್ನು ಆಧಾರವಾಗಿಟ್ಟುಕೊಂಡು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡಲು ಆರಂಭಿಸಿದ್ದಾರೆ.
- ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರೊಂದಿಗೆ ಮಾತ್ರ ವ್ಯವಹಾರವನ್ನು ಮಾಡಿದಲ್ಲಿ ಆದಾಯ ತೆರಿಗೆ ಕಡಿತ ಲಭ್ಯವಿರುತ್ತದೆ.
- ಒಂದು ವೇಳೆ ಸೌಹಾರ್ದ ಕಾಯ್ದೆಯ ಪ್ರಾವಧಾನದಂತೆ ನಾಮಮಾತ್ರ ಸದಸ್ಯರು, ಸಹಸದಸ್ಯರೊಂದಿಗೆ ಹಾಗೂ ಪ್ಯಾನ್ ಕಾರ್ಡ್ ನೀಡುವುದು, ಇ ಸ್ಟಾಂಪಿಂಗ್ ಸೇವೆ ಸೇರಿದಂತೆ ಸದಸ್ಯೇತರರೊಂದಿಗೆ ವ್ಯವಹಾರಗಳನ್ನು ಮಾಡಿದಲ್ಲಿ, ಆ ಕಾರ್ಯಚಟುವಟಿಕೆಗಳಿಂದ ಬಂದ ಲಾಭಕ್ಕೆ ಆದಾಯ ತೆರಿಗೆ ಕಾಯ್ದೆಯನ್ವಯ ತೆರಿಗೆ ಪಾವತಿಸಬೇಕಾಗುತ್ತದೆ.
- ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರಿಂದ ಠೇವಣಿ ಸ್ವೀಕರಿಸದಿರುವ ಕುರಿತು ಸಂಯುಕ್ತ ಸಹಕಾರಿಯು ದಿನಾಂಕ:21.05.2018ರಂದು ಪತ್ರ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ-03/2018-19ರ ಮೂಲಕ ಸುತ್ತೋಲೆಯನ್ನು ಕಳುಹಿಸಿದ್ದು ಗಮನಿಸಲು ಕೋರಿದೆ.

ಜಿಎಸ್‌ಟಿ ನೋಂದಣಿ ಮಾಡಿಸದ ಸೌಹಾರ್ದ ಸಹಕಾರಿಗಳು ಜಿಎಸ್‌ಟಿ ಕಾಯ್ದೆಯನ್ವಯ ವಿಧಿಸಬಹುದಾದ ದಂಡನೆಗೆ ಜವಾಬ್ದಾರರಾಗುತ್ತವೆ. ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ ಮಾಡದ ಸೌಹಾರ್ದ ಸಹಕಾರಿಗಳು ಯಾವುದೇ ತೆರಿಗೆ ವಿನಾಯಿತಿಯಲ್ಲಿ ಕಡಿತಗಳನ್ನು ಕ್ಲೈಮ್ ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಆದಾಯ ತೆರಿಗೆ ಕಾಯ್ದೆಯನ್ವಯ ದಂಡನೆಗೆ ಒಳಪಡುತ್ತವೆ. ಆದಾಯ ತೆರಿಗೆ ಸವಾಲುಗಳನ್ನು ಎದುರಿಸಬೇಕಾದರೆ ಸಹಕಾರ ಸಂಸ್ಥೆಗಳು ಕೂಡ ಆರ್ಥಿಕ ಶಿಸ್ತನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಸದಸ್ಯರೊಂದಿಗಿನ ವ್ಯವಹಾರ, ಸಹಸದಸ್ಯರು, ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರೊಂದಿಗಿನ ವ್ಯವಹಾರದ ಲೆಕ್ಕಾಚಾರವನ್ನು ಪ್ರತ್ಯೇಕವಾಗಿ ನಿರ್ವಹಿಸುವುದು, ಕೆವೈಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು, ನಿಗದಿತ ಸಮಯದಲ್ಲಿ ತೆರಿಗೆ ಸಂಬಂಧಿಸಿದ ರಿಟರ್ನ್ ಸಲ್ಲಿಕೆ ಮಾಡುವುದು, ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರುವುದು ಇವೆಲ್ಲ ಕೂಡ ಸಹಕಾರ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತವೆ. ಆದಕಾರಣ, ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಲಿಯವರು ಈ ಮೇಲ್ಕಂಡ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮವಿಡಲು ಸೂಚಿಸಿದೆ.

ವಂದನೆಗಳೊಂದಿಗೆ,

Karnataka State Souharda Federal Cooperative Ltd
Reg. No. RSR/SOU/ACT/136/
Regn 051/2001-02
dated 04-01-2002
Bangalore

(ಶರಣಗೌಡ ಜಿ ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# BALANCE SHEET ANALYSIS

Dr. S.A. Sidhanti

The cooperative credit societies cooperative banks operate their day to day operation like any other banks. The directors and employees of cooperative these societies cooperative banks shall be well versed with societies (liabilities) and application (assets) from time to time . These financial cooperative are supposed to prepare balance sheet every month and the necessary financial analysis of the societies / coopearive banks have to be done based on average working future.

The average balance sheet of 12 month of ABC cooperative credit societies along with profit and loss account of the society at the end of the year is depicted and according  financial analysis has been made, which may be utilised for analysing  their respective balance sheet.

## ಸಹಕಾರಿಗಳ ಆರ್ಥಿಕ ವಿಶ್ಲೇಷಣೆ

ಪತ್ತಿನ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಹಾಗೂ ಸಹಕಾರಿ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು/ಸಹಕಾರಿಗಳ (ಪ್ರತಿನಿತ್ಯ) ನಿರ್ವಹಿಸುತ್ತಿರುವ ಹಣಕಾಸಿನ ನಿರ್ವಹಣೆಯ ಬಗ್ಗೆ ಮಾಹಿತಿ ಹೊಂದಿರುವುದು ಅವಶ್ಯಕ. ಪ್ರತಿ ಮಾಹೆಯೂ ಅವರು ಹಣಕಾಸಿನ ತಃಖ್ತೆಗಳನ್ನು ಸಿದ್ದಪಡಿಸುವುದು ಅವಶ್ಯಕವಾಗುತ್ತದೆ. 12 ತಿಂಗಳುಗಳ ಸರಾಸರಿ ಆಧಾರದ ಮೇಲೆ ವಾರ್ಷಿಕ ಲಾಭ ನಷ್ಟ, ಬ್ಯಾಲನ್ಸ್ ಶೀಟ್‌ಗಳನ್ನು ಸಿದ್ದಪಡಿಸಿ ಸಂಸ್ಥೆಯ ಹಣಕಾಸಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕೆ ಅನುಕೂಲವಾಗುವುದಕ್ಕೆ ಡಾ. ಎಸ್.ಎ ಸಿದ್ದಾಂತಿಯವರು ಸಿದ್ದಪಡಿಸಿರುವ ಮಾದರಿಯನ್ನು ಎಲ್ಲಾ ಸಹಕಾರಿಗಳ ಅವಗಾಹಗಾಗಿ ಪ್ರಕಟಿಸಲಾಗಿದೆ. ಈ ಮಾದರಿಯನ್ನು ಅಧ್ಯಯನ ಮಾಡುವುದರಿಂದ ಒಂದು ಸಹಕಾರಿಯ ಹಣಕಾಸಿನ ಸ್ಥಿತಿಗತಿಗಳನ್ನು ಸುಲಭವಾಗಿ ತಿಳಿಯಬಹುದಾಗಿದೆ.

### ಪತ್ತಿನ ಸಹಕಾರಿಗಳ ಆರ್ಥಿಕ ವಿಶ್ಲೇಷಣೆ
### ಎ.ಬಿ.ಸಿ ಪತ್ತಿನ ಸಹಕಾರ ಸಂಘದ ಸರಾಸರಿ ಆಸ್ತಿ–ಜವಾಬ್ದಾರಿ ತಃಖ್ತೆ ದಿನಾಂಕ ............. ರಲ್ಲಿದ್ದಂತೆ

| ಕ್ರ.ಸಂ. | ಸಂಗ್ರಹಣೆ ಮೂಲ (ಜವಾಬ್ದಾರಿ) | ತಪಸೀಲು ಸಂಖ್ಯೆ | ಮೊಬಲಗು | ಕ್ರ.ಸಂ. | ನಿರ್ವಹಣೆಯ ಮೂಲ (ಆಸ್ತಿ) | ತಪಸೀಲು ಸಂಖ್ಯೆ | ಮೊಬಲಗು |
|---|---|---|---|---|---|---|---|
| 1 | ಷೇರು ಬಂಡವಾಳ | 1 | 5.00 | 1 | ನಗದು ಮತ್ತು ಬ್ಯಾಂಕಿನಲ್ಲಿ ಶಿಲ್ಕು | 6 | 3.00 |
| 2 | ನಿಧಿಗಳು | 2 | 10.00 | 2 | ವಿನಿಯೋಗಗಳು | 7 | 37.00 |
| 3 | ಠೇವಣಿಗಳು | 3 | 60.00 | 3 | ಸದಸ್ಯಸಾಲಗಳು | 8 | 55.00 |
| 4 | ಪಡೆದ ಸಾಲಗಳು | 4 | 20.00 | 4 | ಚರ–ಸ್ಥಿರ ಆಸ್ತಿಗಳು | 9 | 1.00 |
| 5 | ಇತರೆ ಜವಾಬ್ದಾರಿಗಳು | 5 | 5.00 | 5 | ಇತರೆ ಆಸ್ತಿಗಳು | 10 | 4.00 |
| | ಜುಮ್ಲಾ | | 100.00 | | ಜುಮ್ಲಾ | | 100.00 |

### ಎ.ಬಿ.ಸಿ ಪತ್ತಿನ ಸಹಕಾರ ಸಂಘದ ಆದಾಯ ತಃಖ್ತೆ ದಿನಾಂಕ 31ನೇ ಮಾರ್ಚ್ ................. ವರ್ಷಾ ಖೈರಿಗೆ (ಚಾಲ್ತಿ ವರ್ಷದ ಲಾಭ–ನಷ್ಟ ತಃಖ್ತೆ)

| ವೆಚ್ಚ | | ಆದಾಯ | |
|---|---|---|---|
| ವಿವರ | ಮೊಬಲಗು | ವಿವರ | ಮೊಬಲಗು |
| ಠೇವಣಿ ಮತ್ತು ಪಡೆದ ಸಾಲದ ಮೇಲೆ ಪಾವತಿಸಿದ ಬಡ್ಡಿ | 7.00 | ಸಾಲ ಮತ್ತು ವಿನಿಯೋಗಗಳ ಮೇಲಿನ ಬಡ್ಡಿ | 11.00 |
| ಆಡಳಿತಾತ್ಮಕ ವೆಚ್ಚ (ಸಂಬಳ. ಭತ್ಯೆ, ಇತ್ಯಾದಿ) | 2.00 | ಇತರೆ ಆದಾಯಗಳು | 1.00 |
| ಸಂಶಯಾಸ್ಪದ ಸಾಲಗಳಿಗೆ ಅವಕಾಶಗಳು | 1.00 | | |
| ಇತರೆ | 2.00 | | |
| ಜುಮ್ಲಾ | 12.00 | ಜುಮ್ಲಾ | 12.00 |

- ಪ್ರತಿಯೊಂದು ಸಹಕಾರ ಸಂಘವು ಸರಾಸರಿ ಆಸ್ತಿ – ಜವಾಬ್ದಾರಿ ತಃಖ್ತೆ ತಯಾರಿಸಲು ಪ್ರತಿ ತಿಂಗಳ ಆಸ್ತಿ– ಜವಬ್ದಾರಿ ತಃಖ್ತೆಗಳು ಸಿದ್ದಪಡಿಸಬೇಕು.
- ಪ್ರತಿ ವರ್ಷದ ಅಂತ್ಯಕ್ಕೆ ಸಿದ್ದಪಡಿಸಿದ ಅದಾಯ ತಃಖ್ತೆ (ಲಾಭ–ನಷ್ಟ ತಃಖ್ತೆ)ಯು ಆರ್ಥಿಕ ವಿಶ್ಲೇಷಣೆಗೆ ಅವಶ್ಯಕವಾಗಿರುತ್ತದೆ. ಆದರೂ, ಪತ್ತಿನ ಸಹಕಾರ ಸಂಸ್ಥೆಗಳು ಪ್ರತಿ ತಿಂಗಳ ಅಂತ್ಯಕೆ ಆದಾಯ– ವೆಚ್ಚದ ತಃಖ್ತೆಯನ್ನು ಸಿದ್ದಪಡಿಸಿ ಹೆಚ್ಚಳ–ಕಡಿಮೆ ಪ್ರಗತಿಯನ್ನು ಗುರುತಿಸಿ ಕೊಳ್ಳಬೇಕಾಗುತ್ತದೆ.

ಪತ್ತಿನ ಸಹಕಾರ ಸಂಘಗಳ ಅಡಾವೆ ಪತ್ರಿಕೆಯ ವಿಶ್ಲೇಷಣೆಯನ್ನು ಆಸ್ತಿ ಜವಾಬ್ದಾರಿ ಹಾಗೂ ಆದಾಯ ವೆಚ್ಚದ ತಃಖ್ತೆಯ ಆಧಾರದ ಮೇಲೆ ನಿರ್ಧರಿಸ

**ಸೂಚನೆ :**

- ಆರ್ಥಿಕ ವಿಶ್ಲೇಷಣೆ ಸರಾಸರಿ ದುಡಿಯುವ ಬಂಡವಾಳವನನು ಒಳಗೊಂಡಿರುತ್ತದೆ.
- ಸರಾಸರಿ ದುಡಿಯುವ ಬಂಡವಾಳ = 12ತಿಂಗಳ ಆಸ್ತಿ – ಜವಾಬ್ದಾರಿ ತಃಖ್ತೆಯ ಜುಮ್ಲಾ ಮೊಬಲಗು 12

ದುಡಿಯುವ ಬಂಡವಾಳ = ಷೇರುಬಂಡವಾಳ + ನಿಧಿಗಳು +ಠೇವಣಿಗಳು + ಪಡೆದ ಸಾಲಗಳು + ಇತರೆ ಜವಾಬ್ದಾರಿ ಅಥವಾ ಅಡಾವೆ ಪತ್ರಿಕೆಯ ಒಟ್ಟು ಮೊತ್ತ–ಕಾಂಟ್ರ ಐಟಂಗಳು (ಎರಡು ಕಡೆ ತೋರಿಸಿರುವ ಮೊಬಲಗು)

ಬೇಕಾಗುತ್ತದೆ.

**ಷೇರು ಬಂಡವಾಳ :** ಸದಸ್ಯತ್ವದ ಅವಶ್ಯಕತೆ ಇರುವ ಹಗೂ ನಂಬಿಕಸ್ಥ ಸದಸ್ಯರನ್ನು ನೊಂದಾಯಿಸಿಕೊಳ್ಳುವ ಮೂಲಕ ಷೇರು ಬಂಡವಾಳವನ್ನು ಹೆಚ್ಚಿಸಿಕೊಳ್ಳಬಹುದು. ತ್ವರಿತವಾಗಿ ಷೇರು ಬಂಡವಾಳವು ಹೆಚ್ಚಾಗದಂತೆ ಅವಶ್ಯಕವಾಗಿ ಎಚ್ಚರಿಕೆಯನ್ನು ವಹಿಸಬೇಕು. ಅದಿಲ್ಲದಿದ್ದಲ್ಲಿ ನೊಂದಾಯಿತ ಸದಸ್ಯರುಗಳು ಸಂಘದ ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸದೆ ಇರುವುದರಿಂದ ಸಂಘದ ಅಭಿವೃದ್ಧಿಗೆ ಪೂರಕವಾದ ಬೆಳವಣಿಗೆಯು ಸಾದ್ಯವಾಗುವುದಿಲ್ಲ.

**ನಿಧಿಗಳು :** ಶಾಸನ ಬದ್ದ ಆಪದ್ದನ ನಿಧಿಯು ಏರಿಕೆ ಕ್ರಮದಲ್ಲಿರಬೇಕು ಮತ್ತು ಮುಂದಿನ ವರ್ಷದಲ್ಲಿನ ಸ್ಥಿರತೆ ಮತ್ತು ಭದ್ರತೆಯ ದೃಷ್ಟಿಯಿಂದ ಇದು ಏರಿಕೆಯ ಕ್ರಮವನ್ನು ಸೂಚಿಸುತ್ತಿರಬೇಕು. ಬೈಲಾದಲ್ಲಿ ಅವಕಾಸವಿರುವಂತೆ ನಿರ್ದಿಷ್ಟ ನಿಧಿಗಳನ್ನು ಸೃಷ್ಟಿಸಬೇಕು ಮತ್ತು ವಿನಿಯೊಗಿಸಬೇಕು. ಯಾವ ಉದ್ದೇಶಕ್ಕಾಗಿ ನಿಧಿಗಳನ್ನು ಸೃಷ್ಟಿಸಲಾಗಿದೇಯೊ ಅದೇ ಉದ್ದೇಶಕ್ಕಾಗಿ ಬಳಸಬೇಕು. ಉದಾಹರಣೆಗೆ, ಕಟ್ಟಡ ನಿಧಿಯನ್ನು ಕಟ್ಟಡ ನಿರ್ಮಾಣಕ್ಕಾಗಿ ತೆಗೆದಿರಿಸಿದ್ದು ಕಟ್ಟಡಕಟ್ಟಲು ಉಪಯೊಗಿಸಬೇಕು. ಡಿವಿಡೆಂಡ್ ಸಮಿಕರಣ ನಿದಿಯನ್ನು ಅವಶ್ಯಕವಿರುವಷ್ಟು ಲಾಭ ದೊರೆಯದಿದ್ದಲ್ಲಿ, ಘೊಷಿಸಿದ ಲಾಭಾಂಶಕ್ಕೆ ಕೊರತೆ ಉಂಟಾದಲ್ಲಿ ಈ ನಿದಿಯನ್ನು ಬಳಸಿಕೊಳ್ಳಬಹುಮು, ಇತ್ಯಾದಿ.

**ಠೇವಣಿಗಳು :** ಸಂಘಗಳು ನಿಧಾನವಾಗಿ ಠೇವಣಿಗಳನ್ನು ಸಂಗ್ರಹಿಸಬೇಕು. ಸದಸ್ಯರುಗಳಿಗೆ ಉಳಿತಾಯ ಖಾತೆಯನ್ನು ಪ್ರಾರಂಭಿಸುವ ಅವಶ್ಯಕತೆ ಇದ್ದು, ಇದು ಕಡಿಮೆ ವೆಚ್ಚದ ಠೇವಣಿಯಾಗಿರುತ್ತದೆ. ಹಾಗೆಯೇ, ಅವಧಿ ಠೇವಣಿಗಳನ್ನು ಸಂಗ್ರಹಿಸುವುದರಿಂದ ಒಟ್ಟರೆ ವ್ಯವಹಾರದ ಬಲ ವೃದ್ಧಿಸುತ್ತದೆ. ಆದ್ದರಿಂದ ಬೇಡಿಕೆ ಠೇವಣಿಗಳನ್ನು (ಉಳಿತಾಯ, ಖಾತೆ, ರೆಕರಿಂಗ ಠೇವಣಿ, ಚಾಲ್ತಿಖಾತೆ) ಉತ್ತೇಜನ ಬೇಕಾಗುತ್ತದೆ. ಈ ಠೇವಣಿಗಳನ್ನು ಕಡಿಮೆ ಬೆಲೆಯ ಠೇವಣಿ ಎಂದು ಪರಿಗಣಿಸಲಾಗುತ್ತದೆ. ಬೇಡಿಕೆ ಠೇವಣಿಗಳನ್ನು ಹೆಚ್ಚು ಸಂಗ್ರಹಿಸಿದರೆ ಬಂಡವಾಳದ ಬೆಲೆ ಕಡಿಮೆಯಾಗುತ್ತದೆ. ಆದರೆ ಖಾಯಂ ಠೇವಣಿಯನ್ನು ಹೆಚ್ಚು ಸಂಗ್ರಸಿದರೆ ಬಂಡಾವಳದ ಬೆಲೆ ಹೆಚ್ಚಾಗುತ್ತದೆ.

ಪತ್ತಿನ ಸಹಕಾರ ಸಂಘಗಳು ಹಣಕಾಸು ಶಿಸ್ತನ್ನು ನಿರ್ವಹಿಸ ಬೇಕಗಿದ್ದು ಠೇವಣಿ ವಾಯಿದೆ ಮುಕ್ತಾಯಕ್ಕೆ ಅನುಗುಣವಾಗಿ ಸಾಲಗಳ ಮರು ಪಾವತಿ ಅವಧಿಯನ್ನು ಜೋಡಣೆ ಮಾಡಬೇಕು. ಹಣಕಾಸು ನಿರ್ವಹಣೆ ನಿಯಮದಂತೆ ಠೇವಣಿ ವಾಯಿದೆ ಮರುಪಾವತಿ ಅವಧಿಗಿಂತ ಹೆಚ್ಚಾಗಿರಬೇಕು. ಅಂದರೆ, ಅಸ್ತಿ ಮತ್ತು ಜವಾಬ್ದಾರಿ ನಿರ್ವಹಣೆ ನಿಯಮ ಂಐಒ ವನ್ನು ಪಾಲಿಸಬೇಕು.

**ಪಡೆದ ಸಾಲಗಳು :** ಅವಶ್ಯಕತೆಗೆ ಅನುಗುಣವಾಗಿ, ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಅಥವಾ ಇತರೆ ಯಾವುದೇ ಬ್ಯಂಕಿನಿಂದ (ಅವಶ್ಯಕವಾಗಿ ಅನುಮತಿ ಪಡೆಯುವುದರಿಂದ ಮತ್ತು ಆಡಳಿತ ಮಂಡಲಿ ನಿರ್ಣಯ ಮಾಡುವುದರಿಂದ) ಕಡಿಮೆ ಬಡ್ಡಿ ದರದಲ್ಲಿ ಹಣಪಡೆದು ಬಹುದು. ಹೀಗೆ ಪಡೆದ ಹಣವನ್ನು ಅವಶ್ಯಕ ವಿರುವ ಸದಸ್ಯರಿಗೆ ಹೆಚ್ಚಿನ ಬಡ್ಡಿದರದಲ್ಲಿ ಸಾಲ ನೀಡಬಹುದು. ಇದರಿಂದಾಗಿ, ಲಾಬದ ಪ್ರಮಾಣವನ್ನು ಹೆಚ್ಚಿಸಕೊಳ್ಳಬಹುದು. ವಸೂಲಾತಿಗೆ ಸಂಬಂಧಿಸಿದಂತೆ ಸರಿಯಾದ ಹತೋಟಿಯನ್ನು ಹೊಂದಿರಬೇಕು. ಇದರಿಂದಾಗಿ ಪತ್ತಿನ ಸಂಸ್ಥೆಗಳು ತಾವು ಬ್ಯಾಂಕಿನಿಂದ ಪಡೆದ ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಮರುಪಾವತಿಸಬಹುದು. ಕಾಲಕ್ಕೆ ಅನುಗುಣವಾಗಿ ಜಾಗರೂಕತೆಯಿಮದ ವ್ಯವಹಾರ ನಡೆಸಬೇಕು.

**ಇತರೆ ಜವಬ್ದಾರಿಗಳು :** ಇತರೆ ಜವಾಬ್ದಾರಿಗಳು ಮೂರನೆ ವ್ಯಕ್ತಿಗಳಿಗೆ/ ಸದಸ್ಯರಿಗೆ/ಸರ್ಕಾರ ಸಾಮ್ಯದ ಸಂಸ್ಥೆಗಳಿಗೆ ಪಾವತಿಸಲು ಬಾಕಿ ಇರುವ ಠೇವಣಿಗಳು ಮೇಲಿನ ಬಡ್ಡಿ, ಸಾಲಗಳ ಮೇಲಿನ ಬಡ್ಡಿ, ತೆರೆಗೆ ಮಾಡಿದ ಅವಕಾಶಗಳು ಇತ್ಯಾದಿ. ಇವುಗಳನ್ನು ಒಳಗೊಂಡಿರುತ್ತದೆ. ಇತರೆ ಜವಾಬ್ದಾರಿಗಳು ಸರಾಸರಿ ದುಡಿಯುವ ಬಂಡವಾಳದ ಶೇ.3 ರಿಂದ 4 ರಷ್ಟು ಪ್ರಮಾಣದಲ್ಲಿ ಇರುತ್ತದೆ. ಶೇಕಡವಾರು ಪ್ರಮಾಣವು ಹೆಚ್ಚಾದಂತೆಲ್ಲ, ದಿನ ನಿತ್ಯದ ವ್ಯವಹಾರದಲ್ಲಿ ಉದಾಸೀನತೆ ಜಾಸ್ತಿಯಾಗಿರುತ್ತದೆ ಎಂದು ಭಾವಿಸಲಾಗುತ್ತದೆ. ಇವುಗಳ ವಿಲೇವಾರಿಗೆ ಕೆಲವು ಆಡಳಿತಾತ್ಮಕ ಆದೇಶದ ಅವಶ್ಯಕತೆ ಇದ್ದು, ಪತ್ತಿನ ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ವಿಲೇವಾರಿಗೆ ಹೆಚ್ಚಿನ ನಿಗಾ ವಹಿಸಬೇಕಾಗುತ್ತದೆ.

**ನಗದು ಮತ್ತು ಬ್ಯಾಂಕಿನಲ್ಲಿ ಶಿಲ್ಕು:** ಪತ್ತಿನ ಸಹಕಾರ ಸಂಘಗಳು ತಮ್ಮ ಸಾಲ ಪಡೆಯುವ ಸದಸ್ಯರ ತುರ್ತು ಅವಶ್ಯಕತೆಗಾಗಿ ಸ್ವಲ್ಪ ಮಟ್ಟಿನ ಹಣವನ್ನು ಮೀಸಲಿಡಬೇಕಾಗುತ್ತದೆ. ಇದು ಸರಾಸರಿಯಾಗಿ ಕನಿಷ್ಠ ಪಕ್ಷ ಶೇ. 5 ರಿಂದ 6ರ ವರೆಗೆ ತಾವು ಸಂಗ್ರಹಿಸಿದ ಠೇವಣಿಯನ್ನು ಯಾವುದೇ ಸಂದರ್ಭದಲ್ಲಿ ಮೀಸಲಿಡಬೇಕಾಗುತ್ತದೆ. ಬೈಲಾ/ನಿಯಮಕ್ಕೆ ಒಳಪಟ್ಟು ಎಲ್ಲಾ ನಿಯಮಗಳನ್ನು ಅನುಸರಿಸಿ ಪತ್ತಿನ ಅವಶ್ಯಕತೆಯನ್ನು ಪೂರೈಸಲು ನಿಷ್ಕ್ರಿಯವಾಗಿರುವ ಹಣವನ್ನು ಬಳಸಬೇಕಾಗುತ್ತದೆ.

**ವಿನಿಯೋಗಗಳು :** ಸಹಕಾರ ಸಂಘಗಳ ನಿಬಂಧಕರು ಕಾಲಕಾಲಕ್ಕೆ ನೀಡುವ ಸೂತ್ತೋಲೆಗ ಒಳಪಟ್ಟು ಪತ್ತಿನ ಸಹಕಾರ ಸಂಘಗಳು ತಮ್ಮಲ್ಲಿರುವ ಆಪದ್ದನ ನಿಧಿಯನ್ನು ಸರ್ಕಾರಿ ಭದ್ರತಾ ಪತ್ರಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವಿನಿಯೋಗಿಸಬೇಕಾಗುತ್ತದೆ.

**ಸಾಲಗಳು :** ಪ್ರಾಪ್ತವಾಗುವ ಬಂಡವಾಳ ಸಂಗ್ರಹಣೆಯನ್ನು ಸಾಲಗಳಾಗಿ ಸದಸ್ಯರಿಗೆ ನೀಡಬಹುದು. ಸಾಲಗಳನ್ನು ನೀಡಲು ನಿಯಮಗಳನ್ನು ಪಾಲಿಸಬೇಕು. ಹಾಗೂ ದಾಖಲೆ ಪತ್ರಗಳು ತೃಪ್ತಿಕರವಾಗಿರಬೇಕು. ಸದಸ್ಯರ ಪೂರ್ತಿ ವಿವರದ ದಾಖಲೆ, ಸಾಲಗಳ ಉದ್ದೇಶ, ಮರು ಪಾವತಿ ಸಾಮರ್ಥ್ಯ, ಚಾರಿತ್ರ್ಯ ಮುಂತಾದವುಗಳನ್ನು ಕುಲಂಕುಶವಾಗಿ ಪರಿಶೀಲಿಸಬೇಕು ಮತ್ತು ಠೇವಣಿಯ ಅನುಪಾತವು ಠೇವಣಿಯ ಶೇ. 55 ರಿಂದ 70ರವರೆಗೆ ಇರಬಹುದು.

**ಚರ–ಸ್ಥಿರ ಆಸ್ತಿಗಳು :** ಪತ್ತಿನ ಸಂಸ್ಥೆಗಳು ತಮ್ಮ ವ್ಯವಹಾರಕ್ಕೆ ಅನುಗುಣವಾಗಿ ಕಂಪ್ಯೂಟರ್, ಪಿಠೋಪಕರಣ ಮತ್ತು ಸ್ಥಿರ ಸ್ವತ್ತುಗಳನ್ನು ಹೊಂದಬೇಕಾಗಿದ್ದು, ಸ್ಥಿರ ಸ್ವತ್ತುಗಳನ್ನು ಲೀಸ್ ಆಧಾರದ ಮೇಲೆ ಅಥವಾ ಬಾಡಿಗೆ ಆಧಾರದ ಮೇಲೆ ಪಡೆಯುವುದು ಸೂಕ್ತ ಎನಿಸುತ್ತದೆ.

ಪತ್ತಿನ ಸಂಸ್ಥೆಗಳು ಪ್ರಾರಂಭವಾಗಿ 15 ವರ್ಷಕ್ಕೂ ಹೆಚ್ಚಾಗಿದ್ದಲ್ಲಿ ಹಾಗೂ ಕಟ್ಟಡ ನಿಧಿಗಳು ಸಂಘದಲ್ಲಿ ಕ್ರೋಢಿಕೃತವಾಗಿದ್ದಲ್ಲಿ ಆಗ ಕಟ್ಟಡಗಳನ್ನು (ಪ್ರಧಾನ ಕಛೇರಿ ಮತ್ತು ಶಾಖೆಗಳು) ನಿರ್ಮಾಣ ಮಾಡಬೇಕಾಗುತ್ತದೆ ಅಥವಾ ಕೊಂಡುಕೊಳ್ಳಬೇಕಾಗುತ್ತದೆ. ಎಲ್ಲಾ ರೀತಿಯಿಂದಲೂ ಕಟ್ಟಡವನ್ನು ಬಾಡಿಗೆಗೆ ಪಡೆಯುವುದು ಅಥವಾ ಲೀಸ್ ಮೇಲೆ ಪಡೆಯುವುದು ಕಟ್ಟಡ ನಿರ್ಮಾಣಕ್ಕಿಂತ ಹೆಚ್ಚಿನ ಉಪಯೊಗವಾಗುತ್ತದೆ. ಕಾರಣ, ಕಟ್ಟಡಗಳ ಮೇಲೆ ವಿನಿಯೋಗಿಸುವ

ಬಂಡವಾಳವು ಆದಾಯ ರಹಿತ ಬಂಡವಾಳವಾಗುತ್ತದೆ ಹಾಗೂ ಇದರ ನಿರ್ವಹಣಾ ವೆಚ್ಚ, ತೆರಿಗೆ ಮುಂತಾದ ನಿರ್ವಹಣೆಯು ಕಷ್ಟಕರವಾಗುತ್ತದೆ. ಚರ–ಸ್ಥಿರ ಆಸ್ತಿಗಳ ಪ್ರಮಾಣವು ಸರಾಸರಿ ಬಂಡವಾಳದ ಶೇಕಡ 1 ರಷ್ಟನ್ನು ಮೀರಬಾರದು.

**ಇತರೆ ಆಸ್ತಿಗಳು :** ಇತರೆ ಆಸ್ತಿಗಳು ಮೂರನೆ ವ್ಯಕ್ತಿಗಳಿಂದ/ಸಾಲಗಾರರಿಂದ ಬರಬೇಕಾದ ಮೊಬಲಗಾಗಿದ್ದು, ಇವುಗಳು ಯಾವುವೆಂದರೆ, ಸದಸ್ಯ ಸಾಲಗಾರರಿಂದ ಬರಬೇಕಾದ ಬಡ್ಡಿ, ದಂಡ, ಹಾನಿ, ಮುಂತಾದವುಗಳನ್ನು ಪತ್ತಿನ ಸಹಕಾರ ಸಂಘಗಳು ಸರಾಸರಿ ದುಡಿಯುವ ಬಂಡವಾಳಕ್ಕೆ ಶೇ.3 ರಿಂದ 7ರಷ್ಟನ್ನು ಮೀರಬಹುದು. ಇತರೆ ಆಸ್ತಿಗಳು ಶೇಕಡ ಪ್ರಮಾಣ ಹೆಚ್ಚಾಂತೆಲ್ಲ ದೈನಂದಿನ ವ್ಯವಹಾರದ ಉದಾಸೀನತೆಯನ್ನು ತೋರಿಸುತ್ತದೆ. ಪ್ರಮಾಣ ಕಡಿಮೆಯಾದಂತೆಲ್ಲ ಆಡಳಿತದಲ್ಲಿ ಚುರುಕು, ಕಾರ್ಯಕ್ಷಮತೆ ಮತ್ತು ಬೆಳವಣಿಗೆಯನ್ನು ಪತ್ತಿನ ಸಂಘದಲ್ಲಿ ಗುರುತಿಸಬಹುದಾಗಿದೆ.

**ಆದಾಯ ತಃಖ್ತೆಗಳು :** ಚಾಲ್ತಿ ವರ್ಷದಲ್ಲಿ ವಸೂಲಾದ ಸಾಲ ಮತ್ತು ವಿನಿಯೋಗಗಳ ಮೇಲಿನ ಬಡ್ಡಿಯನ್ನು ಆದಾಯವೆಂದು ಪರಿಗಣಿಸಲಾಗುವುದು. (ವಸೂಲಾಗ ಬೇಕಾದ ಬಡ್ಡಿಯನ್ನು ಆದಾಯವೆಂದು ಪರಿಗಣಿಸಲಾಗದು) ಸಾಲದ ಮೊತ್ತ ಮತ್ತು ವಸೂಲಾತಿಯ ಪ್ರಮಾಣವನ್ನು ಹೆಚ್ಚಿಸಿ ಕೊಳ್ಳುವುದರ ಮೂಲಕ ಆದಾಯವನ್ನು ಹೆಚ್ಚಿಸಕೊಳ್ಳಬಹುದು.

- ಇತರೆ ಆದಾಯಗಳನ್ನು ಬಡ್ಡಿಯೇತರ ಆದಾಯವೆಂದು ಪರಿಗಣಿಸಲಾಗುವುದು. ಬಂಡವಾಳೇತರ ಆದಾಯವು ಸದಸ್ಯರಿಗೆ ಸೇವೆ ನೀಡುವ ಮೂಲಕ ಸಂಗ್ರಹಣೆಯಾಗುತ್ತದೆ. ಉದಾ: ಲಾಕರ್ ಬಾಡಿಗೆ, ಕಮಿಷನ್, ಪ್ರೊಸಸಿಂಗ್, ಫೀ ಇತ್ಯಾದಿ.
- ಠೇವಣಿ ಮತ್ತು ಪಡೆದ ಸಾಲಗಳಿಗೆ ಪಾವತಿಸಿದ ಬಡ್ಡಿಯನ್ನು ವೆಚ್ಚವೆಂದು ಪರಿಗಣಿಸಲಾಗುವುದು. ಷರಂತು, ಠೇವಣಿ ಮತ್ತು ಪಡೆದ ಸಾಲಗಳ ಮೇಲೆ ಪಾವತಿಸಬೇಕಾಗಿರುವ ಚಾಲ್ತಿ ವರ್ಷದ ಬಡ್ಡಿಯನ್ನು ಅವಕಾಶ ಮಾಡಿ ಲೆಕ್ಕ ಮಾಡಿಕೊಳ್ಳಬೇಕು.
- ಕಡಿಮೆ ಬಡ್ಡಿದರದ ಠೇವಣಿ ಮತ್ತು ಪಡೆದ ಸಾಲವು ವೆಚ್ಚದ ಹೊರೆಯನ್ನು




ಕಡಿಮೆಗೊಳಿಸುತ್ತದೆ.

- ಆಡಳಿತಾತ್ಮಕ ವೆಚ್ಚವು ವ್ಯವಹಾರದ ವೆಚ್ಚವಾಗಿರುತ್ತದೆ. ಆಡಳಿತ್ಮಾಕ ವೆಚ್ಚ + [ಆದಾಯದ ಒಟ್ಟು ಮೊತ್ತ (ಲಾಭ–ನಷ್ಟದ ಖಾತೆ)
- ಠೇವಣಿ ಮತ್ತು ಪಡೆದ ಸಾಲಕ್ಕೆ ಪಾವತಿಸಿದ ಬಡ್ಡಿ – ಸಂಶಯಸ್ಪದ ಆಸ್ತಿಗಳ ಮೇಲಿನ ಅವಕಾಶ –ನಿವ್ವಳ ಲಾಭ]
- ಪತ್ತಿನ ಸಹಕಾರ ಸಂಘಗಳ ಆಡಳಿತಾತ್ಮಕ ವೆಚ್ಚದ ಪ್ರಮಾಣವು ಸರಾಸರಿ ದುಡಿಯುವ ಬಂಡವಾಳದ ಶೇ 1.25% ರಿಂದ 1.50% ರಷ್ಟಿರಬೇಕು.
- ಎನ್.ಪಿ.ಎ. ಅವಕಾಶಗಳನ್ನು ಸಂಶಯಾಸ್ಪದ ಆಸ್ತಿಗಳಿಗೆ ಪೂರಕವಾಗಿ ತೆಗೆದಿರಸುತ್ತಿದ್ದು, ಇದನ್ನು ಪ್ರತಿ ವರ್ಷದ ಲಾಭದಲ್ಲಿ ತೆಗೆದಿರಿಸಿದಲ್ಲಿ ಸಂಭನೀಯ ಹಾನಿ ವೆಚ್ಚವನ್ನು (Risk Cost) ತಪ್ಪಿಸಬಹುದಾಗಿದೆ. ಸಂಭವನೀಯ ಹಾನಿವೆಚ್ಚದ ಪ್ರಮಾಣವು ಸರಾಸರಿ ದುಡಿಯುವ ಬಂಡವಾಳದ ಶೇ.5% ರಿಂದ 1%ಕ್ಕಿಂತ ಜಾಸ್ತಿಯಾಗದಂತೆ ಎಚ್ಚರ ವಹಿಸಬೇಕಾಗುತ್ತದೆ.

## ಸಹಕಾರಿ ರಂಗ ಭಾರತದ ಆರ್ಥಿಕ ಬಲ ವರ್ಧನೆಗೆ ಸಹಕಾರಿ

▶▶ **ಮಂಜುನಾಥ,** ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಸಹಕಾರಿ ರಂಗ ಕಾಯಕಲ್ಪ ಆಗಬೇಕು :** ಸಹಕಾರಿ ರಂಗದಲ್ಲಿರುವ ರಾಜಕಾರಣಿಗಳು ಮತ್ತು ಅವರು ಹೊಂದಿರುವ ಉನ್ನತ ಅಧಿಕಾರದ ಸಂಚಿನಿಂದ ಸೊರಗುತ್ತಿರುವುದು ಚಿಂತಿಸಬೇಕಾದ ವಿಷಯ. ಬಹುಶಃ ರಾಜಕಾರಣಿಗಳಿಂದ ಮತ್ತು ಅಧಿಕಾರ ಶಾಹಿಗಳಿಂದ ದೂರ ಇದ್ದರೆ ಸಹಕಾರಿ ವ್ಯವಸ್ಥೆ ಜನರ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಕೇಂದ್ರಗಳಾಗಿ ಬೆಳೆಯಬಲ್ಲದು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಆರ್.ಬಿ.ಐ/ ರಾಷ್ಟ್ರೀಕೃತ ಬ್ಯಾಂಕುಗಳಿಗೆ ನೀಡುವ ಬದಲು ಗ್ರಾಮಕ್ಕೊಂದು ಆಧುನಿಕತೆ, ತಂತ್ರಜ್ಞಾನ ಹೊಂದಿರುವ ಸಹಕಾರಿ ಸಂಸ್ಥೆಯನ್ನು ಅಧಿಕೃತವಾಗಿ ಪ್ರಾರಂಭಿಸಿ ಅದರಲ್ಲಿ ಸರಕಾರದ ಎಲ್ಲಾ ಆರ್ಥಿಕ ಯೋಜನೆಯನ್ನು ಜಾರಿಗೊಳಿಸಿದೇ ಆದಲ್ಲಿ ಅದು ನೇರವಾಗಿ ಜನಸಾಮಾನ್ಯರನ್ನು ಮುಟ್ಟುವುದು ಖಂಡಿತ.

ಪ್ರಧಾನಮಂತ್ರಿಗಳು ಹೇಳಿದಂತೆ ಜಗತ್ತಿನ ಆರ್ಥಿಕ ವೇಗಕ್ಕೆ ಭಾರತ ಇಂಜಿನ್ ಆದರೆ, ಗ್ರಾಮೀಣ ಭಾರತದ ಆರ್ಥಿಕ ವೇಗಕ್ಕೆ ಸಹಕಾರಿ ರಂಗ ಇಂಜಿನ್ ಆಗುವುದೇ? ಇಂತಹ ಆರ್ಥಿಕ ವ್ಯವಸ್ಥೆಯನ್ನು ಮತ್ತು ಸಹಕಾರಿ ವ್ಯವಸ್ಥೆಯನ್ನು ರೂಪಿಸುವುದು ಸರ್ಕಾರ ಮತ್ತು ಸಹಕಾರಿಗಳ ಕರ್ತವ್ಯವೂ ಹೌದು.

ಬಹುಶಃ ಒಂದು ಸದೃಢ ಸಹಕಾರಿ ಸಂಸ್ಥೆ ಒಂದು ಗ್ರಾಮೀಣ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಅಧಿಕಾರಿ ಆಗಬಲ್ಲುದು. ಆರ್ಥಿಕ ಉನ್ನತಿಯೊಂದಿಗೆ ಸಾಮಾಜಿಕ ಹಾಗೂ ಸಮುದಾಯದ ಉನ್ನತೀಕರಣ ಸಾಧ್ಯ. ಅತಿಯಾಗಿ ಬರೀ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಅವಲಂಬಿಸುವುದು ಒಂದು ದುರಂತಕ್ಕೆ ಕಾರಣವಾಗಬಹುದು ಎನ್ನುವುದು ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಸತ್ಯವಾಗುತ್ತಿದೆ. ಅಮೃತವು ಅತಿಯಾದಾಗ ವಿಷವಾಗಬಹುದು. ಭೌಗೋಳಿಕ ಅಭಿವೃದ್ಧಿ, ಸಮುದಾಯದ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿ ಜೊತೆಯಾಗಿ ಸಾಗಲು ಸಹಕಾರಿ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯವಿದೆ. ಒಬ್ಬ ವ್ಯಕ್ತಿ ಶ್ರೀಮಂತ ಆಗದೆ ಪ್ರದೇಶ, ಸಮೂದಾಯ ಹಾಗೂ ಸಮಾಜದ ಶ್ರೀಮಂತಿಕೆ ಸಹಕಾರಿ ರಂಗದಲ್ಲಿ ಸಾಧ್ಯ.

| ಪತ್ತಿನ ಸಹಕಾರ ಸಂಘಗಳ ಆರ್ಥಿಕ ವಿಶ್ಲೇಷಣದ ತಂತ್ರಗಾರಿಕೆ | | | | |
|---|---|---|---|---|
| 1 | ಬಂಡವಾಳದ ಬೆಲೆ | ಠೇವಣಿ ಮತ್ತು ಪಡೆದ ಸಾಲಗಳಿಗೆ ಪಾವತಿಸಿದ ಬಡ್ಡಿ | X | 100 |
| | | ಸರಾಸರಿ ದುಡಿಯುವ ಬಂಡವಾಳ | | |
| 2 | ಆಸ್ತಿಗಳ ಮೇಲಿನ ಉತ್ಪತ್ತಿ | ಸಾಲ ಮತ್ತು ವಿನಿಯೋಗಗಳ ಮೇಲಿನ ವಸೂಲಾದ ಬಡ್ಡಿ | X | 100 |
| | | ಸರಾಸರಿ ದುಡಿಯುವ ಬಂಡವಾಳ | | |
| 3 | ಆಡಳಿತಾತ್ಮಕ ವೆಚ್ಚ | ಆಡಳಿತಾತ್ಮಕ ವೆಚ್ಚ | X | 100 |
| | | ಸರಾಸರಿ ದುಡಿಯುವ ಬಂಡವಾಳ | | |
| 4 | ಸಂಭನೀಯ ಹಾನಿವೆಚ್ಚ | ಸಂಶಯಾಸ್ಪದ ಸಾಲದ ಮೆಲಿನ ಅವಕಾಶ | X | 100 |
| | | ಸರಾಸರಿ ದುಡಿಯುವ ಬಂಡವಾಳ | | |
| 5 | ಇತರೆ ಆದಾಯ | ಸಂಗ್ರಹಣೆಯಾದ ಇತರೆ ಆದಾಯ | X | 100 |
| | | ಸರಾಸರಿ ದುಡಿಯುವ ಬಂಡವಾಳ | | |
| 6 | ಬ್ರೇಕ್ ಈವನ್ ಮಟ್ಟ | ಹೊರೆಗಳು<br>ಒಟ್ಟು ಆದಾಯ | X | ಒಟ್ಟು ವ್ಯವಹಾರ/ ಠೇವಣಿಗಳು/ |
| | ಪ್ರತಿ ವರ್ಷದ ಹೊರೆಗಳು (ರೂಗಳಲ್ಲಿ) | ಆಡಳಿತಾತ್ಮಕ ವೆಚ್ಚ (ರೂಗಳಲ್ಲಿ) + ಸಂಭವನೀಯ ಹಾನಿವೆಚ್ಚ (ರೂಗಳಲ್ಲಿ) – ಇತರೆ ಆದಾಯಗಲ್ಲಿ (ರೂಗಳಲ್ಲಿ) | | |
| | ಒಟ್ಟು ಆದಾಯ (ರೂಗಳಲ್ಲಿ) | ಬಡ್ಡಿ ವಸೂಲಾತಿ – ಬಡ್ಡಿ ಪಾವತಿ (ರೂಗಳಲ್ಲಿ) (ರೂಗಳಲ್ಲಿ) | | |

ಇದಕ್ಕೆ ಸಂಬಂಧಿಸಿದಂತೆ ಸರಾಸರಿ ಬಂಡವಾಳವನ್ನು ಈ ಹಿಂದೆ ಅಡಾವೆ ಪತ್ರಿಕೆಯಲ್ಲಿ ತಿಳಿಸದಂತೆ ರೂ.100 ಲಕ್ಷಗಳಾಗಿರುತ್ತದೆ.

ಅಂದರೆ ಸರಾಸರಿ ದುಡಿಯುವ ಬಂಡವಾಳ = 12ತಿಂಗಳ ಅಡಾವೆ ಪತ್ರಿಕೆಯ ಸರಾಸರಿ ಮೊಬಲಗು.

= ರೂ 100 ಲಕ್ಷ

ಸರಾಸರಿ ಅಡಾವೆ ಪತ್ರಿಕೆ ಮತ್ತು ಆದಾಯ ತಃಖ್ತಿಗಳ ಆಧಾರದ ಮೇಲೆ ಆರ್ಥಿಕ ವಿಶ್ಲೇಷಣೆಯನ್ನು ಮೇಲಿನ ಅಂಶ ಹಾಗೂ ಸೂತ್ರಗಳನ್ನು ಉಪಯೊಗಿಸಿಕೊಂಡು ವಿವರಿಸಬಹುದಾಗಿದೆ.

| ಆರ್ಥಿಕ ವಿಶ್ಲೇಷಣೆ | | | | |
|---|---|---|---|---|
| | ಅಂಶಗಳು | ಸೂತ್ರಗಳು | ಮೊಬಲಗು | ಶೇಕಡವಾರು |
| 1 | ಬಂಡವಾಳದ ಮೇಲೆ | ಠೇವಣಿ ಮತ್ತು ಪಡೆದ ಸಾಲಗಳಿಗೆ ಪಾವತಿಸಿದ ಬಡ್ಡಿ | 7 | 7% |
| 2 | ಆಸ್ತಿಗಳ ಮೇಲಿನ ಉತ್ಪತ್ತಿ | ಸಾಲ ಮತ್ತು ವಿನಿಯೋಗಗಳ ಮೇಲೆ ವಸೂಲಾದ ಬಡ್ಡಿ | 11 | 11% |
| 3 | ಆಡಳಿತಾತ್ಮಕ ವೆಚ್ಚ (ಲಾಭ–ನಷ್ಟ ತಃಖ್ತೆಯಲ್ಲಿ ಖರ್ಚ ಹಾಕಿದ ಮೊಬಲಗು) | ಆಡಳಿತಾತ್ಮಕ ವೆಚ್ಚ | 2 | 2% |
| 4 | ಸಂಭವನೀಯ ಹಾನಿ ವೆಚ್ಚ | ಎನ್.ಪಿ.ಇ ಅವಕಾಶಗಳು | 1 | 1% |
| 5 | ಇತರೆ ಆದಾಯಗಳು | ಇತರೆ ಆದಾಯ ಸಂಗ್ರಹಣೆ ಸರಾಸರಿ ದುಡಿಯುವ ಬಂಡವಾಳ (100) | 1/100X100 | 1% |
| ಸೂಚನೆ : ಮೇಲಿನ ಐದು ಅಂಶಗಳಲ್ಲಿ ಸರಾಸರಿ ದುಡಿಯುವ ಬಂಡವಾಳ (ರೂ 100 ಲಕ್ಷ) ಛೇದದಲ್ಲಿ ಸಾಮಾನ್ಯವಾಗಿರುತ್ತದೆ. | | | | |
| 6 | ಆರ್ಥಿಕ ಅಂತರ | ಆಸ್ತಿಗಳ ಮೇಲಿನ ಉತ್ಪತ್ತಿ – | | 4% |
| 7 | ನಿವ್ವಳ ಅಂತರ | =ಆರ್ಥಿಕ ಅಂತರ – ಆಡಳಿತಾತ್ಮಕ ವೆಚ್ಚ<br>– ಸಂಭವನೀಯ ಹಾನಿವೆಚ್ಚ<br>+ ಇತರೆ ಆದಾಯಗಳು | +4% –2% –1% | 2% |

| | | | | |
|---|---|---|---|---|
| 8 | ಬ್ರೇಕ್ ಈವನ್ ಮಟ್ಟ | ಹೊರೆಗಳು<br>ಆರ್ಥಿಕ ಆದಾಯ | | |
| | | = ಆಡಳಿತಾತ್ಮಕ ವೆಚ್ಚ +ಸಂಭವನೀಯ ಹಾನಿವೆಚ್ಚ – ಇತರೆ ಆದಾಯ | | |
| | | ಬಡ್ಡಿ ವಸೂಲಿ – ಬಡ್ಡಿ ಪಾವತಿ<br>ಠೇವಣಿ / ಸಾಲಗಳು/ ಒಟ್ಟುವ್ಯವಹಾರ/ ಪಡೆದ ಸಾಲಗಳಿಂದ ನೀಡಿದ ಸಾಲಗಳ ಹೊರತಾಗಿ ಸಾಲ ಬಾಕಿ | | |
| | | ರೂ 2+1–1 (60+35) / 60/35 ರೂ 11– ರೂ7 | | |
| | | 1/4 X 95 /60 /35 | | |
| | | ಬ್ರೇಕ್ ಈವನ್ ಮಟ್ಟ (ಒಟ್ಟು ವ್ಯವಹಾರ) | = 23.75 | |
| | | ಬ್ರೇಕ್ ಈವನ್ ಮಟ್ಟ (ಠೇವಣಿ) | = 15.00 | |
| | | ಬ್ರೇಕ್ ಈವನ್ ಮಟ್ಟ (ಸಾಲ) | = 8.75 | |

**ವ್ಯಾಖ್ಯಾನಗಳು :**

1. ಆರ್ಥಿಕ ಅಂತರ: ಆರ್ಥಿಕ ಅಂತರದಲ್ಲಿ ನಿಧಾನವಾಗಿ ಹಾಗೂ ಸ್ಥಿರವಾಗಿ ಹೆಚ್ಚಿಸಕೊಳ್ಳಬೇಕು. ಅಂತಯೇ ಬಂಡವಾಳದ ಮೇಲಿನ ವೆಚ್ಚವನ್ನು ನಿರ್ದಿಷ್ಟ ಅವಧಿಯ ಅಂತರದಲ್ಲಿ ಕಡಿಮೆ ಬಡ್ಡಿದರದ ಠೇವಣಿ ಸಂಗ್ರಹಣೆ, ಶೇರು ಬಂಡವಾಳ ಮತ್ತು ನಿಧಿಗಳನ್ನು ಹೆಚ್ಚಿಸಕೊಳ್ಳುವ ಮೂಲಕ ಕಡಿಮೆಗೊಳಿಸಬಹುದು. ಯಾವುದೇ ಕಾರಣಕ್ಕೂ ಸದಸ್ಯರ ಸಾಲಗಳ ಮೇಲಿನ ಬಡ್ಡಿದರ ಹೆಚ್ಚಿಸುವುದನ್ನು ತಡೆಹಿಡಿಯಬೇಕು. ಅದಿಲ್ಲದಿದ್ದರೆ, ಸಾಲಗಳು ಅನುಮಾನಾಸ್ಪದ ಆಸ್ತಿಗಳಾಗಿ ಬದಲಾಗುತ್ತದೆ. ಸರಾಸರಿ ದುಡಿಯುವ ಬಂಡವಾಳ ಶೇ 4% ರಿಂದ 5% ರವರೆಗಿನ ಆರ್ಥಿಕ ಅಂತರವನ್ನು ಉತ್ತಮವಾದುದೆಂದು ಹೇಳಬಹುದು. ಏನಾದರು ಹೆಚ್ಚು/ಕಡಿಮೆಯಾದಲ್ಲಿ ಅದು ದಶಾಂಶದಲ್ಲಿರುತ್ತದೆ.

2. ನಿವ್ವಳ ಅಂತರ: ನಿವ್ವಳ ಅಂತರವನ್ನು ಸೂಕ್ಷ್ಮ ದತ್ತಾಂಶದಲ್ಲಿ ಈ ಕೆಳಗಿನ ಅಂಶಗಳ ಮೂಲಕ ವಿಸ್ತರಿಸಕೊಳ್ಳಬಹುದು.

- ಆರ್ಥಿಕ ಅಂತರವನ್ನು ಹೆಚ್ಚಿಸಿಕೊಳ್ಳುವುದರಿಂದ.
- ಬಂಡಾವಳದ ಮೇಲಿನ ಬೆಲೆಯನ್ನು ಕಡಿಮೆಗೊಳಿಸುವುದರಿಂದ (ಬಂಡವಾಳೇತರ ವೆಚ್ಚವನ್ನು ಕಡಿಮೆಗೊಳಿಸುವುದು / ಆದಾಯ ಸೋರಿಕೆಯನ್ನು ತಡೆಗಟ್ಟುವುದು. (ಐದು ವರ್ಷಗಳ ಅಂತರದ ಅವಧಿಯಲ್ಲಿ ಬಂಡವಾಳೇತರ ವೆಚ್ಚವನ್ನು ಯಾವ ಕ್ಷೇತ್ರದಲ್ಲಿ ಕಡಿಮೆಗೊಳಿಸಬೇಕೆಂದನ್ನು ಅಭ್ಯಸಿಸಬೇಕು)
- ಅನುಮಾನಾಸ್ಪದ ಸಾಲಗಳ ಮೇಲೆ ಅವಕಾಶ ಕಲ್ಪಿಸುವುದನ್ನು ಕಡಿಮೆಗೊಳಿಸುವ ಸಲುವಾಗಿ ವಸೂಲಾತಿ ಪ್ರಮಾಣವನ್ನು ಹೆಚ್ಚಿಸುವ ಮೂಲಕ.
- ಗ್ರಾಹಕರ ಸೇವೆಯನ್ನು ಚುರುಕುಗೊಳಿಸುವ ಮೂಲಕ ಇತರ ಆದಾಯವನ್ನು ಹೆಚ್ಚಿಸಕೊಳ್ಳಬೇಕು. ಅವುಗಳೆಂದರೆ, ವಿಮಾ ಪಾಲಿಸಿ ಮಾರಾಟ (ಸಾಮಾನ್ಯ ವಿಮಾ ನಿಗಮ) (ಇ–ಸ್ಟಾಂಪಿಂಗ್, ಮೊಬೈಲ್ ಸಿಮ್ ಕಾರ್ಡುಗಳ ಮಾರಾಟ ಇತ್ಯಾದಿ.
- ಬ್ರೇಕ್ ಈವನ್ ಮಟ್ಟ – ಲಾಭವೂ ಅಲ್ಲದ ನಷ್ಟವೂ ಅಲ್ಲದ ಸ್ಥಿತಿಯನ್ನು ಗುರುತಿಸಲು ಉಪಯೋಗಿಸುವ ಅಂಶ.
- ಕನಿಷ್ಠ ವಹಿವಾಟು ವ್ಯವಹಾರದಮ ಬ್ರೇಕ್ ಈವನ್ ಮಟ್ಟವನ್ನು ವಿವರಿಸುತ್ತದೆ. (ವ್ಯವಹಾರ) ಅಂದರೆ, ಕನಿಷ್ಠ ಠೇವಣಿ + ಸಾಲ (ವ್ಯವಹಾರ) ವಹಿವಾಟು ಲಾಭವೂ ಅಲ್ಲದ ನಷ್ಟವೂ ಅಲ್ಲದ ಸ್ಥಿತಿಯನ್ನು ವಿವರಿಸುತ್ತದೆ. ಯಾವುದೇ ವ್ಯವಹಾರವು ಬ್ರೇಕ್ ಈವನ್ ಮಟ್ಟಕಿಂತ ಹೆಚ್ಚಾತಿದ್ದಲ್ಲಿ ಲಾಭವು ಅಥವಾ ವಿರುದ್ಧ ಕ್ರಮದಲ್ಲಿ ನಷ್ಟವು ಉಂಟಾಗುತ್ತದೆ.
- ಕನಿಷ್ಠ ಠೇವಣಿ ಸಂಗ್ರಹಣೆಯು ಠೇವಣಿಯ ಬ್ರೇಕ್ ಈವನ್ ಮಟ್ಟವನ್ನು ವಿವರಿಸುತ್ತದೆ. (ಠೇವಣಿ ವ್ಯವಹಾರ) ಅಂದರೆ, ಕನಿಷ್ಠ ಠೇವಣಿ ಸಂಗ್ರಹಣೆ ವ್ಯವಹಾರವು ಲಾಭವೂ ಅಲ್ಲದ, ನಷ್ಟವೂ ಅಲ್ಲದ ಸ್ಥಿತಿಗೆ ಪೂರಕವಾಗಿರುತ್ತದೆ. ಯಾವುದೇ ಠೇವಣಿ ವಹಿವಾಟು ಬ್ರೇಕ್ ಈವನ್ ಮಟ್ಟಕ್ಕಿಂತ ಹೆಚ್ಚಾಗಿದ್ದಲ್ಲಿ ಲಾಭವೂ ಅಥವಾ ವಿರುದ್ಧ ಕ್ರಮದಲ್ಲಿ ನಷ್ಟವೂ ಉಂಟಾಗುತ್ತದೆ.
- ಕನಿಷ್ಟ ಸಾಲದ ವ್ಯವಹಾರವು ಸಾಲದ ಬ್ರೇಕ್ ಈವನ್ ಮಟ್ಟವನ್ನು ವಿವರಿಸುತ್ತದೆ. ಅಂದರೆ, ಕನಿಷ್ಟ ಸಾಲ ನೀಡಿಕೆಯು ಲಾಭವೂ ಅಲ್ಲದ ಅಥವಾ ನಷ್ಟವೂ ಅಲ್ಲದ ಸ್ಥಿತಿಗೆ ಪೂರಕವಾಗಿರುತ್ತದೆ. ಯಾವುದೇ ಸಾಲದ ವ್ಯವಹಾರವು ಬ್ರೇಕ್ ಈವನ್ ಮಟ್ಟಕ್ಕಿಂತ ಹೆಚ್ಚಾಗಿದ್ದಲ್ಲಿ ಲಾಭವೂ ಅಥವಾ ವಿರುದ್ಧ ಕ್ರಮದಲ್ಲಿ ನಷ್ಟವೂ ಉಂಟಾಗುತ್ತದೆ.
- ಪ್ರತಿ ಪತ್ತಿನ ಸಹಕಾರ ಸಂಘಗಳು ಲಾಭ ಹಾಗೂ ಸಬಲತೆಯನ್ನು ಹೆಚ್ಚಿಸಿಕೊಳ್ಳಲು ವ್ಯವಹಾರದ ಬ್ರೇಕ್ ಈವನ್ ಮಟ್ಟವನ್ನು ಆದಷ್ಟು ಜಾಗ್ರುತೆಯಾಗಿ ಹೊಂದುವುದು ಅವಶ್ಯಕತೆ ಇರುತ್ತದೆ. ಅಂದರೆ, ಕನಿಷ್ಠ ವ್ಯವಹಾರವನ್ನು ಎರಡು ತ್ರೈಮಾಸಿಕ (6 ತಿಂಗಳು) ಅವಧಿಯ ಮುನ್ನ ಹೆಚ್ಚಿಸಿಕೊಳ್ಳುವುದರಿಂದ ಉಳಿದ ಎರಡು ತ್ರೈಮಾಸಿಕ ಅವಧಿಯಲ್ಲಿ ಲಾಭಗಳಿಸಲು ಸಾಧ್ಯವಾಗುತ್ತದೆ. ಒಂದು ವೇಳೆ 3 ತ್ರೈಮಾಸಿಕ (9 ತಿಂಗಳು) ಅವಧಿಯ ನಂತರದಲ್ಲಿ ಬ್ರೇಕ್ ಈವನ್ ಮಟ್ಟ ಹೊಂದಿದ್ದಲ್ಲಿ ಇದು ಲಾಭಗಳಿಕೆಯ ಮೇಲ್ ತೀವ್ರವಾದ ಪರಿಣಾಮ ಬೀರುವುದಲ್ಲದೆ, ಕೊನೆಯ ಒಂದು ತ್ರೈಮಾಸಿಕ ಅವಧಿಯು ತುಂಬಾ ಅಪಾಯಕರನಾಗಿದ್ದು ನಷ್ಟವನ್ನು ಸಹ ಉಂಟುಮಾಡಬಹುದು.
- ಉತ್ತಮ ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ವ್ಯವಹಾರದ ಹೊರೆಯನ್ನು ಕಡಿಮೆ ಮಾಡವುದು (ಅಂಶ) ಮತ್ತು ಆರ್ಥಿಕ ಆದಾಯವನ್ನು ಹೆಚ್ಚಿಸುವುದು (ಛೇದ) ಮುಂತಾದ ವ್ಯವಹಾರಗಳ ಕೌಶಲ್ಯದಿಂದ ಸದಸ್ಯರಿಗೆ ಒದಗಿಸುವ ಸೇವೆಗೆ ಚ್ಯುತಿ ಬರದಹಾಗೆ ಮತ್ತು ತೊಂದರೆಯಾಗದಂತೆ ನಿರ್ವಹಿಸಬೇಕು.

# ರಾಜ್ಯದ ಸಹಕಾರಿ ಕಾಯ್ದೆಗಳ ಸಾಮಾನ್ಯತೆಗಳು

▸▸ ಎಂ.ಸಿ. ಪಾಲನೇತ್ರಪ್ಪ, ಎಂ.ಕಾಂ. ಎಲ್‌ಎಲ್‌ಬಿ.,

ಈಗಾಗಲೇ ಶೃತವಾಗಿರುವಂತೆ ನಮ್ಮ ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 (1959ರ ಕಾಯ್ದೆ) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997 (ಸೌಹಾರ್ದ ಕಾಯ್ದೆ) ಎಂಬ ಎರಡು ಸಹಕಾರ ಕಾಯಿದೆಗಳು ಜಾರಿಯಲ್ಲಿರುತ್ತದೆ. 1959ರ ಕಾಯಿದೆ ಅಡಿಯಲ್ಲಿ ಈಗ ಸುಮಾರು 35 ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳು ಮತ್ತು ಸೌಹಾರ್ದ ಕಾಯಿದೆ ಅಡಿಯಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. 1959ರ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳನ್ನು "ಸಹಕಾರ ಸಂಘ" ವೆಂತಲೂ ಮತ್ತು ಸೌಹಾರ್ದ ಕಾಯ್ದೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳನ್ನು "ಸಹಕಾರಿ" ಎಂತಲೂ ಆಯಾ ಕಾಯ್ದೆಗಳಲ್ಲಿ ನಿರೂಪಿಸಲಾಗಿದೆ.

ಈಗಾಗಲೇ ಶೃತವಾಗಿರುವಂತೆ 97ನೇ ಸಂವಿದಾನ ತಿದ್ದುಪಡಿ ಅಧಿನಿಯಮವನ್ನು ಸಂಸತ್ತಿನಲ್ಲಿ ಅಂಗೀಕರಿಸಲ್ಪಟ್ಟು ದಿನಾಂಕ : 12.01.2012ರಂದು ರಾಷ್ಟ್ರಪತಿಯವರ ಅಂಕಿತವನ್ನು ಪಡೆದು ಕೇಂದ್ರ ಸರ್ಕಾರವು ಈ ತಿದ್ದುಪಡಿ ಅಧಿನಿಯಮವನ್ನು ದಿನಾಂಕ : 15.02.2012ರಿಂದ ಜಾರಿಗೆ ತಂದಿರುತ್ತದೆ. ಆದರೆ ಇದರಲ್ಲಿರುವ ಅಂಶಗಳನ್ನು ರಾಜ್ಯ ಸರ್ಕಾರಗಳು ಮತ್ತು ಸಹಕಾರಿ ಸಂಘಗಳು ಸಂವಿಧಾನಕ್ಕೆ ವಿರೋಧವಿಲ್ಲದ ರೀತಿಯಲ್ಲಿ ತಮ್ಮ ತಮ್ಮ ಕಾಯಿದೆ ಅಥವಾ ಉಪವಿಧಿಗಳಲ್ಲಿ ದಿನಾಂಕ 15.02.2013ರೊಳಗಾಗಿ ಬದಲಾಯಿಸಿಕೊಳ್ಳಲು ಒಂದು ವರ್ಷ ಕಾಲ ಕಾಲಾವಕಾಶವನ್ನು ನೀಡಲಾಗಿತ್ತು. ಈ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವೂ ಸಹ ಕರ್ನಾಟಕದಲ್ಲಿರುವ ಎರಡು ಸಹಕಾರ ಕಾಯ್ದೆಗಳಾದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ಕ್ಕೆ ಹಲವಾರು ತಿದ್ದುಗಳನ್ನು ಮಾಡಿದ್ದು ಈ ತಿದ್ದುಪಡಿಗಳನ್ನು ದಿನಾಂಕ 11.02.2013ರಿಂದ ಜಾರಿಗೆ ತಂದಿರುತ್ತಾರೆ.

97ನೇ ಸಂವಿಧಾನ ತಿದ್ದುಪಡಿ ಅಧಿನಿಯಮ ಜಾರಿಗೆ ಬರುವುದಕ್ಕೆ ಮುನ್ನ ಕರ್ನಾಟಕದಲ್ಲಿರುವ ಎರಡೂ ಸಹಕಾರ ಕಾಯಿದೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದಕ್ಕೆ ನಾವು ಕಾಣುತ್ತಿದ್ದೆವು. ಆದರ, 97ನೇ ಸಂವಿಧಾನ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ನಂತರ ಕರ್ನಾಟಕ ಸರ್ಕಾರವೂ ಸಹ ಕರ್ನಾಟಕಲ್ಲಿರುವ ಈ ಎರಡೂ ಸಹಕಾರ ಕಾಯ್ದೆಗಳಿಗೂ ಹಲವಾರು ತಿದ್ದುಪಡಿಗಳನ್ನು ಮಾಡಿ ಆ ತಿದ್ದುಪಡಿಗಳನ್ನು ದಿನಾಂಕ 11.02.2013ರಿಂದ ಜಾರಿಗೆ ತಂದಿರುವುದರಿಂದ ಈ ಕಾಯ್ದೆಗಳಲ್ಲಿನ ಹಲವಾರು ವಿಷಯಗಳಲ್ಲಿ ಯಾವುದೇ ವಿಶೇಷವಾದ ವ್ಯತ್ಯಾಸಗಳು ಇಲ್ಲದಿರುವುದನ್ನು ಮತ್ತು ಏಕತಾನತೆಯನ್ನು ಕಾಣಬಹುದಾಗದೆ. ಅವುಗಳಲ್ಲಿ ಅತೀ ಮುಖ್ಯವಾದ ವಿಷಯಗಳನ್ನು ಈ ಕೆಳಗಿನ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಗಳಲ್ಲಿ ಕಾಣಬಹುದಾಗಿದೆ.

**1. ಪದಗಳ ಅರ್ಥ ವ್ಯಾಖ್ಯಾನ :** ಕಾಯಿದೆ, ನಿಯಮಗಳು, ನೋಂದಣಿ ಪ್ರಾಧಿಕಾರ (ರಿಜಿಸ್ಟ್ರಾರ್), ಲೆಕ್ಕಪರಿಶೋಧನಾ ನಿರ್ದೇಶಕ, ಸಹಕಾರ ಚುನಾವಣಾ ಆಯೋಗ, ಕಾರ್ಯಚರಣೆ ಪ್ರದೇಶ, ಉಪನಿಧಿಗಳು, ಸಹಕಾರಿ ಪತ್ತಿನ ವ್ಯವಸ್ಥೆ, ಸಂಘ/ಸಹಕಾರಿ, ಸದಸ್ಯ, ಸಾಮಾನ್ಯ ನಿಕಾಯ/ಸಭೆ, ನಿರ್ದೇಶಕರ, ಮಂಡಲಿ, ಪದಾಧಿಕಾರಿ, ಮುಖ್ಯ ಕಾರ್ಯನಿರ್ವಹಕ ಇತ್ಯಾದಿಗಳು.

**2. ಸಂಘ/ಸಹಕಾರಿಗಳ ನೋಂದಣಿ :** ನೋಂದಣಿ ಮಾಡಬಹುದಾಸ ಸಂಘ/ಸಹಕಾರಿಗಳು, ನೋಂದಣಿ ಅರ್ಜಿ, ನೋಂದಣಿ ಪ್ರಮಾಣ ಪತ್ರ, ಉಪವಿಧಿಗಳ ನೋಂದಣಿ, ಮತ್ತು ಉಪವಿಧಿಗಳ ತಿದ್ದುಪಡಿ ವಿಧಾನ ಇತ್ಯಾದಿ.

**3. ಸದಸ್ಯರ ಅರ್ಹತೆ, ಹಕ್ಕು ಮತ್ತು ಹೊಣೆಗಾರಿಕೆಗಳು :** ಸದಸ್ಯರ ಅರ್ಹತೆಗಳು, ಅನರ್ಹತೆಗಳು, ಸದಸ್ಯರಗಳು ಪಡೆಯಬಹುದಾದ ಕನಿಷ್ಠ ಸೇವೆಗಳು ಮತ್ತು ಸೌಲಭ್ಯಗಳು, ಮತಚಲಾವಣೆಗೆ ಅರ್ಹತೆಗಳು ಇತ್ಯಾದಿ.

**4. ಸಂಘ/ಸಹಕಾರಿಗಳ ಆಡಳಿತ ನಿರ್ವಹಣೆ :** ಸಾಮಾನ್ಯ ನಿಕಾಯ/ಸಭೆ ಮತ್ತು ವಿಶೇಷ ಸಾಮಾನ್ಯ ಸಭೆಗಳನ್ನು ಕರೆಯುವ ಅವಧಿ, ವಿಧಿವಿಧಾನಗಳು, ಆ ಸಭೆಗಳಿಗೆ ನೋಟೀಸ್ ನೀಡುವ ಅವಧಿ ಮತ್ತು ವಿಧಾನಗಳು, ಸಭೆ ನಡೆಸಲು ಬೇಕಾಗುವ ಸಭಾವಶ್ಯಕ ಸಂಖ್ಯೆ(ಕೋರಂ), ಸಭೆಯ ಅಧ್ಯಕ್ಷತೆ ವಹಿಸುವ ವ್ಯಕ್ತಿ, ಸಾಮಾನ್ಯ ಸಭೆ ಮತ್ತು ವಿಶೇಷ ಸಾಮಾನ್ಯ ಸಭೆಯ ಅಧಿಕಾರಗಳು ಮತ್ತು ಆ ಸಭೆಗಳಲ್ಲಿ ನಡೆಸಬೇಕಾದ ಕಲಾಪಗಳು ವ್ಯವಸ್ಥಾಪನೆಯಲ್ಲಿ ಸದಸ್ಯರು ಪಾಲ್ಗೊಳ್ಳುವಿಕೆ ಇತ್ಯಾದಿ.

**5. ನಿರ್ದೇಶಕ ಮಂಡಲಿ :** ಮಂಡಲಿ ರಚನೆ, ಸಂಸ್ಥೆಯ ಕಾರ್ಯ ವ್ಯಾಪ್ತಿ ಮೇರೆಗೆ ಮಂಡಲಿಯ ಸದಸ್ಯರುಗಳ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆ, ಪ್ರಾಥಮಿಕ ಮತ್ತು ಬಿಡಿ ಸದಸ್ಯರಿರುವ ಮಾಧ್ಯಮಿಕ ಹಾಗೂ ಇತರ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದ ಸದಸ್ಯರುಗಳಿಗೆ ನಿರ್ವಹಿಸಬೇಕಾದ ಮೀಸಲು ಸ್ಥಾನಗಳು, ಮಂಡಲಿ ಸದಸ್ಯರ ಮತ್ತು ಪದಾಧಿಕಾರಿಗಲ ಪದಾವಧಿ, ಮಂಡಲಿ ಸದಸ್ಯರ ಅರ್ಹತೆಗಳು ಮತ್ತು ಅನರ್ತೆಗಳು, ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು, ಮಂಡಲಿ ಚುನಾವಣೆ ವ್ಯವಸ್ಥೆ, ಮಂಡಲಿ ಸದಸ್ಯರ ರಾಜಿನಾಮೆ, ಮಂಡಲಿ ಸದಸ್ಯರ ಮತ್ತು ಪದಾಧಿಕಾರಿಗಳ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನಗಳು ಇತ್ಯಾದಿ.

**6. ಸಂಘ/ಸಹಕಾರಿಗಳು ಮಂಡಲಿ ಸದಸ್ಯರ ಚುನಾವಣೆ :** ಸಹಕಾರಿ ಚುನಾವಣಾ ಆಯೋಗ, ಚುನಾವಣೆ ನಡೆಸುವುದು, ಅಯೋಗದ ಅಧಿಕಾರ ಮತ್ತು ಕರ್ತವ್ಯಗಳು, ಚುನಾವಣಾ ಪ್ರಕ್ರಿಯಿಗಳು, ಚುನಾವಣೆಗಳನ್ನು ನಡೆಸುವ ಖರ್ಚ ಇತ್ಯಾದಿ.

**7. ಮುಖ್ಯ ಕಾರ್ಯನಿರ್ವಾಹಕ :** ನೇಮಕಾತಿ ವಿಧಾನಗಳು, ಅಧಿಕಾರಿಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಇತ್ಯಾದಿ.

**8. ಲೆಕ್ಕಪರಿಶೋಧನೆ, ತನಿಖೆ, ಪರಿವೀಕ್ಷಣೆ ಮತ್ತು ಸರ್ಚಾರ್ಜ್ :** ಲೆಕ್ಕಪರಿಶೋಧನೆ, ಲೆಕ್ಕಪರಿಶೋಧಕರ ನೇಮಕಾತಿ, ಲೆಕ್ಕಪರಿಶೋಧಕರ ಸಂಭಾವನೆ ನಿಗದಿ, ಲೆಕ್ಕಪರಿಶೋಧನಾ ಅವಧಿ ಮತ್ತು ವರದಿ ಸಲ್ಲಿಕೆ ಮತ್ತು ಲೆಕ್ಕಪರಿಶೋಧಕನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಇತ್ಯಾದಿ.

**9. ವಿವಾದಗಳು :** ವಿವಾದಗಳ ಇತ್ಯಾರ್ಥ, ಇತ್ಯಾರ್ಥಕ್ಕಾಗಿ ರಿಜಿಸ್ಟ್ರಾರಿಗೆ ಒಪ್ಪಿಸಬಹುದಾದ ವಿವಾದಗಳು, ಅವಧಿ ಪರಿಮಿತಿ ಇತ್ಯಾದಿ.

**10. ಸಮಾಪನೆ ಮತ್ತು ವಿಸರ್ಜನೆ :** ರಿಸರ್ವ್ ಬ್ಯಾಂಕಿನ ಅಪೇಕ್ಷೆ ಮೇರೆಗೆ ಒಂದು ಸಂಘ/ ಸಹಕಾರಿಯನ್ನು ಸಮಾಪನೆಗೊಳಿಸುವುದು ಸಮಾಪಕರು ಠೇವು ವಿಮಾನಿಗಮಕ್ಕೆ ತುಂಬಿ ಕೊಡುವುದು, ಸಮಾಪಕ ಮತ್ತು ಅವನ ಅಧಿಕಾರಗಳು ಮತ್ತು ನೋಂದಣಿ ರದ್ದತಿ ಇತ್ಯಾದಿ.

**11. ಅವಾರ್ಡ್. ಡಿಕ್ರಿ, ಆದೇಶ ಮತ್ತು ತೀರ್ಮಾನಗಳು ಅಮಲ್ಜಾರಿ :** ಹೊಣೆಭಾರ ಜಾರಿ, ಬಾಕಿಯಿರುವ ಮೊಬಲಗುಗಳ ವಸೂಲಿ, ಆದೇಶ ಮುಂತಾದವುಗಳ ಜಾರಿ, ಅವಾರ್ಡ್ ಅಥವಾ ಆದೇಶಕ್ಕೆ ಮುನ್ನ ಆಸ್ತಿಯ ಜಪ್ತಿ ಇತ್ಯಾದಿ.

**12. ಮೇಲ್ಮನವಿ, ಪರಿಷ್ಕರಣೆ :** ನ್ಯಾಯ ಮಂಡಲಿಗೆ ಮೇಲ್ಮನವಿಗಲು, ಸಹಕಾರಿಗಳ ಸದಸ್ಯರ ಪ್ರವೇಶದ ಬಗೆಗಿನ ಮೇಲ್ಮನವಿ, ಇತರ ಪ್ರಾಧಿಕಾರಿಗಳಿಗೆ ಮೇಲ್ಮನವಿ ಮತ್ತು ನ್ಯಾಯ ಮಂಡಳಿಯಿಂದ ಪರಿಷ್ಕರಣೆ ಇತ್ಯಾದಿ.

**13. ಅಪರಾಧಗಳು ಮತ್ತು ದಂಡನೆಗಳು :** ಅಪರಾಧಗಳು, ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ ಮತ್ತು ವಿಚಾರಣೆಯ ಅಪರಾಧಗಳು.

**14. ಇತರ ವಿಷಯಗಳು :** ತೊಡಕುಗಳನ್ನು ನಿವಾರಿಸುವ ಅಧಿಕಾರ, ನಿಯಮಗಳ ರಚನಾಧಿಕಾರ, ಉಳಿಸುವಿಕೆ ಇತ್ಯಾದಿ.

ಈ ಮೇಲಿನ ಎಲ್ಲಾ ವಿಷಯಗಳನ್ನೂ ಮತ್ತು ಅದಕ್ಕೆ ಪೂರಕವಾಗಿರುವ ಎರಡೂ ಕಾಯಿದೆಗಳಲ್ಲಿನ ಕಲಮುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸುಮಾರು ಶೇಕಡ 90ಕ್ಕೂ ಹೆಚ್ಚಿನ ವಿಷಯಗಳಲ್ಲಿ ಏಕರೂಪದ ಸಾಮ್ಯತೆಗಳನ್ನು ಕಾಣುತ್ತೇವೆ.

ನಿಮ್ಮ ಪ್ರಶ್ನೆ



ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

ಶ್ರೀಕಾಂತ ಬರುವೆ, ಪ್ರಾಂತೀಯ ಅಧಿಕಾರಿ, ಬೆಳಗಾವಿ.

**ಪ್ರಶ್ನೆ 01 : ಅವಾರ್ಡುಗಳನ್ನು ಪ್ರತಿವಾದಿಗಳಿಗೆ ಯಾರು ತಲುಪಿಸುವ ಕಾರ್ಯ ಮಾಡಬೇಕು?**

**– ಶ್ರೀನಿವಾಸ ಮೂರ್ತಿ, ಪಟ್ಟಣ ಸಹಕಾರಿ ಬ್ಯಾಂಕ್ ಮಸ್ಕಿ**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರಲ್ಲಿ ಈ ಕುರಿತು ಯಾವುದೇ ಪ್ರಾವಧಾನವಿರುವುದಿಲ್ಲ.

**ಪ್ರಶ್ನೆ 02 : ಎಕ್ಸೀಕ್ಯೂಷನ್ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸಹಕಾರ ಸಿಗುತ್ತಿಲ್ಲಾ ಇದಕ್ಕೆ ಯಾವ ಕ್ರಮ ಅಗತ್ಯ?**

**– ವಿನೋದ್ ಮಡಿವಾಳ, ವಿಭಾಗ ವ್ಯವಸ್ಥಾಪಕರು, ಸೆಂಟ್ ಮಿಲಾಗ್ರಿಸ್ ಪತ್ತಿನ ಸೌಹಾರ್ದ ಸಹಕಾರಿ ಶಿರಸಿ**

**ಉತ್ತರ :** ಜಮೀನಿನಲ್ಲಿ ಬೆಳೆದಿರುವ ಬೆಳೆಗಳ ಸಹಿತ ನಿರ್ದಿಷ್ಟ ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ನಿಯಮಗಳು, 2004ರ ನಿಯಮ 15(ಎಚ್)ರಂತೆ ಡಿಕ್ರಿದಾರ ಅಥವಾ ಖರೀದಾದಾರನು ಆಸ್ತಿಯ ಒಡೆತನದ ಸ್ವಾಧೀನ ಪಡೆಯಲು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 19ರಂತೆ ಕ್ರಮವಿಡಬಹುದಾಗಿದೆ.

**ಪ್ರಶ್ನೆ 03 : ಸೌಹಾರ್ದ ಸಹಕಾರಿಗಳಲ್ಲಿ ಒನ್ ಟೈಮ್ ಸೆಟಲ್‌ಮೆಂಟ್ ಅವಕಾಶ ಇದೇಯೆ?**

**– ಬಿ.ಎ. ಪಾಟೀಲ್, ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ಜಮಖಂಡಿ**

**ಉತ್ತರ :** ಈ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರಲ್ಲಿ ಯಾವುದೇ ಸ್ಪಷ್ಟ ಪ್ರಾವಧಾನವಿರುವುದಿಲ್ಲ. ಆದಾಗ್ಯೂ ಸಹಕಾರಿಯು ಈ ಕುರಿತು ಉಪವಿಧಿ ಅಥವಾ ಸಾಲದ ನಿಯಮಾವಳಿಗಳಲ್ಲಿ ಸೂಕ್ತ ಪ್ರಾವಧಾನ ಇಲ್ಲದಿದ್ದಲ್ಲಿ, ಒನ್‌ಟೈಮ್ ಸೆಟಲ್‌ಮೆಂಟ್ ನಿಯಮಗಳನ್ನು ರೂಪಿಸಿಕೊಂಡು, ಈ ನಿಯಮಗಳಿಗೆ ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು. ಈ ನಿಯಮಾವಳಿಯ ವ್ಯಾಪ್ತಿಯಲ್ಲಿ ಬರುವ ಸಾಲದ ಖಾತೆಗಳನ್ನು ಒನ್‌ಟೈಮ್ ಸೆಟಲ್‌ಮೆಂಟ್‌ಗೆ ಒಳಪಡಿಸಬಹುದಾಗಿರುತ್ತದೆ.

**ಪ್ರಶ್ನೆ 04 : ಹರಾಜು ಪ್ರಕ್ರಿಯೆಯಲ್ಲಿ ಹರಾಜು ಪಡೆದವರಿಗೆ ಹಣ ಪಾವತಿಸಲು ಎಷ್ಟು ಕಾಲವಕಾಶ ನೀಡಬಹುದು?**

**– ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ಜಮಖಂಡಿ**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(2) (ಎಚ್)ರನ್ವಯ ಸ್ಥಿರ ಸ್ವತ್ತಿನ ಹರಾಜಿನಲ್ಲಿ ಯಾವ ಬೆಲೆಗೆ ಕೊಂಡುಕೊಳ್ಳಲಾಯಿತು ಆ ಬೆಲೆಯ ಶೇ.25 ಸಮನಾದ ಮೊಬಲಗನ್ನು ಖರೀದಿದಾರನು ಕೊಂಡುಕೊಳ್ಳುವ ಕಾಲಕ್ಕೆ ಮಾರಾಟ ಅಧಿಕಾರಿಗೆ ಸಂದಾಯ ಮಾಡತಕ್ಕದ್ದು, ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 17(2) (ಐ)ರನ್ವಯ ಖರೀದಾರ ಉಳಿದ ಹಣವನ್ನು ಮಾರಾಟಪ್ರಮಾಣ ಪತ್ರದ ಸಲುವಾಗಿರುವ ಸಾಮಾನ್ಯ ಸ್ಟ್ಯಾಂಪಿಗಾಗಿ ಬೇಕಾದ ಮೊಬಲಗನ್ನು ಮಾರಾಟ ದಿನಾಂಕದಿಂದ 45 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು.

**ಪ್ರಶ್ನೆ 05 : ಆಸ್ತಿ ಹರಾಜು ಕೂಗಿ ಆಗಿದೆ, ಹರಾಜು ಪಡೆದವರು ಹಣ ತುಂಬುತ್ತಿಲ್ಲಾ ಇದಕ್ಕೆ ಮುಂದಿನ ಕ್ರಮವೇನು?**

**– ಸಂತೋಷ, ಗಾಯತ್ರಿ ಸೌಹಾರ್ದ ಸಹಕಾರಿ**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(2) (ಕೆ)ರನ್ವಯ ಹರಾಜು ಪಡೆದವರು ಹಣವನ್ನು ನಿಗದಿತ ಸಮಯದಲ್ಲಿ ಪಾವತಿಸಿದ್ದಲ್ಲಿ, ಮರು ಮಾರಾಟಕ್ಕೆ ಹೊಸದೊಂದು ಘೋಷಣೆ ಹೊರಡಿಸತಕ್ಕದ್ದು.

**ಪ್ರಶ್ನೆ 06 : ರಿಟ್ ಆಫ್ ಮ್ಯಾಂಡಮಸ್ ಅಂದರೆ ಏನು ಅದರ ವ್ಯಾಪ್ತಿ ಎಷ್ಟು?**

**– ಶ್ರೀ ಈಶ್ವರ, ವಿಪ್ರ ಸೌಹಾರ್ದ ಸಹಕಾರಿ ಶಿವಮೊಗ್ಗ**

**ಉತ್ತರ :** ರಿಟ್ ಆಫ್ ಮ್ಯಾಂಡಮಸ್ ಎಂದರೆ ಸಾರ್ವಜನಿಕ ಸ್ವರೂಪದಲ್ಲಿನ ಕರ್ತವ್ಯವನ್ನು ಮಾಡಲು ಸರ್ಕಾರಿ ಅಧೀನ ನ್ಯಾಯಾಲಯ ನಿಗಮ ಅಥವಾ ಸಾರ್ವಜನಿಕ ಪ್ರಾಧಿಕಾರಕ್ಕೆ ನ್ಯಾಯಾಲಯದಿಂದ ಮಾಡಲಾದ ಆದೇಶ ರೂಪದಲ್ಲಿ ನೀಡುವ ನ್ಯಾಯಾಂಗ ಪರಿಹಾರವಾಗಿರುತ್ತದೆ.

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 40



# RBI NEWS - NOVEMBER 2018

**K. Vittal Shetty,** Banking Consultant, kohimavittal@Hotmail.com, Mobile : 9845699904

**1. November 15, 2018 :** Real Time Gross Settlement (RTGS) System - Implementation of Positive Confirmation

Presently, the National Electronic Funds Transfer (NEFT) system provides for sending a positive confirmation to the remitter of the funds regarding completion of the funds transfer, thus giving an assurance to the remitter that the funds have been successfully credited to the beneficiary account. It has now been decided that banks will provide the same facility to the remitter of funds under the RTGS system as well.

2. Initially, the positive confirmation feature in RTGS would be available for member banks wherein both remitter and beneficiary banks access RTGS through thick client interface / SFMS member interface. Member banks are expected to communicate the same to their customers. The positive confirmation feature would be subsequently enabled for member banks accessing RTGS through other channels as well.

3. In this connection, a new message format (camt.059) is being introduced to communicate an acknowledgement to the remitting bank containing the date and time of credit to beneficiary account. This message would flow from the beneficiary bank to the remitter bank through the SFMS. After receiving the positive confirmation from the beneficiary bank, the remitter bank shall initiate an SMS and / or generate an e-mail to the remitter. The detailed process flow for the positive confirmation process is appended.

4. All banks are required to put in place systems to ensure straight-through-processing (STP) based confirmation processing. The beneficiary bank shall ensure that such confirmation message is sent as soon as the amount is credited to the beneficiary account in CBS while the confirmation message from the remitting bank shall be necessarily sent on a real time basis and in any case not beyond one hour after receipt of credit message from the beneficiary bank.

5. The system of sending positive confirmation to the customers shall be operationalised by banks at the earliest but not later than two months from the date of this circular.

6. These directions are issued by Reserve Bank of India, in exercise of the powers conferred by section 18 of Payment and Settlement Systems Act, 2007 (Act 51 of 2007).

Directions, Withdrawals, Penalties & Cancellation of Licences of Urban Co-operative Banks & Banks.

**1. Nov 02, 2018 :** The Karad Janata Sahakari Bank Ltd., Karad was placed under directions from the close of business on November 09, 2017 for a period of six months.

**2. Nov 05, 2018 :** RBI has extended the Directions issued to the Gomati Nagariya Sahakari Bank Ltd., Jaunpur (Uttar Pradesh)

**3. Nov 05, 2018 :** RBI, in the public interest, had issued directions to Vasantdada Nagari Sahakari Bank Ltd, Osmanabad, Maharashtra

**4. Nov 05, 2018 :** RBI has, on October 31, 2018, imposed a monetary penalty of ₹ 10 million on FINO Payments Bank Limited (the bank)

**5. Nov 09, 2018 :** RBI has issued certain Directions to Sikar Urban Co-operative Bank Ltd., Sikar

**6. Nov 09, 2018 :** RBI has placed the The Adoor Co-operative Urban Bank Ltd, Adoor, Kerala under Directions.

**7. Nov 14, 2018 :** RBI has imposed, by an order dated November 05, 2018, a monetary penalty of ₹ 30 million on The Jammu and Kashmir Bank Ltd. (the bank)

**8. Nov 14, 2018 :** RBI has imposed

**9. Nov 15, 2018 :** RBI had placed the Shivam Sahakari Bank Ltd., Ichalkaranji, Dist: Kolhapur, Maharashtra,

**10. Nov.20,2018 :** RBI in the public interest, had issued directions to Padmashri Dr. Vitthalrao Vikhe Patil Co-operative Bank Ltd., Nashik, Maharashtra

**11. Nov 27, 2018 :** RBI has imposed a monetary penalty of ₹ 5.00 lakh (Rupees Five lakh only) on The Kuppam Co-operative Town Bank Ltd.,Kuppam, Andhra Pradesh

**12. Nov 27, 2018 :** RBI has imposed a monetary penalty of ₹ 2.00 lakh (Rupees Two lakh only) on Sri Bharathi Co-operative Urban Bank Ltd., Hyderabad, Telangana,

**13. Nov 27, 2018 :** RBI has imposed a monetary penalty of ₹ 2.00 lakh (Rupees Two lakh only) on The Nellore Co-operative Urban Bank Ltd., Nellore, Andhra Pradesh

**14. Nov 27, 2018 :** RBI has imposed a monetary penalty of ₹ 2.00 lakh (Rupees Two lakh only) on The Uravakonda Co-operative Town Bank Ltd., Uravakonda, Andhra Pradesh,

**15. Nov 29, 2018 :** RBI has imposed a monetary penalty of ₹ 5,00,000/- (Rupees Five Lakh only) on Purvanchal Co-operative Bank Ltd., Ghazipur (U.P.)

**16. Nov 29, 2018 :** RBI imposed a monetary penalty of ₹ 5,00,000/- (Rupees Five Lakh only) on Urban Co-operative Bank Ltd., Mainpuri, Uttara Pradesh

**Source : www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010